# ಅಪರಂಜಿ

ತಿಳಿನಗೆಯ ಕಾರಂಜಿ

ಡಿಸೆಂಬರ್ 2019

## ಮಂಗನ ಕೈಗೆ ಮಾಣಿಕ್ಯ



ಬಿಡಿ ಪ್ರತಿ: ರೂ.10.00

ಪರಿಸರ ವಿಶೇಷಾಂಕ



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 37**
**ಸಂಚಿಕೆ – 3**
**ಡಿಸೆಂಬರ್– 2019**

**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ವಿ.ಆರ್. ನಾಥ್
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ

## *ಈ ಸಂಚಿಕೆಯಲ್ಲಿ.....*

| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ತುಂತುರು | ದಂನಳ | 7 |
| ಪ್ರವಾಹ ಕಾಲದ ಏಣಿ.. | ನಾಗೇಶ ಹೆಗಡೆ | 8 |
| ಅಹವಾಲು ಯಾರಿಗೆ ಕೊಡಲಿ | ಕೃಷ್ಣ ಸುಬ್ಬರಾವ್ | 10 |
| ಪ್ರೈವೇಟು ಕ್ಲೈಮೇಟು | ಸಂಜಯ ಹಾವನೂರ | 13 |
| ಯುವಕರಿವರೇ"ನಮ್ಮ" | ಭುವನೇಶ್ವರಿ ಹೆಗಡೆ | 17 |
| ಕಲ್ಯಾಣಪುರಿಯ ಕೆರೆಗಳು | ಚಿತ್ರಾ ರಾಮಚಂದ್ರನ್ | 19 |
| ಹ್ಯಾಟ್ಸ್ ಆಫ್ ಮೈ ಲೇಡಿ | ಸಿ.ಆರ್. ಸತ್ಯ | 23 |
| ಅನಿರೀಕ್ಷಿತ ಆಗಂತುಕರು | ಜಿ.ಎಸ್. ನಾಗನಾಥ್ | 25 |
| ಪರಿಸರ ಧ್ಯಾನ | ರಶ್ಮಿ ಜೆಜೂರಿಕರ್ | 28 |
| ಪರಿಸರ 'ಪ್ರಜ್ಞೆ' ತಪ್ಪಿದೆ | ಜಿ.ವಿ. ಗಣೇಶಯ್ಯ | 30 |
| ಏರುತ್ತಿರುವ ತಾಪಮಾನ.. | ಬೇಲೂರು ರಾಮಮೂರ್ತಿ | 34 |
| ಪರಿಸರ ರಕ್ಷಣೆಗೆ ನಿಂತ ಅಜ್ಜಿ | ಇ.ಆರ್. ರಾಮಚಂದ್ರನ್ | 37 |
| ಮೆಂಟಲ್ ಪಲ್ಯೂಶನ್ | ಎನ್. ರಾಮನಾಥ್ | 40 |
| ಭೂಮಿ ಬೆಚ್ಚಗಾದಾಗ | ಜಿ.ವಿ.ನಿರ್ಮಲ | 43 |
| ಹೆಂಗಿದ್ದೋನು ಹೆಂಗಾದ | ಎಚ್. ಗೋಪಾಲಕೃಷ್ಣ | 46 |
| ಪರಿಸರ ರಕ್ಷಣೆ ಅಂದ್ರೆ ಹೇಗೆ | ಡಾ. ಶ್ಯಾಮಲಾ ರವಿಶಂಕರ್ | 51 |

**ಮುಖಪುಟ ವ್ಯಂಗ್ಯಚಿತ್ರ : ಜಿ. ಎಸ್. ನಾಗನಾಥ್**
**ಒಳಪುಟ ವ್ಯಂಗ್ಯಚಿತ್ರಗಳು : ಜೇಮ್ಸ್ ವಾಜ್, ಜಿ. ಎಸ್. ನಾಗನಾಥ್, ಶೃಂಗೇರಿ ಸತೀಶ್ ಮತ್ತು ಇಂಟರ್ನೆಟ್**

*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. *ಸಂಪರ್ಕ* : email: koravanjiaparanji@gmail.com ದೂ: 9845264304

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080–26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



**ನಮ್ಮೆಲ್ಲರ ಮಾತೆಯಾದ ಪ್ರಕೃತಿದೇವಿಯ ರಕ್ಷಣೆಗೆ ಒಂದು ವಿಶೇಷಾಂಕ ತರುವ ಉತ್ಸಾಹವನ್ನು ಕಂಡು ಅಪರಂಜಿ ಖುಷಿ ಪಟ್ಟಳಂತೆ!!**

★★★★★

**"ಮರಗಳನ್ನು ಮರೆತರೆ ಮರಣ ಸನ್ನಿಹಿತ"**

**ಎಂಬ ಸ್ಲೋಗನ್ ದೆಹಲಿಯಲ್ಲೆಲ್ಲಾ ಮೊಳಗುತ್ತಿದೆಯಂತೆ!!**

★★★★★

ಮಳೆಯಲ್ಲೂ ಮೋಡಬಿತ್ತನೆಗೆ ಉತ್ಸಾಹ – ಪತ್ರಿಕೆ

**ನಿದ್ರಿಸುತ್ತಿರುವ ರೋಗಿಗೆ ನಿದ್ರೆ ಮಾತ್ರೆಕೊಟ್ಟಹಾಗೆ!!**

★★★★★

ಕಬ್ಬನ್ ಪಾರ್ಕಿನಲ್ಲಿ ಭವನ: ತೀವ್ರ ಪ್ರತಿಭಟನೆ – ಪತ್ರಿಕೆ

**ಪ್ರಕೃತಿಯ ಶ್ವಾಸಕೋಶಗಳು ಎಂಬ ಜಗಜ್ಜಾಹೀಗಾಗಿರುವ ಸತ್ಯ ನ್ಯಾಯಾಲಯವನ್ನೂ ಮುಟ್ಟುವಂತಾಗಲಿ ಎಂದು ಅಪರಂಜಿ ಮೊರೆಯಿಟ್ಟಳಂತೆ!!**

★★★★★

ಬೆಂಗಳೂರಿನ ನಾಗರಿಕರೊಬ್ಬರು ರಜಾ ದಿನಗಳಲ್ಲಿ ಕೇರಳದ ವೈನಾಡಿಗೆ ತೆರಳಿ ಎರಡೇ ದಿನಗಳಲ್ಲಿ ವಾಪಸ್ ಬಂದರಂತೆ!!

**ಪಾಪ! ಅಲ್ಲಿನ ಹವಾಮಾನ ಒಗ್ಗಲಿಲ್ಲವೇನೋ!!**

★★★★★

ಗಂಗೆ ಯಾವಾಗ ನಿರ್ಮಲವಾದಾಳು? – ಪತ್ರಿಕೆ

**ಯಕ್ಷಪ್ರಶ್ನೆ ಎಂದರೆ ಇದೇ ಇರಬಹುದು!!**

# ನಮ್ಮ ನಿಮ್ಮಲ್ಲಿ

● ಶಿವಕುಮಾರ್

ಪರಿಸರದ ಬಗ್ಗೆ ಕಾಳಜಿ ಇರಬೇಕು, ನಮ್ಮ ಮುಂದಿನ ಪೀಳಿಗೆಗೆ ಒಂದು ಆರೋಗ್ಯಯುತ ಪರಿಸರವನ್ನು ಉಳಿಸಬೇಕು ಎಂಬ ಹಂಬಲ ಇರುವವರಿಗೂ ಸಹಾ ಅದರ ಬಗ್ಗೆ ನಾವು ನಮ್ಮ ದಿನ ನಿತ್ಯ ಜೀವನದಲ್ಲಿ ಏನು ಮಾಡಬಹುದು ಎಂಬುದರ ಬಗ್ಗೆ ಸರಿಯಾದ ತಿಳುವಳಿಕೆ ಇರುವುದು ವಿರಳ. ಇಂತಹ ತಿಳುವಳಿಕೆ ಇದ್ದು ಅದನ್ನ ಕಾರ್ಯರೂಪಕ್ಕೆ ತರುತ್ತಿರುವ ಒಬ್ಬ ವಿಶೇಷ ವ್ಯಕ್ತಿಯೆಂದರೆ ನನ್ನ ಗೆಳೆಯ ಹಾಗೂ ಸಹಪಾಠಿ ಪ್ರಕಾಶ್. ನಾವಿಬ್ಬರೂ ಒಟ್ಟಿಗೆ ಇಂಜಿನಿಯರಿಂಗ್ ಮುಗಿಸಿದ ನಂತರ ಆಗಿದ್ದ ಹಲವೇ ಕಾರ್ಖಾನೆಗಳಲ್ಲಿ ಒಂದಾದ ಎಚ್.ಎಂ.ಟಿ. ಯಲ್ಲಿ ಕೆಲಸಕ್ಕೆ ಸೇರಿದೆವು. ಹಲವು ವರ್ಷಗಳು ಅಲ್ಲಿ ದುಡಿದು ಅಪಾರವಾದ ವೃತ್ತಿ ಅನುಭವವನ್ನು ಪಡೆದ ನಂತರ, ನಮ್ಮಿಬ್ಬರ ಹಾದಿ ಕವಲೊಡೆಯಿತು. ನಾನು ಪೀಣ್ಯದಲ್ಲಿ ಒಂದು ಯಂತ್ರ ವಿನ್ಯಾಸ ಕಾರ್ಖಾನೆಯನ್ನು ಸ್ಥಾಪಿಸಿ, ಜೊತೆ ಜೊತೆಗೆ ಅಪ್ಪ ನೆಟ್ಟ ಆಲದ ಮರ ಎಂಬ ಸಾಮತಿಯಂತೆ ಕೊರವಂಜಿಯ ಮಗಳು ಅಪರಂಜಿಯ ಹೊಣೆಹೊತ್ತು ಜೀವಯಾತ್ರೆಯ ಮಾರ್ಗವನ್ನು ಕಂಡುಕೊಂಡೆ. ಪ್ರಕಾಶ್ ಸಹಾ ಐ ಟಿ ಐ ಕೈಗಾರಿಕಾ ಕ್ಷೇತ್ರದಲ್ಲಿ ತನ್ನ ಸಣ್ಣ ಉದ್ದಿಮೆಯನ್ನು ಸ್ಥಾಪಿಸಿ ಹಲವು ವರ್ಷಗಳ ನಂತರ ನಾಮಫಲಕಗಳ ತಯಾರಿಕೆಯಲ್ಲಿ ಬಹುವಾಗಿ ಯಶಸ್ಸನ್ನು ಗಳಿಸಿ ಈಗ ನಾಡಿನಾದ್ಯಂತ ತನ್ನದೇ ಆದ ರಿಸಾರ್ಟ್‌ಗಳನ್ನು ಸ್ಥಾಪಿಸಿ ಅವುಗಳನ್ನು ಪರಿಸರ ಸ್ನೇಹಿರೀತಿಯಲ್ಲಿ ಯಶಸ್ವಿಯಾಗಿ ನಡೆಸುತ್ತಿದ್ದಾನೆ. ಕಳೆದ ಒಂದು ದಶಕದಲ್ಲಿ ನನಗೆ ಅವನೊಂದಿಗೆ ಅನೇಕ ಬಾರಿ ಈ ರಿಸಾರ್ಟ್ ಗಳಿಗೆ ಹೋಗಿ ಅಲ್ಲಿ ತಂಗುವ ಅವಕಾಶ ದೊರೆತಿದೆ. ಪ್ರತಿಬಾರಿಯೂ ಒಂದಲ್ಲ ಒಂದು ಹೊಸ ಪರಿಸರ ಸ್ನೇಹಿ ಬದಲಾವಣೆಗಳನ್ನು ಕಂಡು ಸಂತಸಪಟ್ಟಿದ್ದೇನೆ. ಇವನ್ನೆಲ್ಲಾ ಓದುಗರೊಂದಿಗೆ ಹಂಚಿಕೊಳ್ಳುವ ಉದ್ದೇಶದಿಂದ ಮೊನ್ನೆ ಪ್ರಕಾಶನೊಂದಿಗೆ ಒಂದು ಸಂದರ್ಶನ ಮಾಡಿ ಇಲ್ಲಿ ದಾಖಲಿಸಿರುವೆ.

''ನೋಡು ಶಿವು, ಈ ಸಂದರ್ಶನದ ಉದ್ದೇಶ ಪ್ರಚಾರ ಎಂಬ ತಪ್ಪು ಅಭಿಪ್ರಾಯ ಓದುಗರಲ್ಲಿ ಮೂಡುವ ಅಪಾಯ ಇದೆ ಅಂತ ಗೊತ್ತು ತಾನೆ. ಆದರೆ ನಿಮ್ಮ ಪತ್ರಿಕೆಯ ಉದ್ದೇಶ ಪ್ರಾಮಾಣಿಕವಾಗಿರೋದರಿಂದ, ಈ ಕುರಿತು ನನಗೆ ತೋಚಿದಷ್ಟನ್ನು ಹೇಳಿ ಮುಗಿಸುತ್ತೇನೆ. ಪಂಚಭೂತಗಳಿಂದ ಬಂದ ನಾವು ಅವನ್ನು ತ್ಯಜಿಸಿ ಹೋಗುವ ಮುನ್ನ ಆದಷ್ಟುಮಟ್ಟಿಗೆ ಅವುಗಳನ್ನ ಕಲುಷಿತಗೊಳಿಸದೇ ಇದ್ದ ಸ್ಥಿತಿಯಲ್ಲೇ ಬಿಟ್ಟುಹೋಗುವುದು ಬಹು ಮುಖ್ಯ ಎಂದು ನಾನು ನಂಬಿದ್ದೇನೆ. ಹಾಗಾಗಿ ಈ ರಿಸಾರ್ಟನ್ನು ನಿರ್ಮಿಸುವಾಗ ಪ್ರಾರಂಭದಿಂದಲೇ ಹಲವು ಚಿಂತನೆಗಳನ್ನು ಮೈಗೂಡಿಸಿಕೊಂಡೆ. ಪಂಚಭೂತಗಳಲ್ಲಿ ಮೊದಲನೆಯದು ಭೂಮಿ. ಈ ನೆಲವನ್ನು ನಾವು ಖರೀದಿಸಿದಾಗ ಅದು ನೊರಜುಗಲ್ಲುಗ್ಗಳಿಂದ ಕೂಡಿದ ಬರಡುಭೂಮಿಯಾಗಿತ್ತು. ಲಾರಿಗಟ್ಟಲೆ ಕೆಂಪುಮಣ್ಣನ್ನು ತರಿಸಿ ಭೂಮಿಯಮೇಲೆ ಹರಡಿ ಅದರಲ್ಲಿ ಗಿಡಗಳನ್ನು ನೆಟ್ಟದ್ದು ನಾವು ಮಾಡಿದ ಮೊದಲ ಕೆಲಸ. ಪ್ರಾರಂಭದಲ್ಲಿ ಹತ್ತಿರದ ಕೆರೆಯಿಂದ ನೀರನ್ನು ಬಳಸಿದರೂ ಅನಂತರ ನಮ್ಮ ನಿವೇಶನದಲ್ಲೇ ಮಳೆ ನೀರು ಸಂಗ್ರಹಣೆಗೆ ಕೊಳಗಳನ್ನು ಅಗೆಸಿದೆವು. ಒಟ್ಟಿನಲ್ಲಿ ಭೂಮಿ ಫಲವತ್ತಾಗಿ ಬದಲಾಗುವವರೆಗೂ ನಾವು ಬೇರಾವ ಕೆಲಸವನ್ನು ಕೈಗೊಳ್ಳಲಿಲ್ಲ.

ಪಂಚಭೂತಗಳಲ್ಲಿ ಎರಡನೆಯದೆಂದರೆ ನೀರು. ಯಾವುದೇ ಒಂದು ರಿಸಾರ್ಟಿನಲ್ಲಿ ನೀರಿನ ಬಳಕೆ ವೈವಿಧ್ಯಮಯ. ತೋಟಕ್ಕೆ, ಸ್ನಾನಕ್ಕೆ, ಅಡುಗೆಗೆ, ಕುಡಿಯುವುದಕ್ಕೆ

ಇವೆಲ್ಲದಕ್ಕೂ ನೀರು ಬೇಕು. ಮೊದಲಿಗೆ ಮಳೆ ನೀರು ಸಂಗ್ರಹಣೆ ಮಾಡಿ ನಮ್ಮಲ್ಲಿನ ಕೊಳಗಳನ್ನೆಲ್ಲಾ ತುಂಬಿಸಿದೆವು. ನಿವೇಶನದಲ್ಲಿ ಅನೇಕ ಸಿಂಕ್ ಹೋಲ್‌ಗಳನ್ನು ಕೊರೆಸಿದ್ದರಿಂದ ನೆಲದಲ್ಲಿ ಮಳೆ ನೀರು ಇಂಗಿ ಭೂಗತ ಜಲದ ಮಟ್ಟ ಏರುವಂತಾಯಿತು. ನಮ್ಮ ರಿಸಾರ್ಟಿಗೆ ಬರುವ ಚಿಕ್ಕ ಮಕ್ಕಳಿಗೆ ನೀರಿನಲ್ಲಿ ಆಡುವುದೆಂದರೆ ತುಂಬ ಇಷ್ಟ. ನಿಂತ ನೀರಿನಲ್ಲಿ ಆಡುವುದಕ್ಕಿಂತ ಹರಿಯುವ ನೀರಿನಲ್ಲಿ ಆಡಿದರೆ ಸೋಂಕಿನ ಸಾಧ್ಯತೆ ಕಡಿಮೆಯಾಗುವುದು ಸಹಜ. ಹಾಗಾಗಿ ಒಂದು ಉದ್ದವಾದ ಕಾಲುವೆಯನ್ನು ನಿರ್ಮಿಸಿ ಅದರಲ್ಲಿ ಈ ಶುದ್ಧೀಕರಿಸಿದ ನೀರನ್ನು ಹರಿಯಬಿಟ್ಟೆವು. ಈ ಹರಿಯುತ್ತಿರುವ ನೀರಿನ ಆಳ ಕೇವಲ ಆರು ಇಂಚು ಇರುವುದರಿಂದ ತೀರ ಚಿಕ್ಕಮಕ್ಕಳೂ ಯಾವ ಹೆದರಿಕೆಯೂ ಇಲ್ಲದೇ ಆಡುವುದು ಸಾಧ್ಯವಾಯಿತು. ಅಲ್ಲದೆ, ಮಕ್ಕಳು ಮಣ್ಣಿನಲ್ಲಿ ಆಡಿ ನೀರಿಗೆ ಇಳಿದರೂ ಕಾಲಿಗೆ ಅಂಟಿದ್ದ ಮಣ್ಣೆಲ್ಲಾ ನೀರಿನಲ್ಲಿ ಹರಿದು ಹೋಗಿ ಆಡುವ ಪರಿಸರ ಶುದ್ಧವಾಗಿಯೇ ಇರುತ್ತಿತ್ತು. ಅಡುಗೆಗೆ ಮತ್ತು ಕುಡಿಯುವ ನೀರಿನ ಅಗತ್ಯಕ್ಕೆ ಒಂದು ಆರೋ ಘಟಕವನ್ನೇ ಜೋಡಿಸಿದೆವು. ಅತಿಥಿಗಳು ತಮ್ಮ ಕೊಠಡಿಗಳಲ್ಲಿ ನೀರು ಕುಡಿಯಲು ಪ್ಲಾಸ್ಟಿಕ್ ಬಾಟಲುಗಳಿಗೆ ಬದಲಾಗಿ ಗಾಜಿನ ಬಾಟಲುಗಳನ್ನು ಇಟ್ಟೆವು. ಪ್ರತಿ ಒಂದು ಕಾಟೇಜಿನಲ್ಲೂ ಒಂದು ಶುದ್ಧೀಕರಿಸಿದ ನೀರಿನ ಡಿಸ್ಪೆನ್ಸರ್ ಇದ್ದು ಅತಿಥಿಗಳು ಇದರಿಂದ ತಮ್ಮ ಬಾಟಲುಗಳನ್ನು ತಾವೇ ತುಂಬಿಕೊಳ್ಳುವಂತೆ ತಾಕೀತು ಮಾಡಿದೆವು. ಪ್ಲಾಸ್ಟಿಕ್ ಬಳಕೆಯ ನಿಷೇಧ ನಮ್ಮ ಉದ್ದೇಶವೆಂಬುದನ್ನು ತಿಳಿದ ಅತಿಥಿಗಳೂ ನಮ್ಮ ಆ ಯತ್ನಕ್ಕೆ ಸಹಕಾರ ನೀಡುತ್ತಿದ್ದಾರೆ. ಕೊಠಡಿಗಳಲ್ಲಿನ ಗಾಜಿನ ಲೋಟಗಳ ಮೇಲೂ ಅತಿಥಿಗಳ ಹೆಸರನ್ನು ನಮೂದಿಸುವ ಸ್ಟಿಕರ್ ಇದ್ದು, ಪ್ರತಿಬಾರಿ ಲೋಟವನ್ನು ತೊಳೆಯುವ ಅಗತ್ಯವನ್ನು ತಪ್ಪಿಸಿ ನೀರಿನ ಮಿತ ಬಳಕೆ ಸಾಧ್ಯವಾಯಿತು. ಅಷ್ಟೇ ಅಲ್ಲ, ನಮ್ಮ ಅತಿಥಿಗಳಿಗೆ ಎಳನೀರು ಕುಡಿಯಲು ಕೊಡುವಾಗಲೂ ಪ್ಲಾಸ್ಟಿಕ್ ಸ್ಟ್ರಾ ಬದಲಿಗೆ ಸ್ಟೇನ್‌ಲೆಸ್ ಸ್ಟೀಲ್ ಸ್ಟ್ರಾಗಳನ್ನೇ ಕೊಡುತ್ತಿದ್ದೇವೆ. ಈಜುಕೊಳದಿಂದ ಹೊರಬರುವ ನೀರನ್ನು ಒಂದು ಕೊಳದಲ್ಲಿ ಸಂಗ್ರಹಿಸಿ ಅದರಲ್ಲಿ ಒಂದು ಕಾರಂಜಿಯನ್ನು ಅಳವಡಿಸಿರುವುದರಿಂದ ನೀರಿಗೆ ಏರೇಶನ್ ಆಗಿ ಅದು ಶುದ್ಧಿಹೊಂದುವಂತಾಯಿತು. ಅಡುಗೆ ಮನೆಯಿಂದ ಹೊರಬರುವ ನೀರನ್ನು ಒಂದು ಸೆಡಿಮೆಂಟೇಷನ್ ಕೊಳದಲ್ಲಿ ಸಂಗ್ರಹಿಸಿ ಅದರಲ್ಲಿನ ಎಣ್ಣೆಯ ಅಂಶವನ್ನ ಬೇರ್ಪಡಿಸಿ ಉಳಿದ ನೀರನ್ನು ತೋಟಕ್ಕೆ ಬಳಸಿದೆವು.

ಪಂಚಭೂತಗಳಲ್ಲಿ ಮೂರನೆಯದು ಅಗ್ನಿ. ಇದನ್ನು ನಾನು ಶಕ್ತಿ ಎಂದು ಪರಿಗಣಿಸುವೆ. ನಮ್ಮ ರಿಸಾರ್ಟಿನಲ್ಲಿ ಸೌರಶಕ್ತಿಯನ್ನು ನೀರನ್ನು ಕಾಯಿಸುವುದಕ್ಕೇ ಅಲ್ಲದೇ ವಿದ್ಯುಚ್ಛಕ್ತಿಯ ಉತ್ಪಾದನೆಗೂ ಬಳಸುತ್ತಿದ್ದೇವೆ. ಬೆಸ್ಕಾಮಿನವರು ಕೊಡುವ ವಿದ್ಯುಚ್ಛಕ್ತಿಯಷ್ಟನ್ನು ನಾವು ಸೌರಫಲಕಗಳ ಮೂಲಕ ಉತ್ಪಾದಿಸಿ, ಅದನ್ನ ಗ್ರಿಡ್‌ಗೆ ಕೊಡುತ್ತಿದ್ದೇವೆ. ಹಾಗಾಗಿ ನಿವ್ವಳವಾಗಿ ನಾವು ಫಾಸಿಲ್ ಫ್ಯೂಯೆಲ್‌ನಿಂದ ಉತ್ಪಾದಿಸಿದ ವಿದ್ಯುತ್ತನ್ನು ಬಳಸುತ್ತಿಲ್ಲ.

ಪಂಚಭೂತಗಳಲ್ಲಿ ನಾಲ್ಕನೆಯದು ವಾಯು. ಸೌರ ಪ್ಯಾನೆಲ್ಲುಗಳನ್ನು ಅಳವಡಿಸಿರುವ ಜಾಗಗಳನ್ನು ಹೊರತುಪಡಿಸಿ ಮಿಕ್ಕೆಲ್ಲಾ ಜಾಗಗಳಲ್ಲೂ ದಟ್ಟವಾಗಿ ಸಸ್ಯರಾಶಿ ಇರುವುದರಿಂದ ನಮ್ಮ ನಿವೇಶನದಲ್ಲಿ ಕಾರ್ಬನ್ ಫುಟ್‌ಪ್ರಿಂಟ್ ಬಹುಮಟ್ಟಿಗೆ ಕಡಿಮೆ. ಸಸ್ಯದೇವತೆ ದಯಪಾಲಿಸುವ ಆಮ್ಲಜನಕ ವಾಯುವಿನ ಶುದ್ಧತೆಯನ್ನು ಕಾಪಾಡಲು ಸಹಾಯಕವಾಗುತ್ತಿದೆ. ಈ ವಾಯು ಮಾಲಿನ್ಯದಂತೆಯೇ ಟಿ.ವಿ.ಗಳಿಂದ ಹೊರಹೊಮ್ಮುವ ಮಾಹಿತಿ ಮಾಲಿನ್ಯವನ್ನು ತಡೆಗಟ್ಟಲು ಅತಿಥಿಗಳ ಕೊಠಡಿಗಳಲ್ಲಿ ಟಿ.ವಿ.ಗಳನ್ನು ಇಟ್ಟಿಲ್ಲ. ಅತಿಥಿಗಳೂ ಸಹಾ ಇದನ್ನು ಮುಕ್ತಮನಸ್ಸಿನಿಂದ ಸ್ವಾಗತಿಸಿದ್ದಾರೆ. ಇದರಿಂದಾಗಿ ಅವರುಗಳು ಹೊರಗೆ ಹೋಗಿ ಪ್ರಕೃತಿಯ ಸಂಪರ್ಕವನ್ನು ಆಪ್ತವಾಗಿ ಪಡೆದು


ಅದರಲ್ಲೇ ಮೈಮರೆಯುವ ಅನುಭವವನ್ನು ಪಡೆಯುತ್ತಿದ್ದಾರೆ. ಇನ್ನೊಂದು ವಿಷಯ. ಅತಿಥಿಗಳು ಊಟಮಾಡಿ ಬಿಟ್ಟ ಆಹಾರವನ್ನು ಕಾಂಪೋಸ್ಟ್ ಮಾಡಿ ಅದರಿಂದ ಬಂದ ಗೊಬ್ಬರವನ್ನು ಸಾರ್ವಜನಿಕ ಸೇವಾ ಸಂಸ್ಥೆಯೊಂದಕ್ಕೆ ದಾನವಾಗಿ ನೀಡುತ್ತಿದ್ದೇವೆ. ಅವರು ಅದನ್ನು ಹಾದಿಯಲ್ಲಿನ ಸಾಲುಮರಗಳನ್ನು ಬೆಳೆಸಲು ಬಳಸುತ್ತಿದ್ದಾರೆ.


ಪಂಚಭೂತಗಳಲ್ಲಿ ಕೊನೆಯದಾದ ಆಕಾಶವನ್ನು ನಾನು ಜೀವನಕ್ಕೆ ಅಗತ್ಯವಾದ ಬಿಡು ಜಾಗ ಅಂತ ಅರ್ಥೈಸಿ, ನಮ್ಮ ಕಾಟೇಜುಗಳ ನಡುವಣ ಖಾಲಿಜಾಗವನ್ನು ಆದಷ್ಟು ಹೆಚ್ಚಿಸಿ ಅದನ್ನು ಸಸ್ಯಭರಿತವಾಗಿಸಿರುವೆ. ಇದರಿಂದಾಗಿ ಪ್ರತಿಯೊಂದು ಕಾಟೇಜಿಗೂ ಪ್ರೈವೆಸಿ ಸಿಗುವಂತಾಗಿದೆ. ಇಷ್ಟು ಈ ಹಂತದಲ್ಲಿ ನಾವು ಕೈಗೊಂಡಿರುವ ಪರಿಸರ ಸ್ನೇಹಿ ಹೆಜ್ಜೆಗಳು. ನಿಮ್ಮ ಪತ್ರಿಕೆಯ ಓದುಗ ಸಜ್ಜನರು ಇನ್ನೇನಾದರೂ ಸಲಹೆಗಳನ್ನು ನೀಡಿದರೆ ದಯವಿಟ್ಟು ತಿಳಿಸು. ಮುಕ್ತಮನಸ್ಸಿನಿಂದ ಅವನ್ನ ಸ್ವೀಕರಿಸುವೆ.

ಪ್ರಕಾಶನ ಮಾತುಗಳನ್ನು ಕೇಳಿದ ಮೇಲೆ ನನಗೆ ಭರ್ತೃಹರಿಯ ಶ್ಲೋಕವೊಂದು ನೆನಪಿಗೆ ಬಂತು. ಭರ್ತೃಹರಿಯು ತನಗೆ ಅವಸಾನಕಾಲ ಬಂತೆಂದು ತೋರಿದಾಗ ಅವನು ಕೈ ಮುಗಿದು ಹೇಳುತ್ತಾನೆ:

''ಅಮ್ಮಾ ಭೂಮಾತೆ, ತಂದೆ ವಾಯುದೇವನೆ, ಸ್ನೇಹಿತನಾದ ಸೂರ್ಯನೆ, ಆಪ್ತಬಂಧುವಾದ ಜಲವೆ, ಅಣ್ಣ ಆಕಾಶವೆ, – ಇಗೋ ನಿಮಗೆ ನನ್ನ ಕಟ್ಟಕಡೆಯ ನಮಸ್ಕಾರ. ನಾನು ನಿಮ್ಮಿಂದ ಉಪಕಾರ ಪಡೆದವನು. ನಿಮ್ಮಗಳ ಸಂಪರ್ಕದಿಂದ ಉಂಟಾದ ಸಂಸ್ಕಾರದ ಮೂಲಕ ನನ್ನ ಸಹಜವಾದ ಸ್ವಾರ್ಥಮೋಹವು ಕಳಚಿಹೋಗಲಾಗಿ ಶುದ್ಧವೂ ವಿಸ್ತಾರವೂ ಆದ ತತ್ವದ ಪ್ರಕಾಶ ನನಗೆ ಲಭಿಸಿತು. ಅದರಿಂದ ನಾನು ಈಗ ಪರಮಾತ್ಮ ವಸ್ತುವಿನಲ್ಲಿ ಲೀನವಾಗುವುದು ಸಾಧ್ಯವಾಗಿದೆ.''

■




ತಾಪಮಾನ ಏರಿಕೆ
ಬರೀ ಬೊಗಳೆ !


ಸೋರುತ್ತಿರುವ
ನಲ್ಲಿಗಳು
ಜಗತ್ತಿಗೆ
ಮಾರಕ !


ನಾಗರೀಕತೆ !!


ಓ ಅದಾ, ಅದು ಕ್ಲೀನ್ ಪಲ್ಯೂಷನ್ !!

● **ದಂನಆ**

- ✓ ಪರಿಸರ ತಾಪಮಾನ ಎಂಬುದು ಒಂದು ಭವಿಷ್ಯಕಥನವಲ್ಲ ವಾಸ್ತವ.
- ✓ ಈ ಭೂಮಿ ಇಲ್ಲದಿದ್ದರೆ ಇನ್ನೊಂದು ಇದೆ ಎಂಬ ಭ್ರಮೆಯಲ್ಲಿ ನಾವಿದ್ದೇವೆ.
- ✓ ಹಣವನ್ನು ಉಸಿರಾಡಲು ಸಾಧ್ಯವಿಲ್ಲ ಎಂದು ನಮಗೆ ಮನವರಿಕೆ ಆಗುವುದು ಕೊನೆಯ ಮರವನ್ನು ಕಡಿದು ಉರುಳಿಸಿದ ಮೇಲೆ.
- ✓ ಭೂಮಿ ಮಾನವನ ಬದುಕಿಗೆ ಒಂದು ವೇದಿಕೆ ಅಲ್ಲ. ಅದಕ್ಕೂ ಜೀವವಿದೆ. ನಾವು ಭೂಮಿಯ ಮೇಲಿಲ್ಲ ಅದರ ಒಂದು ಭಾಗವಾಗಿದ್ದೇವೆ. ಅದರ ಸ್ವಾಸ್ಥ್ಯವೇ ನಮ್ಮ ಸ್ವಾಸ್ಥ್ಯ.
- ✓ ನನಗೆ ಪರಿಸರವನ್ನು ಸಂರಕ್ಷಿಸಬೇಕಿಲ್ಲ. ಆದರೆ ಪರಿಸರವನ್ನು ಉಳಿಸಬೇಕಾದ ಅವಶ್ಯಕತೆಯೇ ಬಾರದಂತಹ ಭೂಮಿಯನ್ನು ಸೃಷ್ಟಿಸಬೇಕಿದೆ.
- ✓ 'ಜಾಗತಿಕ ತಾಪಮಾನ ಎಂಬುದೊಂದಿದೆಯೆ?' ಎಂದು ನನ್ನನ್ನ ಅನೇಕರು ಕೇಳುತ್ತಾರೆ. ಅವರಿಗೆ ನನ್ನ ಉತ್ತರ: ನೀವು ಗುರುತ್ವಾಕರ್ಷಣೆಯನ್ನು ನಂಬುತ್ತೀರಾ?
- ✓ ನಾವು ಎದುರಿಸುತ್ತಿರುವ ಅತ್ಯಂತ ದೊಡ್ಡ ದುರಂತ ಎಂದರೆ ನಮ್ಮನ್ನ ಬೇರೆ ಯಾರೋ ಪಾರುಮಾಡುತ್ತಾರೆ ಎಂಬ ನಂಬಿಕೆ.
- ✓ 25 ವರ್ಷಗಳ ಹಿಂದೆ ಹವಾಮಾನ ವೈಪರೀತ್ಯಗಳ ಬಗ್ಗೆ ಅರಿವಿಲ್ಲದಿರುವದನ್ನು ಕ್ಷಮಿಸಿಬಿಡಬಹುದಾಗಿತ್ತು. ಈಗ ಅಂತಹ ಸಬೂಬು ಇಲ್ಲ.
- ✓ ವಿಜ್ಞಾನವನ್ನು ಬದಲಿಸಲು ಸಾಧ್ಯವಿಲ್ಲ, ಬದಲಾಗಬೇಕಾಗಿರುವುದು ರಾಜಕಾರಣ.
- ✓ ಪರಿಸರಕ್ಕಿಂತ ಹಣವೇ ಮುಖ್ಯ ಎಂದು ನೀವು ಯೋಚಿಸಿದ್ದರೆ ಹಣವನ್ನು ಎಣಿಸುವಾಗ ಉಸಿರು ಬಿಗಿ ಹಿಡಿಟ್ಟುಕೊಳ್ಳಲು ಪ್ರಯತ್ನಿಸಿ.
- ✓ ಈ ಭೂಮಿ ಪೂರ್ವಿಕರಿಂದ ನಮಗೆ ಬಂದ ಬಳುವಳಿ ಅಲ್ಲ. ನಮ್ಮ ಮಕ್ಕಳಿಗಾಗಿ ನಾವು ಎರವಲು ಪಡೆದಿರುವುದು.
- ✓ ಪರಿಸರದಲ್ಲಿ ಏನಾಗುತ್ತಿದೆ ಎಂಬ ತಿಳವಳಿಕೆಯೇ ಶ್ರೀಸಾಮಾನ್ಯರಿಗೆ ಇಲ್ಲ. ತಿಳಿದಿಲ್ಲ ಎಂಬ ತಿಳವಳಿಕೆಯೂ ಇಲ್ಲ.
- ✓ ಆಧುನಿಕ ತಂತ್ರಜ್ಞಾನ ಪರಿಸರ ವಿಜ್ಞಾನದ ಕ್ಷಮೆ ಕೋರಬೇಕಿದೆ.
- ✓ ನಮ್ಮ ಪೀಳಿಗೆ ಮತ್ತು ನಿಮ್ಮ ಪೋಷಕರು ಒಂದು ದೊಡ್ಡ ಅವ್ಯವಸ್ಥೆಯನ್ನು ನಿಮ್ಮ ಮುಂದಿಟ್ಟಿದ್ದಾರೆ: ಯುದ್ಧಗಳು, ಪರಿಸರ ಮಾಲಿನ್ಯ, ಪರಿಸರ ತಾಪಮಾನ, ಆರೋಗ್ಯ ಸಮಸ್ಯೆಗಳು, ಪ್ರಾಕೃತಿಕ ವಿಕೋಪಗಳು. ಅವೆಲ್ಲವನ್ನೂ ನೀವು ನಿವಾರಿಸಬೇಕಾಗಿದೆ. ತಯಾರಿದ್ದೀರಾ?
- ✓ ಶ್ರೀಸಾಮಾನ್ಯರಿಗೆ ಪರಿಸರ ತಾಪಮಾನದ ಬಗ್ಗೆ ಚಿಂತಿಸುವ ಕಾಲ ಮುಗಿದಿದೆ. ಅದಕ್ಕೆ ಹೇಗೆ ಹೊಂದಿಕೊಳ್ಳುವುದು ಎಂಬುದರ ಬಗ್ಗೆ ಚಿಂತಿಸಬೇಕಾಗಿದೆ.

# ಪ್ರವಾಹಕಾಲದ ಏಣಿ ಮತ್ತು ದೋಣಿ

● **ನಾಗೇಶ ಹೆಗಡೆ**

'ನಮ್ಮೂರಿಗೆ ರಸ್ತೆ ಬೇಕೂ...' ಅಂದ ಆಂಜನಪ್ಪ.

ಅವನು ಉಗ್ಗದಹಳ್ಳಿಯ ಪಂಚಾಯ್ತಿ ಮೆಂಬರು. ಈಗ ನಡು ಬಾಗಿಸಿ ನಿಂತಿದ್ದ, ಯಾರೆದುರು ಅಂದರೆ, ಅನರ್ಹ ಶಾಸಕ ನುಂಗ್ರಾಜ್ ಎದುರು. ಈ ನುಂಗ್ರಾಜ್ ಗೊತ್ತಲ್ಲ? ಮೂರು ಡಿಗ್ರಿ ಹೋಲ್ಡರು. ಇನ್ನೇನು ಬರಲಿರುವ ಉಪಚುನಾವಣೆಗೆ ಈ ಭಾಗದ ಕ್ಯಾಂಡಿಡೇಟು. ಮತದಾರರಿಗೆ ಏನೇನು ಆಶ್ವಾಸನೆ ಕೊಡಬೇಕು ಎಂಬ ಪಟ್ಟಿಯ ತಯಾರಿಕೆಯಲ್ಲಿ ತೊಡಗಿದ್ದ. ತಲೆ ಎತ್ತಿ ಆಂಜನಪ್ಪನ ಕಡೆ ನೋಡಿದ.

'ಕ್ಲೈಮೇಟ್ ಚೇಂಜ್' ಗೊತ್ತೇನ್ರೀ ಕೇಳಿದ ನುಂಗ್ರಾಜ್.

ಆಂಜನಪ್ಪ ತನ್ನ ಬೋಳು ತಲೆ ತುರಿಸಿಕೊಂಡ.

'ಅಂದ್ರೆ, ಬಿಸಿ ಪ್ರಳಯ ಅಂದ್ರೆ ಗೊತ್ತೇನ್ರೀ?' ಕನ್ನಡದಲ್ಲಿ ರಿಪೀಟ್ ಮಾಡಿದ ನುಂಗ್ರಾಜ್.

ಆಂಜನಪ್ಪನಿಗೆ ಬಿಸಿ ಹಪ್ಪಳ ಗೊತ್ತಿತ್ತು. ಬಿಸಿ ಪಕೋಡ ಕೂಡ ಗೊತ್ತಿತ್ತು. ಅದನ್ನು ಬೀದಿ ಬದಿಯಲ್ಲಿ ಮಾರಿದರೂ ಉದ್ಯೋಗ ಸೃಷ್ಟಿ ಆಗುತ್ತದೆಂದು ಕೇಳಿ ಬಲ್ಲವನಾಗಿದ್ದ. ಈಗ ಇದೇನೋ ಹೊಸ ಬಗೆಯ 'ಬಿಸಿ ಪಲ್ಯ' ತಯಾರಿಸಿ ಮಾರುವ ಯೋಜನೆ ಇದ್ದೀತೆಂದು ಕೇಳಲು ಉತ್ಸುಕನಾದ.

'ಏನ್ಸಾರ್ ಅದೂ? ಬಿಡಿಸಿ ಹೇಳಿ' ಅಂದ.

'ಬಿಸಿ ಪ್ರಳಯ ಅಂದ್ರೆ– ಕ್ಲೈಮೇಟ್ ಚೇಂಜು. ಗ್ಲೋಬಲ್ ವಾರ್ಮಿಂಗ್ ಅಂತಾನೂ ಹೇಳ್ತಾರೆ' ಎನ್ನುತ್ತ ಪೆನ್ನಿನ ಹಿಂಬದಿಯನ್ನು ಕಿವಿಗೆ ತೂರಿಸುತ್ತ ವಿವರಣೆ ನೀಡಲು ಕುಂತ ನುಂಗ್ರಾಜ್.

ಗ್ಲೋಬಲ್ ವಾರ್ಮಿಂಗ್ ಅನ್ನೋದು ಆಂಜನಪ್ಪನಿಗೆ ಗೋಬಿ ಮಂಚೂರಿ ಥರಾ ಕೇಳಿಸ್ತು. ನಾಲಗೆ ಚುರುಕಾಯಿತು.

'ಮುಂದೆ ಹೇಳಿ ಸಾರ್' ಅಂದ.

'ಅದು– ಬಂದ್ರೆ ಮಳೆ ಇನ್ನೂ ಜೋರಾಯ್ತದೆ. ಸೈಕ್ಲೋನು, ಕ್ಲೌಡ್ ಬರ್ಸ್ಟು, ಫ್ಲಡ್ಡು, ಆಮೇಲೆ ಬಿಸಿಲೂ ಸಖತ್ತಾಗಿ ಬೀಳ್ತದೆ' ಅಂದ ನುಂಗ್ರಾಜ್.

ಆಂಜನಪ್ಪನ ಬ್ರೇನು ಚುರುಕಾಗಿ ಓಡಿತು. ತನ್ನ ಗ್ರಾಮಕ್ಕೆ ರಸ್ತೆ ಮಂಜೂರಿ ಮಾಡಿಸಿಕೊಂಡು ತಾನೇ ಅದರ ಗುತ್ತಿಗೆ ಪಡೆಯುವ ಕನಸು ಅವನಿಗೆ ಇತ್ತು. ಮಳೆ ಇನ್ನೂ ಜಾಸ್ತಿ ಬೀಳುವುದಾದರೆ, ಸೈಕ್ಲೋನ್ ಕೂಡ ಬರುತ್ತಿದ್ದರೆ ವರ್ಷಕ್ಕೆ ಮೂರು ಸಾರಿ ರಸ್ತೆ ರಿಪೇರಿಯ ಕಾಂಟ್ರಾಕ್ಟ್ ಪಡೆಯಬಹುದು.

ಅವನ ಕನಸಿಗೆ ಕೊಂಬೆರೆಂಬೆಗಳು ಮೊಳೆತವು.

'ಹಂಗಾದ್ರೆ ರಸ್ತೆ ಬೇಕೇ ಬೇಕು ಸಾರ್' ಅಂದ.

'ಯಾಕೆ?' ಎಂಬಂತೆ ನುಂಗ್ರಾಜನ ಹುಬ್ಬು ಮೇಲಕ್ಕೇರಿ ಇಳಿಯಿತು.

'ಮಳೆ ಬಂದ್ರೆ, ಪ್ರವಾಹ ಬಂದ್ರೆ.. ಬೇಕಲ್ಲ ಸಾರ್' ಅಂದ.

'ಯೋ! ಮಳೆ ಬಂದ್ರೆ ಏಣಿ ಬೇಕು; ಪ್ರವಾಹ ಬಂದ್ರೆ ದೋಣಿ ಬೇಕು. ರಸ್ತೆ ಯಾಕಯ್ಯ?' ಕೇಳಿದ ನುಂಗ್ರಾಜ್.

'ಆಗಾಗ ರಿಪೇರಿ ಮಾಡ್ಸಾಕೆ....' ಎಂದು ಹೇಳಲು ಹೊರಟಿದ್ದ ಆಂಜನಪ್ಪನಿಗೆ ಎಲ್ಲೋ ತುಸು ಗಂಟಲು ಕಟ್ಟಿದ ಹಾಗಾಯ್ತು. ಒಮ್ಮೊಮ್ಮೆ ತನಗೆ ಅನ್ನಿಸಿದ್ದನ್ನು ಫಟಾಕ್ಕೆಂದು ಹೇಳುವ ಮುಂಚೆ ಅವನಿಗೆ ಹೀಗೆ ವಿವೇಕ ಗಂಟಲಿಗೆ ಸಿಕ್ಕಿ ತೊಂದ್ರೆ ಕೊಡುವುದು ಉಂಟು. ತುಸು ಕೆಮ್ಮಿ ಸಾವರಿಸಿಕೊಂಡ.

ಅವನ ಆ ಅರ್ಧ ವಾಕ್ಯವೇ ಸಾಕಾಯಿತು, ಅನರ್ಹ ಎಮ್ಮೆಲ್ಲೆಗೆ. ಅದು ಎಷ್ಟೊಂದು ಸಾಧ್ಯತೆಗಳನ್ನು ತೆರೆಯುತ್ತ ಹೋಯಿತು. ಹೌದು, ಫ್ಲಡ್ ಬಂದರೆ ನಾಲೆ ರಿಪೇರಿ, ಕೆರೆಕಟ್ಟೆ ರಿಪೇರಿ, ಮನೆ ರಿಪೇರಿ ಸ್ಕೂಲ್ ರಿಪೇರಿ, ಕ್ಯಾಟ್ಲ್ ಶೆಡ್ ರಿಪೇರಿ, ಟೆಂಪಲ್ ರಿಪೇರಿ, ಗ್ರಾಮ ಪಂಚಾಯ್ತಿ ಕಟ್ಟಡ ರಿಪೇರಿ, ಸೇತುವೆ ರಿಪೇರಿ: ಬೆಳೆ ನಷ್ಟ ಪರಿಹಾರ, ಮಾನ ನಷ್ಟ ಪರಿಹಾರ, ಬಲೆ ನಷ್ಟ ಪರಿಹಾರ, ನೇಗಿಲು ನಷ್ಟ ಪರಿಹಾರ, ಜಾನುವಾರು ನಷ್ಟ ಪರಿಹಾರ, ಪರಿಹಾರ... ತಲೆ ತಗ್ಗಿಸಿ ಪಟ್ಟಿ ಬರೆಯುತ್ತ ಹೋದ ನುಂಗ್ರಾಜ್.

ಅವನು ಯೋಜಿಸಿದ್ದ ಭಾಷಣಕ್ಕೆ ಬೇಕಾದಷ್ಟು ಸಾಮಗ್ರಿ ಸಿಕ್ಕಿತು.

'ಸಾರ್...' ಎಂದ ಆಂಜನಪ್ಪ ಆ ಪಟ್ಟಿಯನ್ನು ದೂರದಿಂದಲೇ ನೋಡುತ್ತ.

ನುಂಗ್ರಾಜ ಬಿಜಿ. ತಾನು ಬರೆದ ಪಟ್ಟಿಯನ್ನೇ ಮತ್ತೊಮ್ಮೆ ನೋಡುತ್ತ ಮಾರ್ಜಿನ್‌ನಲ್ಲಿ 'ಬುಲ್‌ಡೋಝರ್, ಕ್ರೇನ್, ಜೆಸಿಬಿ ಡೀಲರ್‌ಶಿಪ್' ಎಂದು ಬರೆದುಕೊಂಡ. ಮತ್ತೆ ತನ್ನ ಪಟ್ಟಿಯಲ್ಲಿ 'ಮಾನ ನಷ್ಟ ಪರಿಹಾರ' ಏಕೆ ಬರೆದೆ ಎಂಬುದು ಗೊತ್ತಾಗದೆ ತುಸು ಯೋಚಿಸಿ, ಅದನ್ನು ಹೊಡೆದು ಹಾಕಿ 'ಮೀನು ನಷ್ಟ' ಎಂದು ರೀರೈಟ್ ಮಾಡಿದ. ಮತ್ತೆ ಅದೂ ಅಲ್ಲ ಎಂದೆನಿಸಿ ಅದನ್ನೂ ಹೊಡೆದು ಹಾಕಿ, 'ಮನೆ ನಷ್ಟ' ಎಂದು ರೀರೀರೈಟ್ ಮಾಡಿದ.

ಆಂಜನಪ್ಪಗೆ ಗಂಟಲು ಕೆರೆತ ಶುರುವಾಗಿತ್ತು.

'ಸಾರ್' ಎಂದ, ನುಂಗ್ರಾಜನ ಆ ಪಟ್ಟಿಯನ್ನೇ ನೋಡುತ್ತ.

'ಏನು?' ಎಂಬಂತೆ ಅವನತ್ತ ನುಂಗ್ರಾಜ್ ನೋಡಿದ.

'ನಮ್ಮೂರಿಗೆ ಒಂದು ಕೆರೆ ಬೇಕಾಗಿತ್ತು' ಅಂದ.

ನುಂಗ್ರಾಜನಿಗೆ ಛಳಕು ಹೊಡೆದಂತಾಯಿತು. ಅವನ ಮತಕ್ಷೇತ್ರದ ಈ ಪಂಚಾಯ್ತಿಯಲ್ಲಿ ನದಿಯಂತೂ ಇಲ್ಲ. ಕೆರೆಯೂ ಇಲ್ಲ ಅಂದಮೇಲೆ ಫ್ಲಡ್ಡು, ಕೆರೆಕಟ್ಟೆ ರಿಪೇರಿ, ನಾಲೆ ರಿಪೇರಿ, ತೂಬು ರಿಪೇರಿ, ಕಟ್ಟಡ ರಿಪೇರಿ, ಶಾಲೆ ರಿಪೇರಿಯ ಪ್ರಶ್ನೆಯೇ ಬರುವುದಿಲ್ಲ. ಮೀನು ನಷ್ಟ, ಮನೆ ನಷ್ಟ, ಟೆಂಪಲ್ ರಿಪೇರಿ, ಜೆಸಿಬಿ ಡೀಲರ್‌ಶಿಪ್ ಎಲ್ಲವನ್ನೂ ಹೊಡೆದು ಹಾಕಿದ.

ಆ ಊರಿಗೊಂದು ಕೆರೆ ಬೇಕೇಬೇಕೆಂದು ಅವನಿಗೆ ಮನದಟ್ಟಾಗಿತ್ತು. ■

# ಅಹವಾಲು ಯಾರಿಗೆ 'ಕೊಡಲಿ'

**ಕೃಷ್ಣ ಸುಬ್ಬರಾವ್**

ಒಡೆಯದಿರು ತಳಹದಿಯ ಸರಿಪಡಿಪೆನದನೆಂದು! ಸಡಲಿಸುವ ನೀಂ ಮರಳಿ ಕಟ್ಟಲರಿತವನೇಂ? ಗಿಡವ ಸರಿ ಬೆಳೆಯಿಸಲು ಬುಡವ ಕೀಳ್ವುದು ಸರಿಯೇ! ದುಡುಕದಿರು ತಿದ್ದಕೆಗೆ ಮಂಕುತಿಮ್ಮ.

ನಿವೃತ್ತಿಯಾದ ಮೇಲೆ ನನ್ನಂತಹ ಅನೇಕರಿಗೆ ಸಮಸ್ಯೆಗಳಲ್ಲಿ ಮುಖ್ಯವಾದುದು ನಮ್ಮ ಸಹಿಗಳಿಗೆ ಬೆಲೆಯಿಲ್ಲದ ವಿಷಯ! ಅಧಿಕಾರಿಗಳಾಗಿದ್ದವರಿಗೆ ಹೆಚ್ಚಿನ ನೋವು. ಮೋದಿ ಸರ್ಕಾರ ಬಂದಮೇಲಂತೂ ಎಲ್ಲ ಡಿಜಿಟಲ್ಮಯವಾಗಿ ನಾವು ಬ್ಯಾಂಕ್ ಚೆಕ್ ಗಳಿಗೂ ಸಹಿ ಹಾಕುವ ಪ್ರಮಯವಿಲ್ಲ. ಇಂತಹ ಪರಿಸ್ಥಿತಿಯಲ್ಲೂ ನಮ್ಮನ್ನು ಯಾರಾದರೂ ಯಾವುದಾದರೂ ಪ್ರತಿಭಟನೆಗಾಗಿ ಸರ್ಕಾರಕ್ಕೋ ಅಥವಾ ಹೋರಾಟ ಮಾಡುವ ಸಂಘ ಸಂಸ್ಥೆಗಳಿಗೋ ನಮ್ಮ ಸಹಿಗಾಗಿ ಮನವಿ ಮಾಡಿಕೊಂಡಾಗ ಜಂಭದಿಂದ ಸಹಿ ಹಾಕುತ್ತೇವೆ.

ಸಾಮಾನ್ಯ ನಾಗರಿಕರ ಕೈಯಲ್ಲಿ ಏನೂ ಆಗುವುದಿಲ್ಲ ಎನ್ನಲಾಗದು. ಇಪ್ಪತ್ತೊಂದು ವರ್ಷಗಳ ಹಿಂದೆ ಶಾಸಕರ ಭವನವನ್ನು ಕಟ್ಟುವ ಪ್ರಯತ್ನ ನಡೆದಾಗ ಸಹಿ ಸಂಗ್ರಹಣೆ ಮಾಡಿ 'ಕಬ್ಬನ್ ಪಾರ್ಕ್ ಉಳಿಸಿ 'ಯಶಸ್ವಿಗೊಳಿಸಿದ್ದು ಎಲ್ಲರ ಮನಸ್ಸಿನಲ್ಲೂ ಇನ್ನೂ ಹಸಿರಾಗಿದೆ. ಹಾಗೆಯೆ ಎರಡು ಲಕ್ಷ ಜನರ ಸಹಿ ಹಾಕಿಸಿ ಎಲಿವೇಟೆಡ್ ಕಾರಿಡಾರ್ ಪ್ರಾಜಕ್ಟನ್ನು ಪಕ್ಕಕ್ಕೆ ಸರಿಸಿದ್ದೇ ಜನರ ಪ್ರತಿಭಟನೆಯಿಂದ. ಈಗ ಮತ್ತೊಂದು ಪ್ರಾಜೆಕ್ಟ್ ಮುಂದೆ ಬಂದು ನಿಂತಿದೆ. ಕಬ್ಬನ್ ಪಾರ್ಕ್ನಲ್ಲಿ ವಾಯು ವಿಹಾರ ಮಾಡುವವರ ಗಮನ ಸೆಳೆದಿದೆ.

ಹೈಕೋರ್ಟ್ ಅನೆಕ್ಸ ಕಟ್ಟಡವು (ಏಳು ಅಂತಸ್ತಿನ) ಹಿಂದಿನ ಚುನಾವಣಾ ಆಯುಕ್ತರ ಕಚೇರಿಯನ್ನು ಕೆಡವಿ ತಲೆಯೆತ್ತಲಿದೆ. ಈಗ ಅದಕ್ಕೆ ಹೈಕೋರ್ಟ್ನಿಂದ ಶರತ್ತನ್ವಯ ಅನುಮತಿ ದೊರಕಿದೆ. ಯಾವ ಮರವನ್ನೂ ಬಲಿ ತೆಗೆದುಕೊಳ್ಳದೆ ಬಿಬಿಎಂಪಿ ಪರವಾನಗಿ ಯಂತೆ ಹೊಸ ಕಟ್ಟಡ ಏಳ ಬಹುದಾಗಿದೆ .

ಪರಿಸರ ಪ್ರಜ್ಞೆ ಹಾಗೂ ಜಾಗೃತಿಯಿಂದಾಗಿ ಯಾವುದೇ ಅಭಿವೃದ್ಧಿ ಕೆಲಸಗಳಾಗಲು ಜನ ಅಡ್ಡಗಾಲು ಹಾಕುತ್ತಿದ್ದಾರೆ ಎಂಬ ಆರೋಪ ಸರ್ಕಾರ ಮತ್ತು ಆಡಳಿತ ಪಕ್ಷದವರದ್ದು

ಹೇಗೋ ಏನೋ ಮತ್ತೊಂದು ದಾರಿ ಹುಡುಕಲು ಸಂಬಂಧ ಪಟ್ಟ ಇಲಾಖೆ ಮತ್ತು ಸಚಿವರು ಸಂಚು ಹಾಕುವುದನ್ನು ವಿರೋಧ ಪಕ್ಷದವರು ಬಯಲು ಮಾಡುತ್ತಾರೆ. ಸ್ಟೀಲ್ ಬ್ರಿಡ್ಜ್ ಬದಲು ಏಲಿವೇಟೆಡ್ ಕಾರಿಡಾರ್ ಯೋಜನೆ ಪ್ರಾರಂಭಿಸುತ್ತಾರೆ. ಪರಿಸರ ಕಾಪಾಡುವ ಪ್ರಯತ್ನಗಳೂ ರಾಜಕೀಯ ಅಸ್ತ್ರವಾಗಿ ಬಳಕೆಯಾಗುವ ಬದಲು ನಿಜವಾದ ಕಾಳಜಿಯಾಗಬೇಕು ಎಂಬುದೇ ನಮ್ಮೆಲ್ಲರ ಬಯಕೆ. ಗಗನಚುಂಬಿ ಕಟ್ಟಡಗಳಿಂದ ಬಿದ್ದ ಮಳೆ ನೀರು ಹರಿಯಲು ಜಾಗವಿಲ್ಲದೆ ಚರಂಡಿ ನೀರನ್ನು ಸೇರಿಸಿಕೊಂಡು ಮನೆ ಮಠಗಳಿಗೆ ನುಗ್ಗುವುದನ್ನು ನೋಡಿದ್ದೇವೆ. ಮರಗಳನ್ನು ಕಡಿಯದಿದ್ದರೂ ತಾವಾಗಿಯೇ ಬೀಳುತ್ತಿವೆ. ಅದನ್ನು ಉಳಿಸಿಕೊಳ್ಳಲಾಗುತ್ತಿಲ್ಲ. ಹೊಸ ಜಾಗ ಸಿಗುತ್ತಿಲ್ಲ . ನಗರದಲ್ಲಿ ಹಸಿರು ಇನ್ನೂ ಕಾಣಿಸಿಕೊಳ್ಳುತ್ತಿರುವ ಕಬ್ಬನ್ ಪಾರ್ಕ್ ಹಾಗೂ ಲಾಲ್ ಬಾಗ್ನಲ್ಲೂ ಹೊಸ ಕಟ್ಟಡಗಳು

ಏಳುವುದಾದರೆ ಮುಂದಿನ ಪೀಳಿಗೆಗೆ ನಾವು ಬಿಟ್ಟು ಹೋಗುವ ಸಸ್ಯ ಸಂಕುಲವಾದರೂ ಏನು? ಈ ಸಂದರ್ಭದಲ್ಲಿ ಕೈಲಾಸಂ ಹೇಳಿದ ಕಪ್ಪೆ ಪ್ರಸಂಗ ನೆನೆಪಾಗುತ್ತದೆ.


ಒಮ್ಮೆ ಶ್ರೀ ರಾಮಚಂದ್ರ ತನ್ನ ರಾಮಬಾಣವನ್ನು ನೆಲಕ್ಕೆ ಹೊಡೆಯುತ್ತಾ ಬರುತ್ತಿರುತ್ತಾನೆ. ಆಗ ಒಂದು ಬಾಣ ಅಲ್ಲಿದ್ದ ಕಪ್ಪೆಯನ್ನು ನಾಟಿ ಭೂಮಿ ಸೇರಿತ್ತಂತೆ. ಮಾತ್ರ ಭೂಮಿಯೊಡನೆ ತನ್ನನ್ನು ಪೋಣಿಸಿದ ರಾಮಬಾಣವನ್ನು ಕೀಳಲಾರದೆ ನೊಂದು ನನಗೆ ಯಾವ ತೊಂದರೆ ಬಂದರೂ ನಿವಾರಣೆಗೆ ರಾಮನ ಮೊರೆ ಹೋಗುತ್ತಿದೆ . ಆದರೆ ಈಗ ಆ ರಾಮನಿಂದಲೇ ಸಮಸ್ಯೆಯಾಗಿದೆ

ನಾನು ಯಾವ ರಾಮನ ಮೊರೆ ಹೋಗಲಿ ಎಂದು ಗೋಳಾಡಿತಂತೆ. ಬೆಂಗಳೂರಿನ ನಾಗರಿಕರಿಗೆ ಆ ಕಪ್ಪೆಯ ಅವಸ್ಥೆಯೇ ಆಗಿದೆ. ಕಬ್ಬನ್ ಪಾರ್ಕ್ ಉಳಿಸಲು ನ್ಯಾಯಾಲಯಕ್ಕೆ ಹೋದರೆ ಆ ಉಚ್ಚ ನ್ಯಾಯಾಲಯದ ಏಳು ಮಾಳಿಗೆ ಕಟ್ಟಡದ ವಿರುದ್ಧ ಹೋರಾಡುವ ವಿಪರ್ಯಾಸ.

ಇಂತಿಷ್ಟೇ ಎತ್ತರ ಇರಬೇಕೆಂದು ನ್ಯಾಯಾಲಯ ನಿಗದಿ ಮಾಡಿದರೂ ಪರಿಸರಕ್ಕೆ ಹಾನಿ ತಪ್ಪದು. ಆ ಹೊಸ ಕಟ್ಟಡಕ್ಕೆ ಬರುವ ಕೆಲಸಗಾರರ ಸಂಖ್ಯೆ ಮತ್ತು ಅವರ ವಾಹನಗಳ ಸಂಖ್ಯೆಯ ಅಂದಾಜು ಎಷ್ಟಿರಬಹುದು? ಇದಲ್ಲದೆ ಆ ಇಲಾಖೆಗೆ ಸಂಬಂಧಪಟ್ಟ ಕೆಲಸಗಳಿಗೆ ಬಂದು ಹೋಗುವ ಜನಗಳ ಮತ್ತು ಅವರ ವಾಹನಗಳ ಸಂಖ್ಯೆ ಹತೋಟಿಗೆ

ಸಿಗಬಹುದೆ? ಉದ್ಭವವಾಗುವ ವಾಯು ಮಾಲಿನ್ಯವನ್ನು ತಡೆಗಟ್ಟಬಹುದೆ ?ಬೆಂಗಳೂರು ರಾಜ್ಯದ ರಾಜಧಾನಿಯಾದರೂ ದೇಶದ ರಾಜಧಾನಿಯಾಗುವ ದಿನಗಳು ದೂರವಿಲ್ಲವೆನಿಸುತ್ತದೆ .(ಪಲ್ಯೂಷನ್ ) ಜನ ನಂಬುವುದು ನ್ಯಾಯಾಲಯ ಮತ್ತು ದೇವರನ್ನು . ಈಗ ಶ್ರೀ ರಾಮಚಂದ್ರನೇ ಸುಪ್ರೀಂ ನ್ಯಾಯಾಲಯದ ತೀರ್ಪಿಗೆ ಕಾಯುವ ಕಾಲ ! ಕಾಲಾಯ ತಸ್ಮೈ ನಮಃ. ■

---



# ಓದುಗರ ಪತ್ರ

ನವೆಂಬರ್ ರಾಜ್ಯೋತ್ಸವ(1) ಮಾಸದ ಸಂಚಿಕೆಯ ಎಲ್ಲ ಲೇಖನ ಪಟ್ಟಾಗಿ ಓದಿದ ನನಗೆ ಜೋಕುಗಳ ಬಗೆಗೆ ಹೊಳೆದ ವಿನೂತನ ವ್ಯಾಖ್ಯಾನ ಇದು–

ಅತ್ಯಂತ ಪರಿಣಾಮಕಾರಿ ಜೋಕ್ ಯಾವುದೆಂದರೆ, ಅದನ್ನು ಓದಿ ಗಂಟೆಯಾಗಿರಲಿ, ಬೇರೇನೋ ನೋಡಿದ್ದಾಗಿರಲಿ, ಇದರ ನೆನಪಾದೊಡನೆ ಮುಸಿಮುಸಿ ಇಲ್ಲವೇ ಫಕ್ ಎಂದು ಅಥವಾ ಗೊಳ್ಳನೆ ನಗುವಂತಿರಬೇಕು.

ಈ ಸಂಚಿಕೆಯಲ್ಲಿ ಅಂಥವು ಆರಕ್ಕೂ ಮಿಕ್ಕಿವೆಯಾದರೂ ಸ್ಥಾಳೀಪುಲಾಕನ್ಯಾಯದಂತೆ ಎರಡನ್ನೇ ಎತ್ತಾಡಿದ್ದೇನೆ!

ಒಂದನೆಯದು – ಚುಟುಕಾದರೂ ಮೊಟಕಿಸುವ 'ಮನೆಕೆಲಸದವಳ ಮಹತ್ವ'

ಎರಡನೆಯದು – ಬೇರೊಬ್ಬ ಮನೆಕೆಲಸದಾಕೆಯ ಮಹಿಮೆ ಬಣ್ಣಿಸುವ ''ನೀವೂ ಒಂದ್ ಕಾರ್ಡ್ ಮಾಡಿಸ್ಕೊಳ್ಳಿ..'

ಇವರಿಬ್ಬರ ಸಾಮ್ಯ ಲಕ್ಷಣ ಮಾತ್ರ ತಮ್ಮ ಮನೆ ನಿಗರಾಣಿ ಕೈಲಾಗದೆ ಸುಲಭವಾಗಿ ದೊರೆವ ಈ ಹೆಣ್ಣುಮಕ್ಕಳ ದುಡಿತದಿಂದ ದಿನಹಾಕುವ ನಮ್ಮಂಥವರಿಗೆ ಚುರುಕಿನ ಜೊತೆ ಮರುಕವನ್ನೂ ಉಕ್ಕಿಸುತ್ತೆ.

ಶ್ರೀಮತಿ ವಸುಮತಿ ಉಡುಪರ ಕಥಾಕೌಶಲ ಎಷ್ಟು ಪಳಗಿದ್ದೆಂದರೆ, ಪ್ರಥಮಾವಿಭಕ್ತಿಯ ನಿರೂಪಣೆ, ನಾವು ನಿತ್ಯ ಕಾಣುವ ಕಾಡುವ ಮತ್ತು ಪರಸ್ಪರ ಪೆದ್ದುತನವನ್ನು ಒಪ್ಪುವ, ಒಡತಿ ಮತ್ತು ಸೇವಕಿಯರ ಪ್ರಸಂಗದ ಮುಕ್ತಾಯವಂತೂ ಓ ಹೆನ್ರಿಯ ಕಥೆಯಂತೆ ಅನಿರೀಕ್ಷಿತ ತಿರುವುಳ್ಳದ್ದು.

ಇದನ್ನು ಮೆಚ್ಚದ, ಫಿದಾ ಎನ್ನದ ಅಪರಂಜಿಯ ಓದುಗರು ಯಾರೂ ಇಲ್ಲವೆಂದೇ ನನ್ನ ಬಲವಾದ ನಂಬುಗೆ.

ನಮಸ್ಕಾರ

**ರಾಘವೇಂದ್ರ ಭಟ್ಟ ಮೈಸೂರು**

## ಕಾನನದಿ ಮಲ್ಲಿಗೆಯು ಮೌನದಿಂ....

ಈರ್ವರು ಅಪರಂಜಿ ಅಭಿಮಾನಿಗಳು ಬಹು ಔದಾರ್ಯದಿಂದ ತಲಾ ಐದು ಸಾವಿರ ರೂ.ಗಳ ದೇಣಿಗೆಯನ್ನು ನಮ್ಮ ಟ್ರಸ್ಟ್‌ಗೆ ನೀಡಿದ್ದಾರೆ. ಶ್ರೀಮತಿ ಸ್ವರ್ಣ ಪ್ರೇಮಕುಮಾರ್ ಅವರು ಅಕ್ಟೋಬರ್ ಇಪ್ಪತ್ತೈದರಂದು ಹಾಗೂ ಶ್ರೀಮತಿ ಸಿ. ಎಂ. ನಾಗಲಕ್ಷ್ಮಿ ಅವರು ಅಕ್ಟೋಬರ್ ಇಪ್ಪತ್ತೆಂಟರಂದು ಆನ್‌ಲೈನ್ ಮೂಲಕ ನೀಡಿರುವ ದೇಣಿಗೆಗಳು ನಮಗೆ ಸೇರಿವೆ. ಆದರೆ ಇವರುಗಳು ನಮಗೆ ತಮ್ಮ ವಿಳಾಸಗಳನ್ನು ನೀಡದಿರುವುದರಿಂದ ಅವರಿಗೆ ಹಣ ಸಂದಾಯವಾಗಿರುವುದಕ್ಕೆ ನಮ್ಮ ರಸೀತಿಯನ್ನು ಕಳುಹಿಸುವ ಮಾರ್ಗವೇ ತಿಳಿಯದಾಗಿದೆ. ಮಾನ್ಯ ಶ್ರೀಮತಿಯರೀರ್ವರೂ ಇದನ್ನು ನೋಡಿದಾಕ್ಷಣ ನಮ್ಮನ್ನು ಸಂಪರ್ಕಿಸಿ ತಮ್ಮ ವಿಳಾಸಗಳನ್ನು ನೀಡಬೇಕಾಗಿ ವಿನಂತಿ.

ನಮ್ಮ ಈ ಮೇಲ್ ಐಡಿ ಇಂತಿದೆ : koravanjiaparanji@gmail.com

# ಪ್ರೈಮೇಟು ಕ್ಲೈಮೇಟು

*(ದಾಶರಥಿ ದೀಕ್ಷಿತರ ಕ್ಷಮೆ ಕೋರಿ)* ● **ಸಂಜಯ ಹಾವನೂರ**

"ಗುರುಗಳೇ ನಾವು ಯಾವ ಜಾತಿ?" ಭಕ್ತನೊಬ್ಬ ವಾಟ್ಸಾಪ್‌ನಲ್ಲಿ ಕಳಿಸಿದ್ದ ಐಟಂ ಸಾಂಗ್ ನೋಡುವುದರಲ್ಲಿ ತಲ್ಲೀನರಾಗಿದ್ದ ಗುರುಗಳು ತಬ್ಬಿಬ್ಬಾಗಿ ಎದ್ದು ಕೂತರು. ಏಕಾದಶೀ ದಿನ ತಲೆ ಹೊಟ್ಟೆ ಎರಡೂ ಒಟ್ಟಿಗೆ ಖಾಲಿಯಾದಾಗ ಈ ದಡ್ಡಮಡ್ಡಿ ಅಡ್ಡಾದಿಡ್ಡಿ ಪ್ರಶ್ನೆ ಕೇಳುವುದು ಮಾಮೂಲು. ಆದರೆ ಈ ಪಾಟಿ ಗಹನವಾದ ವಿಷಯ ಅಂದರೆ ..."ನಾವು ಮನುಷ್ಯ ಜಾತಿಯವರೇ ಎಂದಿಗೂ. ಅನುಮಾನ ಯಾಕೆ?"

"ನಾವು ಪ್ರೈಮೇಟು ಕುಲದವರು ಅಂತ ಮರುಳ ಹೇಳುತ್ತಿದ್ದಾನೆ ಗುರೂಜೀ" ಪ್ರೈಮೇಟು ಅಂದರೆ ಮಂಗ ಅಲ್ಲವೇ. ಗುರುಗಳಿಗೆ ಪೂರ್ವಾಶ್ರಮದಲ್ಲಿ ಅರ್ಧಮರ್ಧ ಕಲಿತಿದ್ದ ಭಯಾಲಜಿ ನೆನಪಾಗಿತ್ತು. "ಮರುಳಾ ನಾವೆಲ್ಲ ಕೋತಿಗಳು ಅಂತ ತಿಳಿದಿದ್ದೀಯಾ?"

"ಎಲ್ಲಾದರೂ ಉಂಟೇ ಗುರುಗಳೇ ಗಾಂಪೇಶನಾಣೆ." ಮರುಳ ಅಡ್ಡ ಬಿದ್ದ. "ಪ್ರೈಮೇಟುಗಳು ಐದು ಕೋಟಿ ವರ್ಷ ಹಿಂದಿನವು. ಎರಡು ಕೋಟಿ ವರ್ಷಗಳ ಹಿಂದೆಯೇ ನಾವು ಮಂಗತನ ಬಿಟ್ಟು ಮನುಷ್ಯರಾಗಲು ತೊಡಗಿದ್ದೇವೆ" ಮಂಗತನ ಕಳೆದುಕೊಂಡು ಕೋಟಿ ವರ್ಷಗಳ ನಂತರವೂ ಹೀಂಗಿರುವ ಶಿಷ್ಯಂದಿರೇ ಎಂದು ಗುರುಗಳು ಘಾಬರಿಯಾದರು. "ಎಲೈ ಮರುಳನೇ ಮಂಗನಿಂದ ಮನುಷ್ಯರಾಗಲಿಕ್ಕೆ ಎರಡು ಕೋಟಿ ವರ್ಷ ಬೇಕೇ?"

"ಜೀವ ವಿಕಾಸ ಬಲು ನಿಧಾನ ಗುರುವೇ. ಮರದಿಂದ ಕೆಳಗಿಳಿದು ಎರಡು ಕಾಲಿನಿಂದ ನಡೆಯುತ್ತ ಕೈಗಳನ್ನು ಉಪಯೋಗಿಸಲು ಕಲಿಯಲಿಕ್ಕೆ ಅಷ್ಟು ಕಾಲ ಬೇಕು" ಮರದಲ್ಲಿ ಹಾಯಾಗಿ ಹಣ್ಣು ತಿಂದು ನೇತಾಡುವ ಬದಲಿಗೆ ಇದೆಲ್ಲ ಕಿತಾಪತಿ ಯಾಕೆ ಬೇಕಿತ್ತು ಪ್ರೈಮೇಟುಗಳಿಗೆ ಎಂದು ಮಂಕ ಗ್ರೊಚಿದ. ಏಕಾದಶಿ ದಿನ ಅವನಿಗೆ ಮಂಗಗಳ ಉಪವಾಸದ್ದೇ ಧ್ಯಾನ. ಮರದಲ್ಲಿ ಉಳಿದುಕೊಂಡಿದ್ದರೆ ಎರಡು ಹಣ್ಣು ಎಕ್ಸ್ಟ್ರಾ ಸಿಗುತ್ತಿತ್ತಲ್ಲವೇ? "ಅದು ಪ್ರಕೃತಿ ನಿಯಮ ಶ್ರೀಮಾನ್ ಮಂಕನ್. ವಿಕಾಸವಾಗದಿದ್ದರೆ ಯಾರಿಗೂ ಉಳಿಗಾಲವಿಲ್ಲ"

"ಸರ್ವೈವಲ್ ಆಫ್ ದಿ ಫಿಟ್ಟೆಸ್ಟೂ ಕೇಳಿಲ್ಲವೇ?" ಗಾಂಪರೊಡೆಯರು ನೆನಪು ಮಾಡಲಾಗಿ, "ಗೊತ್ತು ಗುರುಗಳೇ. ಫಿಟ್ ಆಗಲಿಕ್ಕೇ ನಾನೂ ಪೈಲ್ವಾನ್ ಪಾಪಣ್ಣನವರ ಗರಡಿಯಲ್ಲಿ ದಿನಾ ದಂಡೆ ಬಸ್ಕಿ ಅಂತ ಒದ್ದಾಡ್ತಿರೋದು" ಎಂದು, ಧಡಿಯನಾಗಲು ಪಾಡು ಪಡುತ್ತಿದ್ದ ಮಡೆಯನೂ ಒಡನುಡಿದನು.

"ಹ್ಹಹ್ಹಹ್ಹ ... ಫಿಟ್ಟೆಸ್ಟ್ ಅಂದರೆ ಬರೀ ಬಲವಾನರು ಎಂದಲ್ಲ. ಪರಿಸರಕ್ಕೆ ಫಿಟ್ ಆಗುವವರು ಅಂತ. ಹಾಗೆ ಫಿಟ್ ಆಗದ ತಳಿಗಳು ಥಟ್ ಅಂತ ನಿರ್ವಂಶವಾಗುತ್ತವೆ"

"ಇರಬಹುದು ಮರುಳಾ. ಆದರೆ ಎರಡು ಕೋಟಿ ವರ್ಷಗಳಾದರೂ ನಾವಿನ್ನೂ ಫಿಟ್ ಆಗಿಲ್ಲವೇ? ಅಂಥಾ ಏನು ಸಮಸ್ಯಾ ಅದರಲ್ಲಿ?"

"ಸಮಸ್ಯೆ ಅಂದರೆ ಕೋಟಿ ವರ್ಷಗಳಲ್ಲಿ ಪರಿಸರವೂ ಬದಲಾಗುತ್ತಲೇ ಇರುತ್ತದೆ ಗುರುಗಳೇ. ಪ್ರತಿ ಸುಮಾರು ಲಕ್ಷ ವರ್ಷಕ್ಕೊಮ್ಮೆ ನಮ್ಮ ಗ್ರಹ ಒಮ್ಮೆ

ಹಿಮಯುಗ ಒಮ್ಮೆ ಬಿಸಿಯುಗ ಅಂತ ಜೋಕಾಲಿಯಾಡುತ್ತ ಇದೆ. ಅದಕ್ಕೆ ಹೊಂದಿಕೊಳ್ಳುವ ಪ್ರಯತ್ನದಲ್ಲೇ ನಾವು ಮಂಗಗಳಿಂದ ಬೇರೆಯಾಗಿ ಹೋಮೋ ಸೇಪಿಯನ್ನರಾಗಿದ್ದು"

"ಸರಿ ಸರಿ. ಕ್ಲೈಮೇಟು ಬದಲಾದಂತೆ ಪ್ರೈಮೇಟುಗಳೂ ಬದಲಾಗಬೇಕು ಅಷ್ಟೇ ತಾನೇ. ಲಕ್ಷ ವರ್ಷ ಅಂದರೆ ನೂರು ಯುಗದ ಟೈಮಿದೆ. ನಾವು ನೂರು ವರ್ಷ ಇರುವವರು ಯಾಕೆ ತಲೆ ಕೆಡಿಸಿಕೊಂಡು . . . ಮೊದಲು ನಾಳಿನ ಚಿಂತೆ ಮಾಡೋಣ. ಶಿಷ್ಯಂದಿರಾ ದ್ವಾದಶಿ ಪಾರಣಿಗೆ ಏನು ವ್ಯವಸ್ಥಾ?"

"ತಲೆ ಕೆಡಿಸಿಕೋ ಬೇಕಾದ ಪರಿಸ್ಥಿತಿ ಬಂದಿದೆ ಗುರುಗಳೇ" ತಪ್ಪಿ ಸಯನ್ಸ್ ಚಾನೆಲ್ಲಿನಲ್ಲಿ ದೀರ್ಘವಾದ ಡಾಕ್ಯುಮೆಂಟರಿ ನೋಡಿದ್ದ ಮರುಳನ ತಲೆಯಲ್ಲಿ ಅದೇ ಸುರುಳಿ ಸುರುಳಿಯಾಗಿ ಸುತ್ತುತ್ತಿತ್ತು. "ಇವತ್ತು ಪ್ರೈಮೇಟುಗಳು ಕ್ಲೈಮೇಟನ್ನೇ ಬಲು ಬೇಗ ಬದಲಿಸುತ್ತಾ ಇದ್ದೇವೆ. ಹವಾಮಾನವೆಲ್ಲ ಏರು ಪೇರು . . . ವಾತಾವರಣ ದಿನದಿನಕ್ಕೂ ಬಿಸಿಯಾಗುತ್ತಿದೆ"

"ನಿನಗೆಲ್ಲೋ ಮರುಳು ಸಿಸ್ಯಾ. ಹೋದವಾರ ತಾನೇ ಜ್ವರ ಏರಿ ನಾವು ಮೂರು ದಿನ ಚಳಿಯಲ್ಲಿ ಕಂಬಳಿ ಹೊದ್ದು ನಡುಗುತ್ತ ಮಲಗಿಲ್ಲವೇ?"

"ಹೌದು ಗುರುಗಳೇ ನಾನೇ ಶ್ರೀ ಗುರುಸಾರ್ವಭೌಮ ಲಿಕ್ಕರ್ ಶಾಪಿನಿಂದ ಒಂದು ಡೋಸು ಔಷಧಿ ಉದ್ರಿಯಲ್ಲಿ ತಂದು ಕಂಬಳಿಯ ಒಳಗೆ ಕುಡಿಸಿದ್ದಕ್ಕೆ ನೀವು ಕ್ವಿಕ್ಕರ್ ಆಗಿ ..."

"ಮುಠ್ಠಾಳಾ ಕಟ್ಟಿಡು ನಿನ್ನ ಪುರಾಣಾ. ಟೆಂಪರೇಚರ್ರು ಏರುತ್ತಿರುವುದು ಕ್ಲೈಮೇಟಿಗಲ್ಲ ಪ್ರೈಮೇಟುಗಳಿಗೆ ಅಂತ ಉದಾಹರಣೆ ಕೊಡುತ್ತಿದ್ದೆವು ಅಷ್ಟೇ"

"ಕರೆಕ್ಟು ಗುರುಗಳೇ. ನನ್ನ ಸೋದರತ್ತೆಯ ಎರಡನೇ ಅಳಿಯನ ಭಾವಮೈದುನನ ಹೆಂಡತೀ ತಮ್ಮ ಅಮೇರಿಕಾದಲ್ಲಿ ಹೋದ ವರ್ಷ ಅಗ್ದಿ ಭಯಂಕರ ಹಿಮವೃಷ್ಟಿಯಾಗಿ ಅವರೂರಿನಲ್ಲಿ ಘೂಟುಗಟ್ಟಲೇ ಬರ್ಫ ... ಮಂಡೆ ಮರಗಟ್ಟಿ ಹೋಗುವ ಥಂಡಿಯಲ್ಲಿ ವಾರಗಟ್ಟಲೇ ಪರದಾಡಿದ್ದು ವೀಡಿಯೋ ಕಳಿಸಿದ್ದಾನೆ." ಮಂಕ ಒಗ್ಗರಣೆ ಹಾಕಿದ.

"ಹಿತ್ತಲ ತಂಪು ಹವಾಮಾನವಲ್ಲ! ವಾತಾವರಣ ಅನ್ನೊದು ಜಗತ್ತಿನ ತುಂಬ ಮಾತ್ರವಲ್ಲ ಅದರ ಮೇಲಕ್ಕೆ ನೂರಾರು ಮೈಲು ಎತ್ತರವಾಗಿ ಪೇರಿಸಿದೆ. ವಿಜ್ಞಾನಿಗಳು ಆಕಾಶದಿಂದ ಸಮುದ್ರದ ತಳದ ವರೆಗೆ ಎಲ್ಲ ಕಡೆಗೆ ಥರ್ಮಾಮೀಟರುಗಳನ್ನು ನಟ್ಟು ನೂರಾರು ವರ್ಷ ಅಳೆಯುತ್ತ ಬಂದಿದ್ದಾರೆ. ಉತ್ತರ ದಕ್ಷಿಣ ಧ್ರುವಗಳಲ್ಲಿ ಪರ್ವತದಷ್ಟು ಹಿಮ ಪ್ರತಿವರ್ಷ ಕರಗಿ ಮಾಯವಾಗುತ್ತಿದೆ. ಸಮುದ್ರದ ಸರಾಸರಿ ತಾಪಮಾನ, ಪಾತಳಿ ನಿಧಾನಕ್ಕೆ ಏರುತ್ತ ಬಿರುಗಾಳಿಗಳ ಸಂಖ್ಯಾ, ಆರ್ಭಟ ಯಮಬಲ ... ಬೇರೆ ಬೇಡ ಗಾಂಪಗುರುವೇ ನಮ್ಮ ನಾಡಲ್ಲೇ ನೋಡಿ ವರ್ಷಗಟ್ಟಲೇ ಮಳೆ ಇಲ್ಲ ಆಮೇಲೆ ಅಕಾಲದಲ್ಲಿ ತಿಂಗಳ ತುಂಬ ಕುಂಭದ್ರೋಣ ಧಾರೆ ... ಅನಾವೃಷ್ಟಿ ಯಾವಾಗ, ಅತಿವೃಷ್ಟಿ ಯಾವಾಗ ... ಯಾರು ಬಲ್ಲರು ಈವಾಗ?"

"ಬರೋಬರಿ ಮರುಳಾ ಆಸೇತು ಹಿಮಾಚಲದಿಂದ ಶ್ರೀಲಂಕೆಯ ವರೆಗೆ ಎಲ್ಲ ಕಡೆ ಈ ಪಾಟಿ ಹವಾಮಾನ ಅಸ್ತವ್ಯಸ್ತವಾಗಿ, ಬೆಳೆ ಖೋತಾ ಋತುಗಳೇ

ಲಾಪತಾ ... ನಾವೂ ಕೇಳಿದ್ದೀವಿ. ಅದಕ್ಕೆ ಏನು ಕಾರಣಾ ಹೇಳುವಂಥವನಾಗು." ಗುರುಗಾಂಪರು ಅಪ್ಪಣೆ ಮಾಡಿದರು.


"ಇದಕ್ಕೆಲ್ಲ ನಮ್ಮ ಆಸೆಬುರುಕತನವೇ ಕಾರಣ" ಎಂದು ಮರುಳ ಹೇಳಿದಾಗ ಮಡ್ಡಿ ಅಳುವುದೊಂದೇ ಬಾಕಿ. "ಹಯ್ಯೋ ದೇವರಾಣೆ ... ಮೂರು ಹೊತ್ತು ಗುರುಗಳ ಸೇವೆ ಎರಡು ಊಟ, ಒಂದು ಹೊತ್ತು ಫಳಾರ ಬಿಟ್ಟು ಯಾವ ಆಸೆಯೂ ನನಗಿಲ್ಲ. ಅಷ್ಟೂ ಬ್ಯಾಡವೇ?" ಊಟ ನೈವಿದ್ಯ ಪ್ರಸಾದ ... ಒಂದಿಷ್ಟು ಪಾನಕ ಕೋಸುಂಬರಿ ಕೊಬ್ಬರಿ ಬೆಲ್ಲ ಇಷ್ಟಕ್ಕೂ ಆಸೆ ಪಡದಿದ್ದರೆ ಗಾಂಪತನ ಏನು ಉಳೀತು? "ಏನನ್ಯಾಯ ಗುರುವರ್ಯಾ. ಬಡವರು ಬದುಕಲಿಕ್ಕೆ ಆಸೆ ಪಡುವುದೇ ಜಗತ್ಪ್ರಳಯಕ್ಕೆ ಕಾರಣ ಅಂತ ಆರೋಪಿಸಿದರೆ ಹೇಗೆ?" ಮಡೆಯ ಮುತ್ಠಾಳರು ಒಂಟಿಕಾಲಲ್ಲಿ ನಿಂತು ಜಂಟಿಯಾಗಿ ಅರಿಕೆ ಮಾಡಿಕೊಂಡರು.

"ತಾಳಿ ತಾಳಿ ಗುರುಬಂಧುಗಳೇ ಗೋಳಾಡಬ್ಯಾಡಿ. ನಾವು ಅಂದರೆ ಗವಿಪುರದ ಗಾಂಪರೆಂದು ಹೇಳಲಿಲ್ಲ. ಊಟ ತಿಂಡಿ ಮನೆ ಮಠ ಎಲ್ಲರಿಗೂ ಬೇಕೇಬೇಕು. ಅವು ಆಸೆಗಳಲ್ಲ, ಅಗತ್ಯಗಳು. ಅದರ ಮೇಲೆ ಚೂರು ಪಾರು ಆಸೆಗಳಿದ್ದರೆ ಅದೂ ತಪ್ಪಲ್ಲ. ಮಿತಿ ಮೀರಿದರೆ ಮಾತ್ರ ದುರಾಶೆ. ಇವತ್ತು ಕೆಲವೇ ಕೆಲವು, ಪ್ರೈಮೇಟು ಕುಲಸಂಭೂತ ಕೆಂಭೂತಗಳು ಹವೆಯನ್ನು ಹದಗೆಡಿಸಿ ಹಾವಳಿ ಎಬ್ಬಿಸುತ್ತಿವೆ. ಕಾರು ಕಾರ್ಖಾನೆ ಕಲ್ಲಿದ್ದಲು ಕಾರ್ಬನ್ನು ... ಕಾಡು ಕಂಡಲ್ಲಿ ಕೊಡಲಿ ಹಾಕಿ, ನೀರು ಕಂಡಲ್ಲಿ ಕೊಳಚೆ ಹರಿಸಿ ಕೋಟಿ ಕೋಟಿ ಕೊಳ್ಳೆ ಹೊಡೆದು ಕುಣಿಯುತ್ತಿವೆ." ಮರುಳ ದುಃಖಿಸಿದ.

"ಖರೆ ಹೇಳಿದೆ ಮರುಳಾ. ಆಸೆ ದುಃಖಕ್ಕೆ ದಾರಿ, ದುರಾಶೆ ದುರ್ದೆಶೆಯ ಮಾರಿ. ನಾಳೆಯ ಮಕ್ಕಳ ಯೋಚನೆ ಇಲ್ಲದೇ ಇವತ್ತಿನ ಐಶ್ವರ್ಯ, ನಶ್ವರ ಸುಖದ ಹಿಂದೆ ಬಿದ್ದವರು ... ಈ ಪಾಪಿಗಳನ್ನು ಸಹಿಸಿಕೊಂಡು ಇರುವುದೇ ನಮ್ಮ ಪಾಡಾಗಿದೆ. ಗರೀಬ ಗಾಂಪರು ಇನ್ನೇನು ಮಾಡಲಿಕ್ಕೆ ಸಾಧ್ಯ?"

"ಬರೀ ಸಹಿಸಿಕೊಳ್ಳುತ್ತಾ ಇಲ್ಲ. ಪ್ರತಿ ಚುನಾವಣೆಯಲ್ಲಿ ಅವರನ್ನು ಅವರ ಏಜೆಂಟರನ್ನು ಆಯ್ಕೆ ಮಾಡುತ್ತಲೇ ಇದ್ದೇವೆ. ಅದನ್ನು ತಪ್ಪಿಸಬೇಕು ಗುರುದೇವಾ. ... ಪ್ರೈಮೇಟು ಕ್ಲೈಮೇಟು ಎರಡೂ ಅನ್ಯೋನ್ಯವಾಗಿ ಸಾವಯವ ಸಂಬಂಧ ... ನಿಧಾನಕ್ಕೆ ಒಂದೇ ಹದದಲ್ಲಿ ಬದಲಾಗಬೇಕು. ಮನುಷ್ಯರೆಂಬೋ ಪ್ರಾಣಿಗಳು ವಿಕಾಸವಾಗಲಿಕ್ಕೆ ಎಷ್ಟು ಲಕ್ಷ ವರ್ಷಗಳೂ ಕಡಿಮೆಯೇ ಅದರ ಮಧ್ಯ ವರ್ಷ ವರ್ಷಕ್ಕೆ ಎರ್ರಾಬಿರ್ರಿಯಾಗಿ ವಾತಾವರಣ ಬಿಸಿಯಾಗುತ್ತಿದ್ದರೆ ಅದಕ್ಕೆ ಫಿಟ್ ಆಗದೇ ನಾವು ಚಟ್ ಆಗುತ್ತೀವಿ ಅಷ್ಟೇ. ಇದನ್ನು ನಮ್ಮ ಜನಗಳಿಗೆ ತಿಳಿಸಿ ಹೇಳುವವರಿಲ್ಲ. ನಮ್ಮ ಎಮ್ಮೆಲ್ಯೆ ಎಂಪಿಗಳಿಗೂ ಕೇರ್ ಮಾಡಲಿಕ್ಕೆ ಪುರುಸೊತ್ತಿಲ್ಲ." ಅಷ್ಟಕ್ಕೆ ಗುರುಗಾಂಪರಿಗೆ ಆವೇಶ ಉಕ್ಕಿ ಎದ್ದು ನಿಂತರು.

"ಶಿಷ್ಯಂದಿರಾ! ಏಳಿ ಎಚ್ಚೆತ್ತುಕೊಳ್ಳಿ!! ಮಠದ ಮೂಲೆ ಮೂಲೆಯಲ್ಲಿ ಹುಡುಕಿ ಶಂಖ ತೊಳೆದು ತಮ್ಮಟೆ ಬಿಗಿದು ಕಟ್ಟಿ ಕಿಲುಬು ಹತ್ತಿರುವ ಹಿತ್ತಾಳೆ ಜಾಗಟೆಗೆ ಹುಣಿಸೇ ಹಣ್ಣು ತಿಕ್ಕಿ ಝುಳ ಝುಳ ... ಹೊಸ ಸಂದೇಶ ಸತ್ರ ನಾಳೆಯಿಂದಲೇ ಆರಂಭ. ಕ್ಲೈಮೇಟನ್ನು ಚೊಕ್ಕಟಗೊಳಿಸದ ಯಾವನಿಗೂ ಇನ್ನು ಮೇಲೆ ಯಾವ ಗಾಂಪನದೂ ವೋಟಿಲ್ಲ." ಎಂದು ಘೋಷಿಸಲು, ಪ್ರೈಮೇಟು ಕುಲ ರಕ್ಷಕಾ, ನರ ವಾನರ ವಿಮೋಚಕಾ, ಶರಣು ಗಾಂಪಾಧೀಶ್ವರಾ ಎಂದು ಶಿಷ್ಯಗಣ ಕಾಲಿಗೆರಗಿತು. ■


ಢಂ
ಘಂ
Naganath
Gowripura


Naganath G S


ನೀರು ಯಾಕೆ ಬೇಕಮ್ಮಾ?
ಕೋಲಾ ಕುಡೀರಿ !!

# ಯುವಕರಿವರೇ'ನಮ್ಮ'.?

**ಭುವನೇಶ್ವರಿ ಹೆಗಡೆ**

ಮಂಗಳೂರಿನ ರಾಮಕೃಷ್ಣ ಆಶ್ರಮದವರು ಕೆಲ ವರ್ಷಗಳಿಂದ ಒಂದು ಸ್ವಚ್ಛತಾ ಕ್ರಾಂತಿಯನ್ನೇ ಮಾಡಿದ್ದಾರೆ. ಪ್ರತಿ ಭಾನುವಾರ ಒಂದೊಂದು ಏರಿಯಾವನ್ನು ಆರಿಸಿಕೊಂಡು ಅಲ್ಲಿಯ ಸ್ಥಳೀಯರ ಭಾಗವಹಿಸುವಿಕೆಯಿಂದ ಇಡೀ ಬೀದಿಯ ಕಸ ತೆಗೆದು ರಸ್ತೆಗಳನ್ನು ಒಪ್ಪವಾಗಿಸಿ ಬೋರ್ಡ್‌ಗಳಿದ್ದರೆ ಅವುಗಳನ್ನು ನೇರವಾಗಿಸಿ ಬಣ್ಣ ಹಚ್ಚಿ ನಮ್ಮ ಬೀದಿ ಸ್ವಚ್ಛ ಬೀದಿ ಎಂದು ಬರೆದು ಹಾಕುತ್ತಾರೆ. ನಮ್ಮ ಬೀದಿಯ ಎರಡೂ ಕಡೆಗಳಲ್ಲಿ ಅಪಾರ್ಟ್ಮೆಂಟ್ಗಳಿವೆ. ಎಲ್ಲದರಲ್ಲೂ ಹಿರಿಯ ಜೀವಗಳಿವೆ. ಕೆಲವರಿಗೆ ಮನೆ ಮಕ್ಕಳು ಸೊಸೆಯರು ನೋಡಿಕೊಳ್ಳುವ ಅದೃಷ್ಟವಿದ್ದರೆ ಇನ್ನು ಕೆಲವರಿಗೆ ಪೇಡ್ ನರ್ಸ್ ವ್ಯವಸ್ಥೆ. ಮುಷ್ಟಿ ಅನ್ನವೊ ಗಂಜಿಯೋ ಉಂಡು ಮುಷ್ಟಿ ಗಟ್ಟಲೆ ಮಾತ್ರೆಗಳನ್ನು ನುಂಗಿ ಎರಡು ಗಂಟೆಯಿಂದ ಮೂರುವರೆ ಯವರೆಗೆ ಈ ಹಿರಿಯರೆಲ್ಲ ಹೆಚ್ಚಾಗಿ ನಿದ್ರಿಸುತ್ತಾರೆ. ಎಲ್ಲ ಮನೆಗಳೂ ತಣ್ಣಗಿರುತ್ತವೆ.

ಮೂರೂವರೆಯಿಂದ ಹೇಗೂ ಶಾಲೆಯ ಮಕ್ಕಳು ಪುಟು ಪುಟು ಬೊಬ್ಬೆ ಮಾಡುತ್ತಾ ಬರುವ ಸಮಯಕ್ಕೆ ಇಡೀ ಅಪಾರ್ಟ್ಮೆಂಟ್ ನಳನಳಿಸುತ್ತದೆ. ಹಿರಿಯ ಜೀವಗಳಿಗೂ ಜೀವ ಸಂಚಾರವಾಗುತ್ತದೆ. ಮೊಮ್ಮಗುವಿನ ಶಾಲೆಯ ಪರಾಕ್ರಮ ಕೇಳಲು ಎದ್ದು ಬಂದು ಹಾಲ್ನಲ್ಲಿ ಕೂತಿರುತ್ತಾರೆ. ಸಾಲು ಫ್ಲ್ಯಾಟ್ಗಳಿಗೆ ಗೇಟು, ವಾಚ್ಮ್ಯಾನ್ ಅದರೆದುರು ಡಾಂಬರು ಹಾಕಿದ ಸ್ವಚ್ಛ ಖಾಸಗಿ ರಸ್ತೆ. ಬಗೆ ಬಗೆಯ ಮರಗಳ ನೆರಳು. ಮಧ್ಯಾಹ್ನದ ನಿಶ್ಶಬ್ದ ದಿನಚರಿ. ನಾನು ಬಾಲ್ಕನಿಯಲ್ಲಿ ಕುರ್ಚಿ ಹಾಕಿ ಪ್ರತಿಷ್ಠಾಪನೆ ಮಾಡಿಕೊಂಡು ಓದುವ ನಿರಾತಂಕ ದಿನಚರಿ ರೂಢಿಸಿಕೊಂಡಿದ್ದೇನೆ.

ಕೆಲ ದಿನಗಳ ಹಿಂದೆ ಒಂದು ದಿನ ಮಧ್ಯಾಹ್ನ ಎರಡು ಗಂಟೆಗೆಲ್ಲ ಅಪಾರ್ಟ್ಮೆಂಟ್ಗಳಲ್ಲಿ ಊಟವಾಗಿ ವಯಸ್ಸಾದವರೆಲ್ಲ ವಿಶ್ರಾಂತಿಗೆ ಜಾರಿದ್ದರು. ಅಷ್ಟರಲ್ಲಿ ನಮ್ಮೆದುರಿನ ಖಾಸಗಿ ಡಾಂಬರು ರಸ್ತೆ ತುಂಬಾ ಐದಾರು ಬೈಕುಗಳು ಭರ ಭರ ಬಂದಿಳಿದವು. ಪ್ರತಿ ಬೈಕಿಗೂ ಒಬ್ಬ ಹುಡುಗ ಹಿಂದುಬದಿ ಒಬ್ಬ ಹುಡುಗಿ. ನೋಡಿದರೆ ಕಾಲೇಜು ವಿದ್ಯಾರ್ಥಿಗಳಂತೆ ಕಾಣುತ್ತಿದ್ದರು. ಬಂದಿದ್ದೇ ಕೇಕೆ ಹಾಕಿ ಬೊಬ್ಬೆ ಶುರು ಹಚ್ಚಿಕೊಂಡರು. ಮಾತಿಗೂ ಮುಂಚೆ ಮತ್ತು ನಂತರ ನಗು ಕೇಕೆ. ಹುಡುಗಿಯರ ಪೈಕಿ ಒಬ್ಬಳು ಗರಿಗರಿ ಪಿಳಿಪಿಳಿ ಡ್ರೆಸ್ ಹಾಕಿದ್ದರಿಂದ ಅವಳ ಬರ್ತ್ಡೇ ಇರಬೇಕು ಎಂದುಕೊಂಡೆ. ನನ್ನ ಸಂಶಯ ನಿಜವಾಯಿತು. ಇನ್ನೊಂದು ಬೈಕಿನಲ್ಲಿ ಕೂದಲಿಗೆ ವಿಪರೀತ ಅಸಡ್ಡಾಳ ಬಣ್ಣ ಬಳಿದುಕೊಂಡ ಹುಡುಗನೊಬ್ಬ ದೊಡ್ಡದೊಂದು ಕೇಕ್ ಪ್ಯಾಕೆಟ್ ಹಿಡಿದು ಬಂದಿಳಿದ. ಎಲ್ಲ ಬೈಕುಗಳನ್ನು ಟೇಬಲ್ಲಿನ ರೀತಿಯಲ್ಲಿ ಜೋಡಿಸಿ ಕೇಕ್ ಕಟ್ ಮಾಡಿ ಹ್ಯಾಪಿ ಬರ್ತಡೇ ಟು ಯೂ ಡಿಯರ್ ನೈನಾ ಎಂದು ದೊಡ್ಡದಾಗಿ ಒದರಿದರು. ಅಪಾರ್ಟ್ಮೆಂಟುಗಳ ಎಲ್ಲರಿಗೂ ಕೇಳುವ ಬೊಬ್ಬೆ. ಎಲ್ಲ ಕಿಟಕಿಗಳಲ್ಲಿ ಮನೆಯಲ್ಲೇ ಇರುವ ಹಿರಿಯರು ಬಗ್ಗಿ ಬಗ್ಗಿ ನೋಡತೊಡಗಿದರು. ಎದುರಿನ ರಸ್ತೆಯಲ್ಲಿ ಜಮಾಯಿಸಿದ್ದ ದ್ವಿಚಕ್ರ ವಾಹಿನಿಗಳನ್ನು ಕಂಡು ಯಾರದ್ದೋ ಮನೆಗೆ ಬಂದಿರಬಹುದೆಂದು ಕೊಂಡು ಸುಮ್ಮನಾದರು. ಸ್ವಲ್ಪ ಹೊತ್ತಿಗೆ ಕೇಕ್ ಕತ್ತರಿಸುತ್ತ ಬೀದಿ ಡಾನ್ಸ್ ನಡೆಯಿತು. ಚಪ್ಪರದಂತೆ ಮರಗಳಿದ್ದ ಈ ಸ್ವಚ್ಛ ರಸ್ತೆ ಅವರಿಗೆ ಪಾರ್ಕಿನಲ್ಲಿ ಅಥವಾ ಕಾಲೇಜಿನಲ್ಲಿ ದೊರೆಯದ ತಂಪು ಏಕಾಂತವನ್ನು ಸೃಷ್ಟಿಸಿತ್ತು. ಕಾಲೇಜುಗಳಲ್ಲಿ ತರಗತಿಗಳ ಒಳಗೆ ಕೇಕ್ ಕಟ್ ಮಾಡುವುದನ್ನು ಡ್ಯಾನ್ಸ್ ಮಾಡುವುದನ್ನು ನಿಷೇಧಿಸಲಾಗಿದೆ. ಆದರೂ ಪಾರ್ಕುಗಳಲ್ಲಿ ಲೈಬ್ರರಿಯ ಹಿಂದೆ ನಡೆಯುವ ಇಂತಹ

ಬರ್ತ್ ಡೇ ಕೂಟಗಳನ್ನು ನಾನು ನೋಡಿದ್ದೇನಾದ್ದರಿಂದ ಹೆಚ್ಚು ಆಶ್ಚರ್ಯ ಎನಿಸಲಿಲ್ಲ. ಏನೋ ಯುವಜನತೆಯ ಉತ್ಸಾಹ, ಒಂದಿಷ್ಟು ಹೊತ್ತು ಬೊಬ್ಬೆ ಮಾಡಿ ಕುಣಿದು ಹೋಗಬಹುದು ಎಂದುಕೊಂಡೆ.

ಪಾಪ ಹಿರಿಯರೆಲ್ಲ ವಿಶ್ರಾಂತಿಯ ನಿದ್ದೆಯನ್ನು ಬಿಡಬೇಕಾಗಿ ಬಂದು ಕಿಟಕಿಯ ಬಳಿ ಬಾಲ್ಕನಿಯಲ್ಲಿ ಕೂತು ಯುವ ಮನರಂಜನೆಯನ್ನು ನೋಡತೊಡಗಿದ್ದರು. ಕೇಕನ್ನು ಹುಡುಗಿಯ ತಲೆಗೆ ತಿಕ್ಕಲಾಯಿತು ಮುಖಕ್ಕೆಲ್ಲಾ ಬಳಿದರು. ಹ್ಯಾಪಿ ಬರ್ತ್ ಡೇ ಹಾಡಿದರು ಈಗ ಕೇಕ್ ತಿನ್ನುವ ಸರದಿ. ನೋಡುತ್ತೇನೆ, ಯಾವುದೋ ನೋಟ್ಬುಕ್ ತೆಗೆದು (ಅರ್ಥಶಾಸ್ತ್ರದ ನೋಟ್ ಬುಕ್ ಇರಬಹುದೇ ದೇವರೇ) ಒಂದೊಂದಾಗಿ ಹಾಳೆಯನ್ನು ಒಬ್ಬ ವಿದ್ಯಾರ್ಥಿ ಹರಿದು ಹರಿದು ಕುಣಿಯುತ್ತಲೇ ಹಂಚಿ ಮುಗಿಸಿದ. ಹುಡುಗಿಯೋರ್ವಳು ಕಟ್ ಮಾಡಿಟ್ಟ ಕೇಕಿನ ತುಂಡುಗಳನ್ನು ಆ ಕ್ಲಾಸ್ ನೋಟ್ ಬುಕ್ಕಿನ ಹರಿದ ಹಾಳೆಗಳ ಮೇಲೆ ಇಡತೊಡಗಿದಳು. ಮತ್ತೆ ಗದ್ದಲ, ಮತ್ತೆ ನಗು, ಮತ್ತೆ ಕೋಲಾಹಲ. ಅಂತೂ ಕೇಕ್ ತಿಂದು ಮುಗಿಸಿದರು .ಕೈ ಒರೆಸಿಕೊಳ್ಳಲು ಪುನಃ ಇನ್ನೋರ್ವ ವಿದ್ಯಾರ್ಥಿಯ ನೋಟ್ ಬುಕ್ ಹೊರಗೆ ಬಂತು. ನಾವು ಅಧ್ಯಾಪಕರು ಜೋಪಾನವಾಗಿ ನೋಡುವ ನೋಟ್ ಬುಕ್ ಎಂಬ ವಸ್ತು ಹೀಗೆ ತಿನ್ನಲು ಕೈ ಒರೆಸಲು ಬಳಸಲ್ಪಡುವ ದನ್ನು ನೋಡಿ ನನಗ್ಯಾಕೋ ಹೊಟ್ಟೆಯೊಳಗೆ ಸಂಕಟವಾಗಿತ್ತು. ಇಷ್ಟರಲ್ಲಿ ತಾಸೆರಡು ತಾಸೆ ಕಳೆದಿರಬಹುದು.

ಯಾರಿಗೂ ಎಲ್ಲಿಗೂ ಹೋಗುವ ಅವಸರವಿದ್ದಂತೆ ತೋರುತ್ತಿರಲಿಲ್ಲ. ತಿಂದ ಮೇಲೆ ಆ ಕಾಗದದ ಮುದ್ದೆಗಳನ್ನು ಒಂದು ಬ್ಯಾಗಿನಲ್ಲಿ ಹಾಕಿಕೊಂಡು ಹೋಗಬಹುದೆಂದು ನಾನು ನಿರೀಕ್ಷಿಸಿದ್ದೆ. ಆದರೆ ಅತ್ಯಂತ ಸಹಜವೆಂಬಂತೆ ತಮ್ಮ ಕಾಲು ಬುಡದಲ್ಲಿಯೇ ಆ ಮುದ್ದೆ ಕಾಗದಗಳನ್ನು ಬಿಸಾಡಿದ ಯುವಜನತೆ ತಮ್ಮ ಕೋಲಾಹಲದಲ್ಲಿಯೇ ಮುಂದುವರಿದಿದ್ದರು. ಸ್ವಚ್ಛವಾಗಿದ್ದ ನಮ್ಮೆದುರಿನ ಕಪ್ಪು ಡಾಂಬರು ರಸ್ತೆ ಈಗ ಬಿಳಿ ಕಸದ ಮುದ್ದೆಗಳಿಂದ ತುಂಬಿ ಹೋಯಿತು. ನನಗೆ ಒಮ್ಮೊಮ್ಮೆ ಅಪರೂಪಕ್ಕೆ 'ಪಿತ್ತ ಕೆರಳುವ ಕಾಯಿಲೆ' ಇದೆ ಎಂದು ಮಗಳು ಹೇಳುತ್ತಿರುತ್ತಾಳೆ. ಈ ದೃಶ್ಯ ನೋಡಿದ ಕೂಡಲೇ ನನ್ನ ಪಿತ್ತ ಕೆರಳುವಿಕೆ ಜಾರಿಗೆ ಬಂತು. ನನ್ನ ಬಾಲ್ಕನಿಯಿಂದ ಮಾತನಾಡಿದರೆ ಮೊದಲನೇ ಮಹಡಿಯ ಬಾಲ್ಕನಿಯಾ ದ್ದರಿಂದ ರಸ್ತೆಯಲ್ಲಿ ರುವವರಿಗೆ ಸರಾಗವಾಗಿ ಕೇಳುತ್ತಿತ್ತು.ತಾವು ಬಿಸಾಡಿದ ಕಸವನ್ನು ಎತ್ತಿಕೊಂಡು ಒಯ್ಯುವ ಯಾವ ಲಕ್ಷ ಣವೂ ಇಲ್ಲದೇ ಒಂದೊಂದು ಜೋಡಿ ಬೈಕ್ ಏರಲು ಪ್ರಾರಂಭ ಮಾಡಿದರು. ನಾನು ತಡೆದುಕೊಳ್ಳಲಾರದೆ "ಎಕ್ಸ್ಕ್ಯೂಸ್ ಮಿ ಜೆಂಟಲ್ ಮೆನ್, ನೀವು ಕಾಲೇಜು ಸ್ಟೂಡೆಂಟ್ಸ್ ಇರಬಹುದಲ್ಲವೇ? ನೀವು ತಿಂದು ಹಾಕಿದ ಕಸವನ್ನು ಯಾರು ಎತ್ತಬೇಕು? ನಮ್ಮ ಶಾಂತ ಸ್ವಚ್ಛ ಪರಿಸರಕ್ಕೆ ಬಂದು ಗದ್ದಲ ಎಬ್ಬಿಸಿ ಹಾಳು ಮಾಡಿದ್ದಲ್ಲದೆ ಕಸದ ರಾಶಿಯನ್ನು ಹೀಗೆ ಸುರಿದಿದ್ದೀರಿ. ಎತ್ತಿ ಕೊಂಡು ಹೋಗಿ ಮೂಲೆಯಲ್ಲಿರುವ ಡಸ್ಟ್ ಬಿನ್ನಿಗೆ ಹಾಕಿದಿರೋ ಸರಿ ಇಲ್ಲವಾದರೆ ನಿಮ್ಮೆಲ್ಲ ಬೈಕುಗಳ ಫೋಟೊ ತೆಗೆದಿದ್ದೇನೆ, ನಂಬರ್ ಸಮೇತ ಕಂಪ್ಲೇಂಟ್ ಕೊಡುತ್ತೇನೆ" ಎಂದು ಅಬ್ಬರಿಸಿದೆ. ಅನಿರೀಕ್ಷಿತ ದಾಳಿಯಿಂದ ಎಚ್ಚೆತ್ತುಕೊಂಡ ಯುವಕರು ಬಾಯಿ ಮುಚ್ಚಿ ಕೊಂಡು ಬೈಕಿನಿಂದ ಕೆಳಗಿಳಿದು ತಮ್ಮ ಕೇಕ್ ಡಬ್ಬಿ ಹಾಗೂ ಕಾಗದದ ಮುದ್ದೆಗಳನ್ನು ಎತ್ತಿಕೊಂಡು ಹೊರಟರು. ರಭಸವಾಗಿ ಹೊರಟ ಬೈಕೊಂದರ ಹುಡುಗ ನನ್ನತ್ತ ದುರುದುರು ನೋಡಿದಾಗ ನಾನು ನಗುತ್ತ ಖುಷಿಯಿಂದ ಟಾಟಾ ಎಂದು ಕೈ ಬೀಸಿದೆ. ಇದನ್ನು ನಿರೀಕ್ಷಿಸದಿದ್ದ ಯುವಕರು ಕಕ್ಕಾಬಿಕ್ಕಿಯಾಗಿ ಹೊರಟೇ ಹೋದರು. ಸಾತ್ವಿಕ ಕೋಪ ಆಗಾಗ ಅಲ್ಲಲ್ಲಿ ಪ್ರಕಟವಾಗುತ್ತಲೇ ಇದ್ದರೆ ಪರಿಸರ ಪ್ರಜ್ಞೆಯ ಅರಿವಿಲ್ಲದ ಕಿರಿಯರಿಗೂ ಹಿರಿಯರಿಗೂ ಬಿಸಿ ಮುಟ್ಟಿಸಬಹುದು. ■

# ಕಲ್ಯಾಣಪುರಿಯ ಕೆರೆಗಳು (ಏಕಾಂಕ ನಾಟಕ)

●ಚಿತ್ರಾ ರಾಮಚಂದ್ರನ್

**(ದೃಶ್ಯ : ಅಮ್ಮ ದೋಸೆ ತಯಾರಿಸುತ್ತಿದ್ದಾಳೆ. ಊಟದ ಮೇಜಿನ ಮೇಲೆ ವಾರ್ತಾಪತ್ರಿಕೆಯನ್ನು ಹರಡಿಕೊಂಡು ಕುರ್ಚಿಯಲ್ಲಿ ಕುಳಿತಿದ್ದಾರೆ ಅಜ್ಜಿ)**

ಅಮ್ಮ : (ದನಿಯೆತ್ತಿ) ವರ್ಷಾ..! ಬಿಸಿ ಬಿಸಿ ಮಸಾಲೆ ದೋಸೆ ರೆಡಿ!

ಧ್ವನಿ : (ಗಟ್ಟಿಯಾಗಿ) ಇಗೋ ಬಂದೆ ಅಮ್ಮ!

(ನೀರು ಹರಿವ ಶಬ್ದ)

ಅಮ್ಮ : (ಮತ್ತೆ ದನಿಯೆತ್ತಿ) ವರ್ಷಾ! ನಲ್ಲಿ ತಿರುಗಿಸಬೇಡ! ಬಕೆಟಲ್ಲಿ ನೀರಿದೆ! ಕೈ ತೊಳೆಯಕ್ಕೆ ಮಗ್ ಯೂಸ್ ಮಾಡು!

ಧ್ವನಿ : ಸರಿ ಅಮ್ಮ!

(ವರ್ಷಾ ಪ್ರವೇಶಿಸಿ ಮೇಜಿನ ಮುಂದೆ ಕುಳಿತುಕೊಳ್ಳುತ್ತಾಳೆ. ಅಮ್ಮ ತಟ್ಟೆಯಲ್ಲಿ ಮಸಾಲೆ ದೋಸೆ ತಂದಿಡುತ್ತಾಳೆ)

ವರ್ಷಾ : ನಲ್ಲಿ, ಷವರ್ ಎಲ್ಲ ಇದ್ದೂ ನಮ್ಮನೇಲಿ ಅವನ್ನೆಲ್ಲ ಯಾಕೆ ಬ್ಯಾನ್ ಮಾಡಿದ್ದೀವಿ ಅಂತ ನಮ್ಮ ಫ್ರೆಂಡ್ಸ್ ಎಲ್ಲ ನಗ್ತಾರೆ!

ಅಜ್ಜಿ : (ಪತ್ರಿಕೆಯನ್ನು ಮಡಚಿಟ್ಟು) ಎಲ್ರೂ ಹಾಗೇ ಕೇಳ್ತಾರೆ ವರ್ಷಾ! (ನಗುತ್ತ) ನಮ್ಮನ್ನ ಕ್ರೇಜಿ ಫ್ಯಾಮಿಲಿ ಅನ್ನೋರೂ ಇದ್ದಾರೆ! ನಾನು ಚಿಕ್ಕವಳಿದ್ದಾಗ ನಮ್ಮಮ್ಮ ಹೇಳೋವ್ರು! ಸುಂಸುಮ್ನೆ ನೀರು ಚೆಲ್ಲಿದ್ರೆ ದರಿದ್ರ ನಮ್ಮನ್ನ ಹುಡುಕ್ಕೊಂಡು ಬರತ್ತಂತೆ!

ಅಮ್ಮ : ಕರೆಕ್ಟ್! ಈಗ ಅದೇತಾನೆ ಆಗಿರೋದು! ಎಲ್ಲಿ ನೋಡಿದ್ರೂ ನೀರಿನ ಸಮಸ್ಯೆ! ಇದು ದರಿದ್ರ ಅಲ್ದೆ ಇನ್ನೇನು?

ಅಜ್ಜಿ : ಕೆಲವರು ಸ್ನಾನ ಮುಗಿದಿದ್ರೂ ಷವರ್ ಕೆಳಗೆ ನಿಂತೇ ಇರ್ತಾರೆ! ಕೈ ತೊಳೆಯೋವಾಗ, ಮುಖ ತೊಳೆಯೋವಾಗ, ನಲ್ಲಿ ನೀರನ್ನ ಹರಿಬಿಡ್ತಾನೇ ಇದ್ರೆ ಅದೆಷ್ಟು ನೀರು ಚರಂಡಿಗೆ ಸೇರಿ ವೇಸ್ಟ್ ಆಗತ್ತೆ!

ಅಮ್ಮ : ಅಷ್ಟು ನೀರನ್ನ ಉಳಿತಾಯ ಮಾಡಿದ್ರೆ ಎಷ್ಟೋ ಜನರ ಬಾಯಾರಿಕೆಯನ್ನ ತಣಿಸಬೋದು!

ವರ್ಷಾ : ನಮ್ಮ ಮನೇಲಿ ನೀರು ಉಳಿಸಿಬಿಟ್ರೆ ಎಲ್ಲ ಸರಿ ಹೋಗತ್ತಾ?

(ಅಮ್ಮ ಚಟ್ನಿ ಬಡಿಸುತ್ತಾಳೆ)

ಅಜ್ಜಿ : ನಮ್ಮ ಊರಲ್ಲಿ ಎಷ್ಟು ಕೋಟಿ ಮನೆಗಳಿವೆ? ಅವುಗಳಲ್ಲಿ ಎಷ್ಟು ಮಂದಿ ವಾಸವಾಗಿದ್ದಾರೆ! ಎಲ್ರೂ ಮನಸ್ಸು ಮಾಡಿ ಇಂತಾ ಪ್ರಯತ್ನ ಮಾಡಿದ್ರೆ ಒಟ್ಟಾರೆ ಅದೆಷ್ಟು ನೀರು ಉಳಿತಾಯವಾಗತ್ತೆ? ಯೋಚ್ನೆ ಮಾಡು!

ವರ್ಷಾ : ಇದನ್ನೆಲ್ಲಾ ನಾವು ಸ್ಕೂಲಲ್ಲೇ ಕಲ್ತಿದ್ದೀವಿ ಅಜ್ಜಿ! (ಅಮ್ಮನನ್ನು ಕುರಿತು) ಇನ್ನು ಸ್ವಲ್ಪ ಚಟ್ನಿ ಹಾಕಮ್ಮ.

ಅಜ್ಜಿ : ಕಲಿತರೆ ಮಾತ್ರ ಸಾಲದು ಪುಟ್ಟಿ! ಅದನ್ನ ನಮ್ಮ ನಮ್ಮ ಮನೆಗಳಲ್ಲೂ ರೂಢಿಸಿಕೊಳ್ಬೇಕು!

ಯಾರೂ ಮಾಡ್ತಿಲ್ಲ! ನಾವ್ಯಾಕೆ ಮಾಡ್ಬೇಕು ಅಂತ ಎಲ್ರೂ ಇದ್ಬಿಟ್ರೆ ನೀರಿನ ಸಮಸ್ಯೆಗೆ ಪರಿಹಾರವೇ ಇಲ್ಲ!

ವರ್ಷಾ : ನಮ್ಮೂರಲ್ಲಿ ನದಿ ಇದ್ದಿದ್ರೆ ಎಷ್ಟು ಚೆನ್ನಾಗಿರ್ತಿತ್ತು!

ಅಮ್ಮ : ನಮ್ಮೂರಲ್ಲಿ ನದಿ ಇಲ್ಲಾಂದವರ್ಯಾರು? ನಂದಿ ಬೆಟ್ಟದಲ್ಲಿ ಹುಟ್ಟಿ ಕನಕಪುರದ ವರೆಗೂ ಹರಿದು ಮೇಕೆದಾಟಿನಲ್ಲಿ ಕಾವೇರಿಯೊಂದಿಗೆ ಸಂಗಮವಾಗೋ ಅರ್ಕಾವತಿ ನಮ್ಮೂರ ನದಿ! ಅದೇ ನಂದಿ ಬೆಟ್ಟದಲ್ಲಿ ಉಗಮವಾಗೋ ದಕ್ಷಿಣ ಪಿನಾಕಿನಿ ನದಿ ನಮ್ಮ ಅನೇಕ ಕೆರೆಗಳನ್ನು ತುಂಬಿಸಿ, ನೆರೆ ರಾಜ್ಯಕ್ಕೆ ಹರಿದು ಬಂಗಾಳ ಕೊಲ್ಲಿಯನ್ನು ಸೇರುತ್ತೆ.

ವರ್ಷಾ : (ಬೆರಗಿನಿಂದ) ಹೌದಾ?

ಅಜ್ಜಿ : ಅಷ್ಟೇ ಅಲ್ಲ! ನಮ್ಮ ದೊಡ್ಡ ಬಸವನ ಬಲಗಡೆಯ ಪಾದ ವೃಷಭಾವತಿ ನದಿಯ ಉಗಮಸ್ಥಾನ!

ವರ್ಷಾ : ನಮ್ಮೂರಲ್ಲಿ ಮೂರು ಮೂರು ನದಿಗಳು! ಆದ್ರೆ ನಾನು ಒಂದನ್ನೂ ನೋಡಿಲ್ಲ! ಬಸವನ ಗುಡಿಯಲ್ಲಿ ನದಿ ಅಂದ್ರೆ ಆಶ್ಚರ್ಯವಾಗಿದೆ!

(ಅಮ್ಮ ಸ್ವೀಟ್ ತಂದಿಟ್ಟು ತಾನೂ ಕುಳಿತುಕೊಳ್ಳುತ್ತಾಳೆ)

ಅಜ್ಜಿ : ನಮ್ಮೂರ ನದಿಗಳ ಬಗ್ಗೆ ಹೇಳ್ತೀನಿ ಕೇಳು!

ವರ್ಷಾ : (ಸ್ವೀಟನ್ನು ಸವಿಯುತ್ತ) ಹೇಳು ಅಜ್ಜಿ! ನಮ್ಮ ನದಿಗಳೆಲ್ಲ ಎಲ್ಲಿ?

ಅಜ್ಜಿ : (ಗಂಭೀರ ಧ್ವನಿಯಲ್ಲಿ) ಎಲ್ಲ ಸತ್ತು ಹೋದವು!

ವರ್ಷಾ : (ಚಕಿತಳಾಗಿ) ಹಾ?

ಅಮ್ಮ : ಎಸ್ ಮೈಗರ್ಲ್! ನಗರದ ಪ್ರಜ್ಞಾಹೀನ ಬೆಳವಣಿಗೆ! ಎದ್ವಾತದ್ವಾ ಮೊಳೆತಿರೋ ಕಟ್ಟಡಗಳು! ನಮ್ಮ ನದಿಗಳೆಲ್ಲ ಮಹಾನಗರದ ಕಸ, ಕಚಡ, ಕೈಗಾರಿಕಾ ತ್ಯಾಜ್ಯಗಳನ್ನ ಒಯ್ಯುವ ವಾಹಿನಿಗಳಾಗಿಬಿಟ್ಟವು! ಸಾಲದ್ದಕ್ಕೆ ಅರಣ್ಯ ನಾಶ! ಅದರಿಂದ ಮಳೆಯ ಅಭಾವ! ನದಿ ಉಸಿರುಕಟ್ಟಿ ಸಾಯಲು ಇವೆಲ್ಲ ಸಾಲದೇ?

(ವರ್ಷಾಳ ಮುಖದಲ್ಲಿ ಚಿಂತೆಯ ರೇಖೆಗಳು)

ಅಜ್ಜಿ : ಪ್ರಕೃತಿಯ ಸಂಪನ್ಮೂಲಗಳನ್ನ ಪೂಜ್ಯ ಭಾವನೆಯಿಂದ ಕಂಡು, ಗೌರವವನ್ನು ಕೊಟ್ಟು, ಪರಸ್ಪರ ಸೇವೆ ಸಲ್ಲಿಸ್ಕೊಂಡು ಬಾಳ್ತಿದ್ದ ಕಾಲ ಒಂದು ಇತ್ತು! ಆದರೆ ಬರುಬರುತ್ತ ಮಾನವನಿಗೆ ಪ್ರಕೃತಿಯ ಸಂಪನ್ಮೂಲಗಳೆಲ್ಲ ತನ್ನ ಸುಖಕ್ಕೇ ಆಗ್ಬೇಕು ಅನ್ನೋ ಮನೋಭಾವ ಹೆಚ್ಚಾಗ್ಬಿಟ್ಟಿದೆ!

ಅಮ್ಮ : ಸ್ವಾರ್ಥದಿಂದ ಸಂಪನ್ಮೂಲಗಳನ್ನೆಲ್ಲ ಹೀರಿ ಹಿಪ್ಪೆ ಮಾಡ್ಬಿಟ್ಟಿದ್ದೀವಿ!

ಅಜ್ಜಿ: ಈಗ ನೀರು ನೀರು ಅಂತ ಬಡಕೊಂಡು ಏನು ಪುಣ್ಯ? ಈಗ ಏನಪ್ಪಾ ಅಂದ್ರೆ ಅನಾವೃಷ್ಟಿ ಹೋಗಿ ಅತಿವೃಷ್ಟಿ ಶುರುವಾಯ್ತು! ಆದ್ರೆ ಆ ನೀರನ್ನ ಸಂಗ್ರಹಿಸ ತಕ್ಕ ಕೆರೆಗಳು ಎಲ್ಲಿವೆ?

ವರ್ಷಾ : ಅಲಸೂರ್ ಕೆರೆ, ಸ್ಯಾಂಕಿ ಟ್ಯಾಂಕ್, ಹೆಬ್ಬಾಳ್ ಲೇಕ್, ಮಡಿವಾಳ ಲೇಕ್, ಜಕ್ಕೂರ್ ಕೆರೆ ಎಲ್ಲ ಇವೆಯಲ್ಲ ಅಜ್ಜಿ?

ಅಜ್ಜಿ : ಇವೆ! ಆದ್ರೆ ಹೇಗಿವೆ?

ವರ್ಷಾ : ನೀನೇ ಹೇಳು ಅಜ್ಜಿ!

ಅಜ್ಜಿ : ಒಂದಾನೊಂದು ಕಾಲದಲ್ಲಿ ಅನೇಕ ಸುಂದರವಾದ ದೊಡ್ಡ ದೊಡ್ಡ ಕಲ್ಯಾಣಿಗಳು – ಅಂದರೆ ಕೆರೆಗಳು – ಇದ್ದ ಕಾರಣ ನಮ್ಮೂರನ್ನ ಕಲ್ಯಾಣಪುರಿ ಅಂತಲೇ ಕರೀತಿದ್ರು. ಗುಡಿಗೊಂದು ಕಲ್ಯಾಣಿ, ತೋಟಕ್ಕೊಂದು ಕೊಳ, ಊರಿಗೊಂದು ಕೆರೆ ಅಂತ. ಸ್ವಾವಲಂಬಿಗಳಾಗಿದ್ದ ಪುಟ್ಟ ಪುಟ್ಟ ಗ್ರಾಮಗಳೆಲ್ಲ ಇವತ್ತು ಒಂದಾಗಿ ಕಲೆತು ಈ ಮಹಾನಗರವಾಗ್ಬಿಟ್ಟಿದೆ! ಪರಿಣಾಮ? ಕೃಷಿ ಮಾಡೋ ಜಮೀನು, ತೋಟಗಳ ಜೊತೆಗೆ ಅನೇಕ ಕೆರೆಗಳೂ ಕಾಣೆಯಾದವು. ಕೆಲವು ಕೆರೆಗಳು ತಿಪ್ಪೆ ಗುಂಡಿಗಳಾಗಿ, ಇನ್ನೂ ಕೆಲವು ಕೊಳಚೆ ನೀರಿನ ಹೊಂಡಗಳಾಗಿ ಪರಿವರ್ತಿಸಿಬಿಟ್ಟಿವೆ. ಹೂಳು ತುಂಬಿ ಬತ್ತಿ ಹೋದ ಕೆರೆಗಳನ್ನ ಮಲ್ಟಿ ಸ್ಟೋರಿ ಬಿಲ್ಡಿಂಗ್ಸ್ ಆಕ್ರಮಿಸಿಕೊಂಡಿವೆ. ಉಳಿದಿರೋ ಕೆಲವೇ ಕೆರೆಗಳು ಜೀವವನ್ನು ಕೈಯಲ್ಲಿ ಹಿಡ್ಕೊಂಡು ನರಳ್ತಿವೆ! ಹಾಗಾಗಿ ಕುಡಿಯೋ ನೀರಿನ ಅಭಾವ...

ವರ್ಷಾ : ನರಳ್ತಿರೋ ಕೆರೆಗಳನ್ನ ಕಾಪಾಡಕ್ಕಾಗಲ್ವೆ ಅಜ್ಜಿ?

ಅಜ್ಜಿ : ಕಾಪಾಡಬೇಕು ವರ್ಷಾ! ನೂರಾರು ವರುಷಗಳ ಹಿಂದೆ ರಾಜಮಹಾರಾಜರೆಲ್ಲ ದೇವರ ಸೇವೆಗಾಗಿ, ಪಶು, ಪ್ರಾಣಿ, ಪಕ್ಷಿ ಮತ್ತಿತರ ಜೀವಿಗಳಿಗಾಗಿ ಅನೇಕ ಕೆರೆಗಳನ್ನ ತೋಡಿಸಿ ಪುಣ್ಯ ಕಟ್ಕೊಂಡ್ರು! ಅಂದು ಅವರುಗಳು ಸಮಾಜ ಕಲ್ಯಾಣಕ್ಕಾಗಿ ನಿರ್ಮಿಸಿದ ಕೆರೆಗಳನ್ನ ಕಾಪಾಡ್ಕೊಳ್ಳೋದು ನಮ್ಮ ಕರ್ತವ್ಯ.

ವರ್ಷಾ : ಹಿಂದಿನ ಕಾಲದಲ್ಲೂ ಪ್ರಾಣಿ ಪಕ್ಷಿಗಳ ಬಗ್ಗೆ ಯೋಚಿಸಿದ್ರಲ್ಲ! ಅವುಗಳ ಬಳಕೆಗಾಗಿ ಕೆರೆ ಕಟ್ಟಿಸಿದ್ರಲ್ಲ! ಸೋ ಸ್ವೀಟ್!

ಅಜ್ಜಿ : (ಮುಸಿನಕ್ಕು) ವರ್ಷಾ! ಹಿಂದಿನ ಕಾಲದಲ್ಲಿ ಕೆರೆ ಸಂರಕ್ಷಣೆಗೆ, ನದಿ ಸಂರಕ್ಷಣೆ, ವನ್ಯ ಸಂರಕ್ಷಣೆಗೆ, ಪ್ರಾಣಿ ಸಂರಕ್ಷಣೆಗೆ ಅಂತ ಪ್ರತ್ಯೇಕ ಸಂಸ್ಥೆಗಳ್ಯಾವೂ ಇರ್ಲಿಲ್ಲ! ಆದ್ರೆ ಪ್ರತಿಯೊಬ್ಬರಿಗೂ ಪರಿಸರ ಪ್ರಜ್ಞೆ ಪಾರಂಪರಿಕವಾದ ಹುಟ್ಟು ಗುಣವೇ ಆಗಿತ್ತು. ಕೆರೆ ನೀರನ್ನಾಗಲಿ ನದಿ ನೀರನ್ನಾಗಲಿ ಮಲಿನಗೊಳಿಸಿದ್ರೆ ಪಾಪ ಬರತ್ತೆ ಅನ್ನೋ ಭಯ ಇತ್ತು! ನದಿಗಳನ್ನ ದೇವತೆ ಅಂತ ಪೂಜ್ಯ ಭಾವನೆಯಿಂದ ಕಾಣ್ತಿದ್ರು! ಮರಗಳನ್ನ ದೇವರ ವನ, ದೇವರ ಕಾಡು ಅಂತ ಸಂರಕ್ಷಣೆ ಮಾಡ್ತಿದ್ರು! ಹಸಿರು ಮರಗಳನ್ನ ಕಡಿಯೋದು 'ಪಾಪದ ಕಾರ್ಯ' ಅಂತ ನಿಷೇದಿಸಿದ್ರು! ಮನೆ ಮುಂದೆ ಅಕ್ಕಿ ಹಿಟ್ಟಿನ ರಂಗೋಲೆ ಬಿಟ್ಟು ಇರುವೆ ಅಳಿಲಿನಂತ ಸಣ್ಣ ಪುಟ್ಟ ಜೀವಿಗಳಿಗೆ ಆಹಾರ ಒದಗಿಸ್ತಿದ್ರು! ಕುಯ್ಯಲು ಮುಗಿದ್ರೆ ಗುಬ್ಬಚ್ಚಿಗಳಿಗಾಗಿ ಮನೆ ಬಾಗಿಲಿಗೆ ತೆನೆ ತೋರಣ ಕಟ್ತಿದ್ರು.... ಹೀಗೆ ಇನ್ನೂ ಎಷ್ಟೆಷ್ಟೋ!

ಅಮ್ಮ : ನಮ್ಮ ಹಳೆ ಪದ್ಧತಿಗಳನ್ನ ಗೊಡ್ಡು ಸಂಪ್ರದಾಯ ಅಂತ ಹೀಯಾಳಿಸ್ದೆ, ಅದನ್ನ ಸೈಂಟಿಫಿಕ್ ಆಗಿ ಅನಲೈಸ್ ಮಾಡಿದ್ರೆ, ಅವೆಲ್ಲ ಎಷ್ಟು ಅರ್ಥಪೂರ್ಣ ಚಟುವಟಿಕೆಗಳು ಅನ್ನೋದು ತಿಳಿಯತ್ತೆ! ಸರಿ! ಈಗ ಹೋಗಿ ಕೈ ತೊಳ್ಕೊಂಡು ಬಾ! 'ಎಂಜಲು ತಟ್ಟೆ ಮುಂದೆ ಕೂತಿದ್ರೆ ಊರವರೆಲ್ಲ ಶಪಿಸ್ತಾರೆ...' ಅಂತಾರೆ! (ನಗುತ್ತ) ಸೈಂಟಿಫಿಕಲಿ ಫಾರ್ ಹೈಜೀನಿಕ್ ರೀಸನ್ಸ್!

(ವರ್ಷಾ ತಟ್ಟೆಯನ್ನು ಸಿಂಕಿಗೆ ಹಾಕಿ, ಕೈ ತೊಳೆದು ವಾಪಸ್ಸು ಬರುತ್ತಾಳೆ)

ವರ್ಷಾ : ನಮ್ಮೂರ ಕೆರೆಗಳನ್ನೆಲ್ಲ ದುರಸ್ತಿ ಮಾಡಿಸಕ್ಕಾಗಲ್ವಾ ಅಜ್ಜಿ?

ಅಜ್ಜಿ : ಇಟ್ ಇಸ್ ವೆರಿ ಸ್ಯಾಡ್! ಸ್ಟೇಡಿಯಂ! ತಿಪ್ಪೆ ಗುಂಡಿ! ಮೋರಿ ನೀರಿನ ಹೊಂಡ!

ರಾಸಾಯನಿಕ ಹೊಗೆ ಮತ್ತು ಬೆಂಕಿ ಕಾರೋ ಕೊಳ್ಳಿ ದೆವ್ವ! ಹೀಗೆಲ್ಲ ಪರಿವರ್ತನೆಯಾಗಿವೆ ನಮ್ಮ ಕೆರೆಗಳು! ಇವನ್ನ ದುರಸ್ತಿ ಮಾಡೋದು ಅಷ್ಟು ಸುಲಭದ ಕೆಲಸವಲ್ಲ!

ವರ್ಷಾ : ಅಯ್ಯೋ! ಹಾಗಾದ್ರೆ ಇಷ್ಟೊಂದು ಮಳೆ ನೀರನ್ನ ಸಂಗ್ರಹಿಸಕ್ಕೆ ಮಾರ್ಗವೇ ಇಲ್ದೆ ಎಲ್ಲ ವೇಸ್ಟ್ ಆಗತ್ತೆ! ನೀರೆಲ್ಲ ರಸ್ತೇಲಿ ತುಂಬ್ಕೊಂಡ್ರೆ ಜನರ ಗತಿ?

ಅಜ್ಜಿ : ನಮ್ಮೂರಲ್ಲಿ ನದಿ ನೋಡಿಲ್ಲ ಅಂದೆಯಲ್ಲ? ಅಂಡರ್ ಪಾಸುಗಳಲ್ಲಿ ಮಳೆ ನೀರಿನ ನದಿ ಹರಿಯುತ್ತೆ ನೋಡು! 'ದೋಣಿ ಸಾಗಲಿ ಮುಂದೆ ಹೋಗಲಿ' ಅಂತ ಹಾಡ್ಕೊಂಡೇ ಹೋದ್ರೆ ಮನಸ್ಸಿನ ಕಿರಿಕಿರಿ ಕಡಿಮೆಯಾಗತ್ತೋ ಏನೋ!

ಅಮ್ಮ : ಇತ್ತೀಚಿಗೆ ಜನಸಾಮಾನ್ಯರು ಕೈಜೋಡಿಸಿ ಕೆರೆ ಸಂರಕ್ಷಣೆಯ ವೇದಿಕೆಗಳನ್ನ ಏರ್ಪಡಿಸಿಕೊಂಡಿದ್ದಾರೆ. ಕೆರೆಗಳನ್ನು ದುರಸ್ತಿ ಮಾಡಕ್ಕೆ ಹೊರಟಿದ್ದಾರೆ. ದಕ್ಷಿಣ ಪಿನಾಕಿನಿ ನದಿಯನ್ನ ಪುನರುಜ್ಜೀವನಗೊಳಿಸೋ ಕಾರ್ಯದಲ್ಲೂ ತೊಡಗಿದ್ದಾರೆ.

ವರ್ಷಾ : ಅಲ್ಲಿಯ ತನಕ ಮಳೆ ನೀರೆಲ್ಲ ವೇಸ್ಟ್ ಆಗತ್ತಲ್ಲಾ?

ಅಮ್ಮ : ವೇಸ್ಟ್ ಆಗಕ್ಕೆ ಬಿಡಬಾರದು! ಚೀನಾ ದೇಶದ ಡೊಂಗುವಾನ್ ನಗರದಲ್ಲಿ ಏಳು ಗಂಟೆಕಾಲ ಸತತವಾಗಿ ಜೋರು ಮಳೆಯಾದ್ರೂ ರಸ್ತೆಯಲ್ಲಿ ಒಂದು ಹನಿ ನೀರೂ ನಿಲ್ಲಲ್ಲ! ವೇಸ್ಟ್ ಅಂತೂ ಆಗೋದೇ ಇಲ್ಲ!

ವರ್ಷಾ : (ಆಶ್ಚರ್ಯದಿಂದ) ಹೇಗೆ ಅಮ್ಮ?

ಅಮ್ಮ : ರಸ್ತೆಗಳ ಎರಡು ಬದಿಯುದ್ದಕ್ಕೂ ಮಾಡಿರೋ ರಂಧ್ರಗಳ ಮೂಲಕ ನೀರೆಲ್ಲ ಬಸಿದು ಭೂಮಿಗಿಳಿದು ಅಂತರ್ಜಲವನ್ನ ರಿಚಾರ್ಜ್ ಮಾಡತ್ತಂತೆ! ಎಷ್ಟು ಸೊಗಸಾಗಿ ಮಳೆ ನೀರಿನ ಕೊಯ್ಲು ಮಾಡ್ತಾರೆ ನೋಡು ಅವರು!

ಅಜ್ಜಿ : ಪ್ರಕೃತಿ ನಮಗೆ ಕೊಟ್ಟದ್ದನ್ನ ನಾವು ಧನ್ಯವಾದಗಳೊಂದಿಗೆ ಅದಕ್ಕೆ ಹಿಂದಿರುಗಿಸಬೇಕು! ಪ್ರಕೃತಿಯನ್ನ ರಕ್ಷಿಸುವವರು ರಕ್ಷಿಸಲ್ಪಡುತ್ತಾರೆ!

ಅಮ್ಮ : ಟೆರೇಸಲ್ಲಿ ಬೀಳೋ ಮಳೆ ನೀರನ್ನೆಲ್ಲ ಕಲೆಕ್ಟ್ ಮಾಡಿ ಶೋಧಿಸಿ ಬೋರ್ ವೆಲ್ಗೆ ಸಾಗಿಸಿ ಅಂತರ್ಜಲವನ್ನ ರಿಚಾರ್ಜ್ ಮಾಡಬೋದು! ದಿನ ನಿತ್ಯದ ಬಳಕೆಗೆ ರೈನ್ ವಾಟರ್ ಹಾರ್ವೆಸ್ಟಿಂಗ್ ಮಾಡಿ ಸಂಗ್ರಹಿಸಿದ ಮಳೆ ನೀರನ್ನ ಉಪಯೋಗಿಸ್ಕೊಬೋದು! ಇವೆಲ್ಲ ಜಲ ಸಂರಕ್ಷಣೆ ಮಾಡೋ ಸುಲಭವಾದ ವಿಧಾನಗಳು!

ವರ್ಷಾ : ರೈನ್ ವಾಟರ್ ಹಾರ್ವೆಸ್ಟಿಂಗ್ ಬಗ್ಗೆ, ಅದರ ಅವಶ್ಯಕತೆಯ ಬಗ್ಗೆ ಈಗ ಅರ್ಥವಾಯಿತು! ನಮ್ಮ ಕ್ರೇಜಿ ಫ್ಯಾಮಿಲಿಯ ಕ್ರೇಜಿ ರೂಲ್ಸ್ ಅರ್ಥವಾಯಿತು! ನಾಳೆ ಸ್ಕೂಲಲ್ಲಿ ನಮ್ಮೂರ ಕೆರೆಗಳ ಬಗ್ಗೆ, ಅವುಗಳ ಸಂರಕ್ಷಣೆಯ ಬಗ್ಗೆ ಒಂದು ಪವರ್ ಪಾಯಿಂಟ್ ಪ್ರೆಸೆಂಟೇಷನ್ ಕೊಡ್ತೀನಿ!

ಅಜ್ಜಿ : ಗುಡ್! ಚುರುಕಾದ ಹುಡುಗಿ! ಇಂದಿನ ಮಕ್ಕಳು ಬಹಳ ಸ್ಮಾರ್ಟ್! ಬೇಗ ಕಲೀತಾರೆ! ಕಲಿತದ್ದನ್ನ ಪಾಲಿಸ್ತಾರೆ!

(ತೆರೆ)

■

# ಹ್ಯಾಟ್ಸ್ ಆಫ್ ಮೈ ಲೇಡಿ

● ಸಿ.ಆರ್.ಸತ್ಯ

ಮೊನ್ನೆ ದೀಪಾವಳಿ ದಿನ ನಮ್ಮ ಮನೆಯಲ್ಲಿ ನಮ್ಮ ಜೊತೆ ನಮ್ಮ ಮಗಳು–ಅಳಿಯ, ಮಗ–ಸೊಸೆ– ನಮ್ಮ ಮೊಮ್ಮಕ್ಕಳು ಎಲ್ಲಾ ಸೇರಿದ್ದೆವು. ನನ್ನ ಹೆಂಡತಿಯ ವಿಶೇಷ ಅಡಿಗೆಯನ್ನು ಕಂಠಪೂರ್ತಿ ಹೊಡೆದು ಕೂತಿದ್ವಿ. ಆಗ ನನ್ನ ಹೆಂಡತಿ ಸಭೆಯ ಅಧ್ಯಕ್ಷತೆಯನ್ನು ತಾನಾಗಿಯೇ ವಹಿಸಿಕೊಂಡು ," ಯಾರೂನೂ ಆಕಳಿಸದೆ ನನ್ನ ಮಾತಿಗೆ ಗಮನ ಕೊಡಿ" ಅಂತ ಹೇಳಿ ನನ್ನ ಮಗನ ಮಕ್ಕಳ ಕಡೆ ತಿರುಗಿ, "ನಿಮ್ಮಪ್ಪ ನಿಮಗೆ ಪಟಾಕಿ ತಂದು ಕೊಟ್ಟಿದ್ದಾನ್ಯೇ ಮಕ್ಕಳೇ? "ಅಂತ ಕೇಳಿದಳು.

ನಮ್ಮ ಮೊಮ್ಮಗ "ತಂದರು ಅಜ್ಜಿ. ಆದರೆ ನಾವು ಅದನ್ನ ಅಂಗಡಿಗೆ ವಾಪಸ್ ಮಾಡಿ ಅಂತ ಹೇಳಿದ್ವಿ. ವಾಪಸ್ ಮಾಡಿದ್ರು ಅಂತ ಅಂದು ಕೊಂಡಿದ್ದೀವಿ" ಅಂದರು.

ನಮ್ಮ ಮಗಳ ಮಕ್ಕಳ ಕಡೆ ತಿರುಗಿ ಅದೇ ಪ್ರಶ್ನೆ ಕೇಳಿದಳು. ನಮ್ಮ ಮೊಮ್ಮಗಳು "ನಾವೂ ಡ್ಯಾಡಿಗೆ ಹಾಗೇ ಹೇಳಿದ್ವಿ ಅಜ್ಜಿ. ಹೋಗಿ ವಾಪಸ್ ಮಾಡಿ ಬಂದರು" ಅಂತ ಅಂದಳು. ಅದಕ್ಕೆ ಹೆಂಡತಿ ನನ್ನ ಮಗನ ಕಡೆ ನೋಡುತ್ತಾ (ಅಳಿಯಂದರನ್ನು ಬಯ್ಯೋದಕ್ಕೆ ಎಲ್ಲಿ ಸಾಧ್ಯ ಹೇಳಿ), "ಚಿಕ್ಕವರಿಗೆ ಇರೋ ಪರಿಸರ ಜ್ಞಾನ ದೊಡ್ಡವರಿಗೆ ಇಲ್ಲ. ಜಾಗತಿಕ ತಾಪಮಾನ, ಪರಿಸರ ಮಾಲಿನ್ಯ ಅಂತ ಹೆಸರುಗಳನ್ನು ಕೇಳಿದ್ದೀರಾ?" ಅಂತ ಕೇಳಿದಳು.

ಓ ಹೋ!!!" ಅಂತ ನಾಲ್ಕು ಮಕ್ಕಳೂ ಕೂಗಿದವು. "ಪಾಪ, ಈ ವಿಷಯ ದೊಡ್ಡವರಿಗೇ ಗೊತ್ತಿಲ್ಲ ಅಂತ ಕಾಣುತ್ತೆ. ತಿಳಿದುಕೊಳ್ಳೋಕ್ಕೂ ಪ್ರಪಂಚದ ಬಗ್ಗೆ ಕಾಳಜಿ ಇರಬೇಕು. ಬೆಳಿಗ್ಗೆ ಇಂದ ರಾತ್ರಿ ತನಕ ಇಸ್ಪೀಟ್ ಆಡ್ತಾ ಇದ್ರೆ, ಇವೆಲ್ಲಾ ಎಲ್ಲಿ ತಲೆಗೆ ಹೊಳೆಯುತ್ತೆ?" ಅಂತ ನನ್ನ ಕಡೆ ನೋಡ್ತಾ ಹೇಳಿದಳು. ಅದಕ್ಕೆ ನನ್ನ ಮಗಳು ನನ್ನ ಬಚಾವ್ ಮಾಡೋದಕ್ಕೆ" ಅಪ್ಪನ್ನ ಯಾಕೆ ಅಂತೀಯಮ್ಮ? ಜಗತ್ತಿನ ತಾಪಮಾನ ಹೆಚ್ಚಾಗೋದಕ್ಕೆ ಪಾಪ, ಅವರೇನು ಮಾಡಿದಾರೆ? " ಅಂತ ಸಮಜಾಯಿಸಿ ಮಾತು ಆಡಿದಳು.

"ಅವರೇನು ಮಾಡಿದಾರೆ ಹೇಳಲಾ? ದಿನಾ ಬೆಳಿಗ್ಗೆ ಯಾರೂ ಮಾಡದ ಎಣ್ಣೆ ಸ್ನಾನ–ಅದು ಯಾರೋ ಆಯುರ್ವೇದ ಡಾಕ್ಟರ್ ಕೊಟ್ಟಿದ್ದ ಎಣ್ಣೆ– ಎಂಟೋ ಹತ್ತೋ ಬಕೆಟ್ ಬಿಸಿ ಬಿಸಿ ನೀರು ಹುಯ್ಕೊಂಡು ಏನೋ ಸಾಧಿಸಿದೆ ಅಂತ ಬಾತ್ ರೂಮಿಂದ ಬರ್ತಾರೆ. ಉಗುರು ಬೆಚ್ಚಗಿನ ನೀರಿನಲ್ಲಿ ಸ್ನಾನ ಮಾಡಿದ್ರೆ ಇವರ ದೇಹ ಏನು ಹೆಪ್ಪುಗಟ್ಟುತ್ಯೆ? ಗೀಸರ್‌ನಿಂದ ಉಷ್ಣಾಂಶ ವಾತಾವರಣಕ್ಕೆ ಹರಡಿ, ತಾಪಮಾನ ಹೆಚ್ಚಾಗಲ್ವೆ? ಜೊತೆಗೆ ದಿನಕ್ಕೆ ಒಂದು ಪ್ಯಾಕ್ ಸಿಗರೇಟ್ ಮುಗಿಸೋವಾಗ, ಬೆಂಕಿ ಹಚ್ಚಿಕೊಳ್ಳೋದೇನು, ದಮ್ ಎಳ್ಯೋದೇನು.. ಸಿಗರೇಟ್ ತುದೀಲಿ ಅವರು ಬಿಡೋ ಹೊಗೇನಲ್ಲಿ ಟೆಂಪರೇಚರ್ ಎಷ್ಟಿರುತ್ತೆ ಅಂತ ಅವರಿಗೇನಾದರೂ ಐಡಿಯಾ ಇದೆಯೇ ಕೇಳು. ನಿಮ್ಮಪ್ಪನಿಗೆ ಇನ್ನೊಂದು ಹೇಳು. ಮದುವೆ ಆದಾಗಿನಿಂದ ನೋಡ್ತಾ ಇದೀನಿ. ಅವರಿಗೆ ಮೂಗಿನ ತುದೀಲೇ ಯಾವಾಗಲೂ ಕೋಪ ಇರುತ್ತೆ. ಅಲ್ಲಿ ಥರ್ಮಾಮೀಟರ್ ಇಟ್ಟುಕೊಂಡು ಯಾವತ್ತಾದರೂ ಟೆಂಪರೇಚರ್ ಎಷ್ಟಿದೆ ಅಂತ ನೋಡಿಕೊಂಡಿದ್ದಾರ ಅಂತ ಕೇಳು. ಆ ಮೂಗಿನ ತುದಿಯಿಂದಲೇ ಮನೆ ತಾಪಮಾನ ಏರುತ್ತೆ. ಗೊತ್ತಾ?" ಅಂತ ಸವಾಲು ಎಸೆದಳು.

ತಕ್ಷಣ ನನ್ನ ಮೊಮ್ಮಗ ಓಡಿ ಬಂದು, ನನ್ನ ಮೂಗಿನ ತುದಿ ಮುಟ್ಟಿ, " ಹೌದು ಅಜ್ಜಿ. ಯೂ ಆರ್ ರೈಟ್! ಮೂಗಿನ ತುದಿ ಈಸ್ ವೆರಿ ಹಾಟ್!" ಅಂದ. ಎಲ್ಲಾ ನಕ್ಕಿದ್ರು. ನಾನು ಮಾತಿಲ್ಲದೇ ತೆಪ್ಪಗೆ ಕೂತೆ. ಇನ್ನೇನು ಮಾಡಲಿ?

ಈಗ ಹೆಂಡತಿ ಕಣ್ಣು ನಮ್ಮ ಅಳಿಯಂದರ ಮೇಲೆ ಬಿತ್ತು. ಪಾಪ ಆತ ಸೆಟೆದು ಕೂತ್ಕೊಂಡರು. " ಏನು ಅಳಿಯಂದಿರೇ, ಈಗಲೂ ಆಫೀಸ್ ಗೆ ನಿಮ್ಮ ಮರ್ಸಿಡೆಸ್ ಬೆಂಜ್ ಕಾರಿನಲ್ಲೇ ಪ್ರಯಾಣವೇ?. ಕಾರಿಗೆ ಒಬ್ಬರೇನೋ ಅಥವಾ ಇನ್ನೂ ನಾಲ್ಕು ಜನರ ಜೊತೆ ಪೂಲ್ ಮಾಡ್ತೀರೋ?" ಅಂತ ಕೇಳಿದ್ಲು.

ಅಳಿಯ "'ಇಲ್ಲ ಒಬ್ಬನೇ ಹೋಗ್ತೀನಿ" ಅಂತ ಅಂದರು. " ಓ, ಹಾಗೇ..? ಈಗಲೂ ಸಿಲ್ಕ್ ಬೋರ್ಡ್ ಜಂಕ್ಷನ್ ನಲ್ಲಿ ಹೋಗ್ತಾ ಬರ್ತಾ ಒಂದೊಂದು ಗಂಟೆ ಕಾಲ ಸಿಗ್ನಲ್ ಗೆ ನಿಂತ್ಕೋತೀರೇನು?" ಅಂತ ಬಂತು ಮುಂದಿನ ಪ್ರಶ್ನೆ. ಅಳಿಯಂದರು ವೀಕಾಗಿ " ಹೌದು" ಎಂದರು. " ಆಗ ಕಾರ್ ಏ.ಸಿ. ಆಫ್ ಮಾಡ್ತೀರೋ ಅಥವಾ ಹಾಗೇ ತಣ್ಣಗೆ ಕಾಯಿತ್ತೀರ್ಗರೊ?" ಅಂತ ಕೇಳಿದಳು. ನನ್ನ ಮಗಳು ಈಗ ಗಂಡನ್ನ ಬಚಾವ್ ಮಾಡೋಕ್ಕೆ, " ಈ ಶೆಖೆ ನಲ್ಲಿ ಹೇಗಮ್ಮ ಏ.ಸಿ. ಇಲ್ಲದೆ ಗಂಟೆಗಟ್ಟಲೆ ಕಾಯೋಕ್ಕೆ ಆಗುತ್ತೆ?" ಅಂತ ಅಂದಳು. ಅದಕ್ಕೆ ಹೆಂಡತಿ" ಶೆಖೆ ಅನ್ನೋಕ್ಕೆ ನಾವೇನೂ ಆಫ್ರಿಕಾಲಿ ಇದೀವೆ? ಬರೇ ಫ್ಯಾನ್ ಹಾಕಿಕೊಂಡು ಏ.ಸಿ. ಆಫ್ ಮಾಡೋದಕ್ಕೆ ಕಷ್ಟಾನೇ? ನಿಮ್ಮ ನಾಲ್ಕು ಜನಕ್ಕೆ ನಾಲ್ಕು ಕಾರುಗಳು, ಸಿಲ್ಕ್ ಬೋರ್ಡ್ ನಲ್ಲಿ ನಾಲ್ಕು ಏ.ಸೀ ಆನ್ ಅಂದ್ರೆ ಅರ್ಥ, ಸಿಲ್ಕ್ ಬೋರ್ಡ್ ಜಾಗ ಮಾತ್ರ ಅಲ್ಲ ಬಿ.ಟಿ.ಎಮ್ ಲೇಔಟ್ ಗೇ ತಾಪಮಾನ ತಟ್ಟಲ್ವೆ?, ಅಂದ ಹಾಗೆ, ನಿಮ್ಮ ಕಂಪೆನಿಯ ಆಫೀಸ್ ಎಲ್ಲಾ ಏರ್ ಕಂಡಿಶನ್ ಆಗಿದೆ ಅಲ್ವೆ? " ಅಂತ ಕೇಳಿದಳು. "ಹೌದು" ಅಂದರು ಅಳಿಯಂದಿರು. "ಅಂದರೆ ನಿಮ್ಮೆಲ್ಲರ ತಲೆಗಳು ತಣ್ಣಗಿರುತ್ವೆ.

ಆದರೆ ಏ.ಸಿ ಯೂನೀಟ್‌ಗಳಿಂದ, ಡಿ.ಜಿ.ಸೆಟ್‌ಗಳಿಂದ ಹೊರಗೆ ಬರೋ ಗಾಳಿ ಎಲೆಕ್ಟ್ರಾನಿಕ್ ಸಿಟಿ, ಬೊಮ್ಮಸಂದ್ರ, ಆನೇಕಲ್ಲು–ಇವೆಲ್ಲಾ ಜಾಗಗಳನ್ನೂ ಹೀಟ್ ಮಾಡುತ್ವೆ ಅಂತ ಆಯ್ತು. ನಿಮ್ಮ ಕಂಪೆನಿ ಸಿ.ಇ.ಓ ಗೆ ಇನ್ನು ಮೇಲಿಂದ ಎಲ್ಲರೂ ಫ್ಯಾನ್ ಕೆಳಗೆ ಕೆಲಸ ಮಾಡ್ತೀವಿ ಅಂತ ಹೇಳಿ " ಅಂದಳು ನನ್ನ ಹೆಂಡತಿ.

ಈಗ ನನ್ನ ಮಗಳ ಸರದಿ ಬಂತು." ನಿನ್ನ ಮಕ್ಕಳಿಗೆ ಟೆಸ್ಟ್ ಇದೆ, ಪರೀಕ್ಷೆ ಇದೆ ಅಂತ ದಿನಾನೂ ಸಂಜೆ ತಲೆ ಚಚ್ಚಿಕೊಂಡು ತಲೇನೂ ಬಿಸಿಮಾಡಿಕೊಂಡು ಕೂಗಾಡೋದನ್ನ ನಿಲ್ಲಿಸು. ನಿನ್ನ ತಲೆ ಲೋಕಲ್ ಆಗಿ ನಿನ್ನ ದೇಹಕ್ಕಿಂತ ಎರಡು ಡಿಗ್ರಿ ಹೆಚ್ಚಾಗಿ ಬಿಸಿ ಆಗುತ್ತೆ. ಆ ಬಿಸಿನೂ ಮನೇಗೇ ಹರಡುತ್ತೆ."

ಈ ಸಂವಾದ ಆಗೋ ಸಮಯಕ್ಕೆ ನನ್ನ ಮಗನ ಮುಖದ ಮೇಲೆ ಒಂದು ಕಿರುನಗೆ ಇತ್ತು. ಸಧ್ಯ ಅಮ್ಮ ತನ್ನ ಕಡೆ ತಿರುಗಿಲ್ಲ ಅಂತ. ಈಗ ಅವಳ ದೃಷ್ಟಿ ಅವನ ಮೇಲೆ ಬಿತ್ತು. "ನಿನಗೆ ಉಸಿರಾಡೋದಕ್ಕೆ ಏನು ಅವಶ್ಯ ಅಂತ ಗೊತ್ತಾ?" ಅಂತ ಕೇಳಿದಳು. ತಕ್ಷಣ ಮೊಮ್ಮಕ್ಕಳು "ಆಕ್ಸಿಜನ್!!!" ಅಂತ ಕೂಗಿದ್ವು. "ಅವಕ್ಕೆ ಗೊತ್ತಿರೋ ಉತ್ತರ ನಿನಗೆ ಗೊತ್ತಿಲ್ಲ. ನಿನ್ನ ಐಟಿ.ಬಿಟಿ ಕ್ಲಾಸ್‌ನಲ್ಲಿ ಮರ ಗಿಡಗಳು ಯಾವ ಗ್ಯಾಸ್‌ನ ಹೀರಿಕೊಳ್ಳುತ್ವೆ ಅಂತ ಹೇಳಿಕೊಟ್ಟಿದ್ದಾರಾ?" ಅಂತ ಬಂತು ಮುಂದಿನ ಪ್ರಶ್ನೆ. ತಕ್ಷಣ ಮಕ್ಕಳೇನೇ (ಎಲ್ಲ ಮೂರು ನಾಲ್ಕು ಸ್ಟಾಂಡರ್ಡ್‌ನವರು) ಕಾರ್ಬನ್ ಡೈ ಆಕ್ಸೈಡ್!!! ಅಂತ ಕೂಗಿದ್ವು. ಈಗ ಮಗನಿಗೆ ಇನ್ನೊಂದು ಬಾಣ ಬಿಟ್ಟಳು." ಈಗಲೂ ತಿಂಗಳಿಗೆ ಒಂದು ಸಲ ಅದ್ಯಾವುದೋ ಪರಿಸರವಾದಿ ಗುಂಪಿನಲ್ಲಿ

ಸೇರಿಕೊಂಡು, ಹಸಿರು ಉಳಿಸಿ–ತಾಪಮಾನ ತಗ್ಗಿಸಿ ಅಂತ ಸ್ಲೋಗನ್ ಇರೋ ಟೀ ಶರ್ಟ್ ಹಾಕ್ಕೊಂಡು ಒಂದು ಗಂಟೆ ಕಾಲ ಕಬ್ಬನ್ ಪಾರ್ಕ್‌ನಲ್ಲಿ ಕಿರಿಚಾಡಿ, ಆಮೇಲೆ ಅಲ್ಲೇ ದೋಸೆ ಕಾಫೀ ತಿನ್ನುಕೊಂಡು ಮನೆಗೆ ಬರ್ತಿದೀಯಾ?" ಅಂತ ಕೇಳಿದಳು. "ಹೌದು" ಅಂತ ತಲೆ ಅಲ್ಲಾಡಿಸಿದ. "ಅದರಿಂದ ಜಗತ್ತಿನ ತಾಪಮಾನ ಇಳಿದಿದೆಯೇನೂ?' ಅಂತ ಕೇಳಿದಳು. "ಇಲ್ಲ ಅಂತ ಕಾಣುತ್ತೆ." ಅಂದ. ಹೆಂಡತಿ ಈಗ ಇನ್ನೊಂದು ಬಾಣ ಬಿಟ್ಟಳು. "ಆ ಸ್ಲೋಗನ್ ಶೌಟಿಂಗ್ ಗ್ರೂಪ್ ಗೆ ಗುಡ್ ಬೈ ಹೇಳು. ಅದೇ

ಶನಿವಾರಗಳಲ್ಲಿ ಯಾವುದಾದರೂ ನರ್ಸರಿಗೆ ಹೋಗಿ, ಏಳೋ ಎಂಟೋ ಫ್ಲವರ್ ಪಾಟ್‌ಗಳನ್ನ ತಂದು ಮನೇನಲ್ಲಿ ಗಿಡಗಳನ್ನು ಬೆಳೆಸು. ಆಗ ಪ್ರಪಂಚ ಉದ್ಧಾರ ಆಗುತ್ತೆ."

ಆಗ ಮಕ್ಕಳೆಲ್ಲಾ ಸೇರಿ, "ಗುಡ್ ಐಡಿಯಾ ಅಜ್ಜಿ! ನಾವೂ ಗಿಡಗಳನ್ನ ನೋಡಿಕೋತೀವಿ. ನೀರು ಹಾಕಿ ಬೆಳೆಸ್ತೀವಿ. ಎಲ್ಲಾ ಗಿಡಗಳಿಗೂ ಒಂದೊಂದು ಹೆಸರು ಇಟ್ಟು ಪ್ರತಿ ವರುಷ ಅವುಗಳ  ಬರ್ತ್ ಡೇ ಮಾಡಿ ಅವುಗಳನ್ನ ಮರಗಳಾಗಿ ಬೆಳೆಸ್ತೀವಿ. ಏನಂತೀರಾ ಅಜ್ಜಿ?" ಅಂದವು. ನನ್ನ ಹೆಂಡತಿ ಖುಷಿಯಿಂದ ಅವರೆಲ್ಲರನ್ನೂ ತಬ್ಬಿಗೊಂಡು ಮುತ್ತು ಕೊಟ್ಟಳು.

ಇಲ್ಲಿಗೆ ದೀಪಾವಳಿ ಸ್ಪೆಶಲ್ ಕ್ಲಾಸ್ ಮುಗೀತು ಅಂತ ಅಂದುಕೊಂಡು, ನಾನು, " ಅಲ್ಲ ಮೇಡಂ, ನೀನು ಇಷ್ಟು ವಿಷಯಗಳನ್ನ ತಿಳಕೊಂಡಿದ್ದೀಯ ಅಂತ ನನಗೆ ಐಡಿಯಾನೇ ಇರಲಿಲ್ಲ" ಅಂತ ಅಂದೆ. ಆಮೇಲೆ ಯಾಕೆ ಬಾಯಿ ಬಿಟ್ಟೆನೋ ಅನ್ನಿಸ್ತು. " ನಾನು ಎಮ್.ಎಸ್.ಸಿ ಗ್ರಾಜುಯೇಟ್ ಅನ್ನೊದನ್ನ ಮರೀಬೇಡಿ. ನಿಮ್ಮನ್ನ ಮದುವೆ ಆದಮೇಲೆ ಓದಿದ್ದೆಲ್ಲಾ ಮರೆತೆ ಅಷ್ಟೆ. ಮೊನ್ನೆ ಆದ ನಮ್ಮ ಕ್ಲಬ್ ಮೀಟಿಂಗ್ ನಲ್ಲಿ ನಾವೆಲ್ಲಾ ಸೇರಿಕೊಂಡು ತಾಪಮಾನ ಇಳಿತಕ್ಕೆ ನಮ್ಮ ನಮ್ಮ ಸಂಸಾರವನ್ನ ಕಂಟ್ರೋಲ್ನಲ್ಲಿ ಇಡ್ತೀವಿ ಅಂತ ಆಣೆ ಮಾಡಿದೀವಿ. ಗೊತ್ತಾಯ್ತಾ?' ಅಂದಳು.

ನಮ್ಮ ಅಳಿಯಂದಿರು ಸ್ವಲ್ಪ ಧೈರ್ಯ ಮಾಡಿಕೊಂಡು "ಯೂ ಆರ್ ಗ್ರೇಟ್ ಆಂಟಿ. ಇವತ್ತು ಹೊರಗಡೆ ನಿಜವಾದ ಪಟಾಕಿಗಳನ್ನು ಹೊಡೆಯೋ ಬದಲು ಮನೆ ಒಳಗೆ ಇಂಟಲೆಕ್ಚುಯಲ್ ಪಟಾಕಿ ಹಾರಿಸ್ಬಿಟ್ರಿ" ಅಂತ ಅಂದರು. ಮಕ್ಕಳೆಲ್ಲಾ (ಏನೇ ಹೇಳಿ, ಅವುಗಳೂ ಇತ್ತೀಚೆಗೆ ಬಲೇ ಸ್ಮಾರ್ಟ್ ಆಗಿವೆ) "ಡೌನ್, ಡೌನ್ ಗ್ಲೋಬಲ್ ವಾರ್ಮಿಂಗ್" ಅಂತ ಚಪ್ಪಾಳೆ ತಟ್ಟಿ ಎರಡು ನಿಮಿಷ  ಕುಣಿದ್ವು.

ಈಗ ನನ್ನ ಹೆಂಡತಿ " ನಾಳೆಯಿಂದ ನಾನು ಗ್ಯಾಸ್, ಕುಕ್ಕರ್ ಅಡುಗೆ ಮನೇನಲ್ಲಿ ಉಪಯೋಗಿಸ್ತಿಲ್ಲ. ಆಲ್ ಎಲೆಕ್ಟ್ರಿಕ್ ಕಿಚನ್ ಮಾಡ್ತಾ ಇದೀನಿ. ಗ್ಯಾಸ್‌ನಲ್ಲಿ ಬೆಂಕಿ ಅಕ್ಕ ಪಕ್ಕ ಹೋಗಿ ತುಂಬಾ ಹೀಟ್ ವೇಸ್ಟ್ ಆಗುತ್ತೆ. ಸುಮ್ಮನೆ ಆಕ್ಸಿಜನ್‌ನೂ ಹೀರುತ್ತೆ. ಎಲೆಕ್ಟ್ರಿಕ್ ಕುಕ್ಕರ್‌ನಲ್ಲಿ ಥರ್ಮೋಸ್ಟಾಟ್ ಎಷ್ಟು ಬೇಕೋ ಅಷ್ಟು ಹೀಟ್ ಮಾಡುತ್ತೆ." ಅಂತ ಹೇಳಿದಳು.

ಇದೆಲ್ಲಾ ಕೇಳಿ ನಾವೆಲ್ಲಾ ತೆಪ್ಪಗೆ ಆದ್ವಿ. "ಹಾಗೇ ಕೂತಿರಿ. ಎಲ್ಲರಿಗೂ ಜಾಮೂನ್ ತರ್ತೀನಿ" ಅಂತ ಹೆಂಡತಿ ಅಡುಗೆ ಮನೆಗೆ ಹೋದಳು. ಅರ್ಥವಾಯಿತು. ಹಿತ್ತಲ ಗಿಡದಲ್ಲೇ ಮದ್ದು ಇರೋದು ಅಂತ!


ಹ್ಯಾಟ್ಸ್ ಆಫ್ ಮೈ ಲೇಡಿ!!! ಅಂತ ಜಂಬ ಪಟ್ಕೊಂಡೆ!. ■

# ಅನಿರೀಕ್ಷಿತ ಆಗಂತುಕರು

(ದ್ವಿರುಕ್ತಿ ಅಂತ ಗೊತ್ತುರೀ...)

ಪರಿಕಲ್ಪನೆ: ಶಿವಕುಮಾರ್ ಚಿತ್ರಗಳು: ಜಿ.ಎಸ್. ನಾಗನಾಥ್


ಅಂತರಗ್ರಹ ಯಾತ್ರಿಗಳು ಭೂಮಿಯ ಮೇಲೆ ಇಳಿದಿದ್ದಾರೆ. ಇಳಿದಿರೋ ಜಾಗದಲ್ಲಿ ಬಡಪಾಯಿಯೊಬ್ಬ ಅವರ ಕೈಗೆ ಸಿಕ್ಕಿದ್ದಾನೆ. ನಮಗಿಂತ ಸಾವಿರ ಪಟ್ಟು ಮುಂದುವರಿದ ಜನಾಂಗಕ್ಕೆ ಭಾಷೆ ಅನ್ನೋದು ಒಂದು ಸಮಸ್ಯೆಯೇ? ಮಾತುಕತೆ ಕನ್ನಡದಲ್ಲೇ ಸಾಗುತ್ತದೆ














ಅಷ್ಟರಲ್ಲಿ ಬೇಹುಗಾರ ಬಂದು ಕಿವಿಯಲ್ಲಿ ಏನೋ ಪಿಸುಗುಟ್ಟುತ್ತಾನೆ.




ನೀತಿ: ಮುಂಬರೋ ಘಟನೆಗಳು ಮುಂಚಿತವಾಗಿಯೇ ತಮ್ಮ ಛಾಯೆಯನ್ನು ಮೂಡಿಸುತ್ತವೆಯಂತೆ

# ಪರಿಸರ ಧ್ಯಾನ

● ರಶ್ಮಿ ಜೆಜೂರಿಕರ್

ಮಹಾರಾಷ್ಟ್ರದ ಒಂದು ಪುಟ್ಟ ಊರಾದ ಔರಂಗಾಬಾದಿನಲ್ಲಿ ನಾನು ಬೆಳೆದದ್ದು. ವನಮಹೋತ್ಸವದ ಆ ದಿನಗಳಲ್ಲಿ ಸಸಿಗಳನ್ನು ನೆಡುವ ಕಾರ್ಯ ಕ್ರಮಗಳು ಒಂದು ಫ್ಯಾಷನ್ ಆಗಿಹೋಗಿದ್ದವು. ಮಕ್ಕಳ ವಿಜ್ಞಾನ ಮೇಳಗಳಲ್ಲಿ ಮಳೆ ನೀರು ಸಂಗ್ರಹಣೆ ಪ್ರಾಜೆಕ್ಟ್‌ಗಳೇ ತುಂಬಿರುತ್ತಿದ್ದವು. ನಾನು ಓದುತ್ತಿದ್ದ ಶಾಲೆ ಊರಿನ ಆಚೆ ಮೂರು ನಾಲ್ಕು ಗುಡ್ಡಗಳ ನಡುವಣ ಸುಂದರ ಕಣಿವೆಯಲ್ಲಿ ಇದ್ದುದರಿಂದ, ಪ್ರತಿದಿನ ಅಲ್ಲಿಗೆ ಬಸ್ಸಿನಲ್ಲಿ ಕುಳಿತು ಪಯಣಿಸುವುದೇ ಒಂದು ಮೋಜು ಅನ್ನಿಸುತ್ತಿತ್ತು. ಆ ಬಸ್ ಪ್ರಯಾಣ ಒಂದು ಸಾಹಸವೇ ಅನ್ನಬೇಕು. ಆ ಹಾದಿ ಪಾಟ್ ಹೋಲ್‌ಗಳಿಂದ ಎಷ್ಟು ಕೆಟ್ಟಿತ್ತೆಂದರೆ ಈಗ ನಾನು ಆ ರಸ್ತೆಯಲ್ಲಿ ಪಯಣಿಸಿದ್ದರೆ ನನ್ನ ಗೊಣಗುವಿಕೆಗೆ ಮಿತಿಯೇ ಇರುತ್ತಿರಲಿಲ್ಲವೇನೋ? ಆದರೆ ಆ ದಿನಗಳಲ್ಲಿ ಆ ಬಸ್ ಪಯಣ ತುಂಬ ಸಂತಸದಾಯಕವಾಗಿದ್ದಂತೆ ನೆನಪು. ಪಯಣದ ಕೊನೆಯಲ್ಲಿ ನಮ್ಮ ಬಸ್ಸು ಒಂದು ಪುಟ್ಟ ನದಿಗೆ ಅಡ್ಡವಾಗಿನ ನಿರ್ಮಿಸಿದ್ದ ಒಂದು ಸೇತುವೆಯ ಮೇಲೆ ಹೋಗುತ್ತಿತ್ತು. ನದಿ ಬಂತೆಂದರೆ ನಾವುಗಳೆಲ್ಲಾ ಕಿಟಕಿಯಾಚೆ ತಲೆಹಾಕಿ ಆ ದೃಶ್ಯವನ್ನು ನೋಡುತ್ತಿದ್ದವು. ನಮ್ಮ ಕಣ್ಣುಗಳಿಗೆ ಅದೊಂದು ಕಿನ್ನರ ಲೋಕದ ಝರಿ. ಅದರಲ್ಲಿ ನೀರು ಭರ್ರನೆ ಹರಿಯುತ್ತಿದ್ದಾಗ ಅದರಲ್ಲಿ ತುಂಬಿದ್ದ ಬಿಳಿಯ ನೊರೆಗಳಲ್ಲಿ ಕಂಡುಬರುತ್ತಿದ್ದ ಗುಳ್ಳೆಗಳಲ್ಲಿನ ಕಾಮನ ಬಿಲ್ಲುಗಳು ಬಬಲ್ ಬಾತ್‌ನಂತೆ ಕಾಣುತ್ತಿದ್ದ ದೃಶ್ಯ ನೋಡುತ್ತಿದ್ದ ಮಕ್ಕಳ ಕಣ್ಣಿಗೆ ಸೌಂದರ್ಯದ ಪರಮಾವಧಿ ಎನ್ನಿಸಿತ್ತು.

ಹಲವು ವರ್ಷಗಳ ನಂತರ ನನ್ನ ಕನಸಿನ ಆ ಗುಳ್ಳೆಗಳ ರಾಶಿ, ಹರಿಯುತ್ತಿದ್ದ ನೀರಿಗೆ ಮಾರಕ ಮತ್ತು ಅವು ಆ ನದಿಯ ಮೇಲು ತೀರದಲ್ಲಿ ಬಟ್ಟೆ ಒಗೆಯುವಾಗ ಹೊರಹೊಮ್ಮಿದ ಸೋಪಿನ ಗುಳ್ಳೆಗಳು ಎಂಬ ಸತ್ಯ ಅರಿವಾದಾಗ ನನಗಾದ ನಿರಾಶೆ ಅಷ್ಟಿಷ್ಟಲ್ಲ. ಮನುಷ್ಯರು ನಮ್ಮ ಪರಿಸರದ ಮೇಲೆ ಪ್ರಭಾವ ಬೀರುವುದು ಸಾಧ್ಯ ಎಂಬ ಅಂಶ ಆಗಲೇ ನನಗೆ ಮೊದಲಬಾರಿಗೆ ಅರಿವಾದದ್ದು.

ಕಳೆದ ಅನೇಕ ವರ್ಷಗಳಲ್ಲಿ ಮನುಷ್ಯರು ಪರಿಸರದ ಮೇಲೆ ಪ್ರಭಾವ ಬೀರುವುದಷ್ಟೇ ಅಲ್ಲ, ಅದನ್ನು ರಾಜಾರೋಷವಾಗಿ ದುರ್ಬಳಕೆ ಮಾಡುತ್ತಿರುವುದನ್ನು ಗಮನಿಸಿದ್ದೇನೆ. ಉದಾಹರಣೆಗೆ, ರೈಲಿನಲ್ಲಿ ಪ್ರಯಾಣಮಾಡುವಾಗ ಸ್ವಲ್ಪವೂ ನಾಚಿಕೆಯಿಲ್ಲದೇ, ಜನರು ಪೇಪರ್ ತಟ್ಟೆ ಪ್ಲಾಸ್ಟಿಕ್ ಚೀಲ, ಇತ್ಯಾದಿಗಳನ್ನ ಕಿಟಕಿಯಿಂದ ಆಚೆಗೆ ಎಸೆಯುವುದು ಸರ್ವೇಸಾಮಾನ್ಯ ದೃಶ್ಯ. ಆಶ್ಚರ್ಯವೆಂದರೆ, ಪರಿಸರ ಜಾಗೃತಿಯ ಬಗ್ಗೆ ಎಂದಿಗಿಂತ ಹೆಚ್ಚಾಗಿ ಇಂದಿನ ದಿನಗಳಲ್ಲಿ ಶಾಲಾ ಮಕ್ಕಳಿಗೆ ಶಿಕ್ಷಣವಾಗುತ್ತಿದೆ. ಯಾವುದೇ ಶಾಲೆಯ ವಾರ್ಷಿಕೋತ್ಸವದಲ್ಲಿ ಪರಿಸರದ ಬಗ್ಗೆ ಕೆಲವಾದರೂ ಸ್ಕಿಟ್‌ಗಳು ಇದ್ದೇ ಇರುತ್ತವೆ. ಕಲಿಕೆ ಮತ್ತು ನಡವಳಿಕೆಗಳ ನಡುವೆ ಇದೇಕೆ ಇಂತಹ ಕಂದರ? ಮಗು ಸ್ಕಿಟ್‌ನಲ್ಲಿ ಭಾಗವಹಿಸಿದ ಬಳಿಕ ತನ್ನ ತಂದೆ ತಾಯಿಯರ ಜೊತೆ ಅದು ತನ್ನ ಹಳ್ಳಿಗೆ ಟ್ರೈನಿನಲ್ಲಿ ಹೋಗುತ್ತದೆಂದು ಭಾವಿಸಿ. ನಾಟಕದಲ್ಲಿ ಬಹುಮಾನವಾಗಿ ಗಳಿಸಿದ ಚಾಕೊಲೇಟಿನ ಹೊದಿಕೆಯನ್ನು ಮಗು ತೆಗೆದಾಗ ತಂದೆ ತಾಯಿಯರೇ ಅದನ್ನು ಕಿಟಕಿಯಿಂದ ಆಚೆ ಬಿಸುಡುವಂತೆ ಮಗುವಿಗೆ

ತಾಕೀತು ಮಾಡುತ್ತಾರೆ. ಇದೇ ರೀತಿ ಇಡ್ಲಿ ಸುತ್ತಿದ ಎಲೆ ಮತ್ತು ಕಾಗದ ಕಿಟಕಿಯಾಚೆಗೆ ಗಗನಗಾಮಿಗಳಾಗುತ್ತವೆ. ಕ್ರಮೇಣ ಮಗುವಿಗೆ ಇದೇ ಒಂದು ಅಭ್ಯಾಸವಾಗಿ ಅದು ಭಾಗವಹಿಸಿದ ನಾಟಕ ಅದರ ಮನದಲ್ಲಿ ಕೇವಲ ನಾಟಕವಾಗಿಯೇ ಉಳಿದುಬಿಡುತ್ತದೆ.

ನಮ್ಮ ಬಾಲ್ಯದ ಕನಸಿನ ಸೋಪಿನ ಗುಳ್ಳೆಗಳು ಒಡೆಯುತ್ತಾ ಬಂದಂತೆ ಪರಿಸರದ ಬಗ್ಗೆ ಒಂದು ಹತಾಶಭಾವ ನಮ್ಮನ್ನು ಆವರಿಸಿ, ನಾವೂ ಪ್ರಕೃತಿಯ ಒಂದು ಅಂಶ ಎಂಬುದನ್ನು ಮರೆಯುತ್ತೇವೆ. ಪ್ರಕೃತಿಯಿಂದ ನಾವು ಬೇರೆ ಎಂಬ ಚಿಂತನೆಗೆ ಬಹುಶಃ ನಮ್ಮ ಅಹಂಕಾರವೂ ಕಾರಣವಿರಬಹುದು. ನದಿ ಕೆರೆಗಳನ್ನು ಕಲುಷಿತಗೊಳಿಸಿ ಅನಂತರ ಅವುಗಳ ಮೇಲೆ ನಮ್ಮ ಹಕ್ಕನ್ನು ಸಾಧಿಸಲು ಹೋರಾಡುತ್ತೇವೆ. ದೈವದತ್ತ ಕಾಡುಗಳ ಮಧ್ಯೆ ರಸ್ತೆಗಳನ್ನು ಕೊರೆದು, ಜನಗಳ ಬಳಕೆಗೆ ಎಷ್ಟು ಕಾಡನ್ನು ಕಡಿಯಬಹುದು ಎಂಬ ವಿಷಯದಲ್ಲಿ ಸರ್ಕಾರಕ್ಕೆ ಪಾರುಪತ್ಯ ವಹಿಸಿ ಸುಮ್ಮನಾಗುತ್ತಿದ್ದೇವೆ. ಇದರಲ್ಲೆಲ್ಲಾ ಎಲ್ಲೋ ಒಂದು ಕಡೆ ಆಗಾಧವಾದ, ಅಪಾಯಕರವಾದ ತಪ್ಪಿರುವಂತೆ ಕಾಣುತ್ತದೆ. ಖಂಡಿತ ನಾವು ಬದಲಾಗಬೇಕು!



# ಪರಿಸರ ''ಪ್ರಜ್ಞೆ'' (ತಪ್ಪಿದೆ!)

● ಜಿ.ವಿ. ಗಣೇಶಯ್ಯ

ನಾನೊಂದು ವ್ಯಂಗ್ಯಚಿತ್ರ ಬರೆದಿದ್ದೆ. ಅದರಲ್ಲಿ ಎರಡು ಚೌಕಟ್ಟುಗಳು. ಮೊದಲ ಚೌಕಟ್ಟಿನಲ್ಲಿ ಒಬ್ಬ ಆ ಪರಿಸರದಲ್ಲಿ ಉಳಿದಿದ್ದ ಒಂದೇ ಒಂದು ಮರವನ್ನು ಕೊಡಲಿಯಿಂದ ಕಡಿಯುತ್ತಿದ್ದಾನೆ. ಅದನ್ನು ಗಮನಿಸಿದ ಪರಿಸರವಾದಿಯೊಬ್ಬ ''ಯಾಕಯ್ಯ, ಮರ ಕಡಿಯುತ್ತಿದ್ದೀಯಾ ಕಟುಕ, ''ಇದು ನಾನು ನೆಟ್ಟ ಮರವಲ್ಲ; ನನ್ನಪ್ಪ ಕಡಿಯದೆ ಬಿಟ್ಟ ಮರ!'' ಎಂದಾಗ ಪರಿಸರವಾದಿ ಪೆಚ್ಚಾಗುತ್ತಾನೆ. ಅಪ್ಪ ಕಡಿಯದೆ ಬಿಟ್ಟ ಆ ಒಂದೇ ಒಂದು ಮರವನ್ನೂ ಇವನು ಬಿಡುತ್ತಿಲ್ಲವಲ್ಲ ಎಂಬ ಅಚ್ಚರಿ ಪರಿಸರವಾದಿಯ ಮುಖದಲ್ಲಿ!

ಇವನು ಮರ ಕಡಿಯಲು ಅವನಪ್ಪನೇ ಪ್ರೇರಣೆ!

ಮರಗಳನ್ನು ಕಡಿಯ ಕೂಡದು ಎಂಬುದನ್ನು ಸಮರ್ಥಿಸಲು ನೀವು ಒಂದು ಕಾರಣವನ್ನು ಕೊಟ್ಟರೆ ಮರ ಕಡಿಯುವವರು ಅಥವಾ ಕಡಿಸುವವರು ಮರಗಳನ್ನು ಕಡಿಯಲು ಒಂಭತ್ತು ಕಾರಣಗಳನ್ನು ಕೊಡುತ್ತಾರೆ!

ಸ್ಯಾಂಪಲ್ಲಿಗೆ – ಮರ ಕಡಿಯಲು ಕೊಡಲಾಗುವ ಕಾರಣಗಳಲ್ಲಿ ಕೆಲವು ಸುಮಾರಾಗಿ ಕೆಳಗಿನಂತಿವೆ:

ವ್ಯವಸಾಯ ಮಾಡಬೇಕು. ಹಾಗಾಗಿ ಜಮೀನಿನಲ್ಲಿರುವ ಮರಗಳನ್ನು ಕಡಿಯಬೇಕು.

ನಮ್ಮ ಅಂಗಡಿಯ ನಾಮ ಫಲಕ ಕಾಣಿಸದಂತೆ ಮರ ಅಡ್ಡನಿಂತಿದೆ. ಆದಕಾರಣ ಆ ಮರವನ್ನು ಕಡಿಯಲೇ ಬೇಕು.

ನಮ್ಮ ಮನೆಯ ಹೊರಭಾಗದ ಸುಂದರ ಡಿಸೈನ್ ಕಾಣಿಸುತ್ತಿಲ್ಲ. ಅದಕ್ಕೆ ಎದುರಿಗಿರುವ ಮರಗಳೇ ಕಾರಣ. ಅವುಗಳನ್ನು ಬಿಡಬಾರದು.

ಇಂಧನಕ್ಕಾಗಿ ಮರ ಬೇಕು. ಅದಕ್ಕೆ ಮರ ಕಡಿಯುವುದು ಅನಿವಾರ್ಯ.

ಮನೆ ಕಟ್ಟಬೇಕು. ನಮ್ಮ ನಿವೇಶನದಲ್ಲಿ ಹಲವು ಮರಗಳಿವೆ. ಅವುಗಳನ್ನು ಕತ್ತರಿಸಲೇಬೇಕು. ಬಾಗಿಲು, ಕಿಟಕಿ, ಪೀಠೋಪಕರಣಗಳು – ಹೀಗೆ ಅನೇಕ ಕಾರಣಗಳಿಗಾಗಿ ಮರಗಳು ಧರಾಶಾಯಿಯಾಗುತ್ತವೆ.

ವಿದ್ಯುತ್ ತಂತಿಗಳಿಗೆ ಕೆಳಗಿರುವ ಮರಗಳ ರೆಂಬೆಗಳು ತಾಗುತ್ತಿವೆ. ಅವುಗಳನ್ನು ಕತ್ತರಿಸದಿದ್ದರೆ ಅನಾಹುತ ಖಾತ್ರಿ!

ಮರದ ಎಲೆಗಳೆಲ್ಲಾ ಮನೆಯ ಮುಂದೆ ಉದುರಿ ಅವನ್ನು ಗುಡಿಸುವುದೇ ಒಂದು ರಗಳೆ ಕೆಲಸ. (ಇಂಥವರಿಗೆ ಮರ ಬೇಡ ಅಂತಲ್ಲ, ಬೇಕು. ಆದರೆ ಎಲೆ ಉದುರಬಾರದು! ಇದು ಹೇಗಿದೆ ಎಂದರೆ, ಹಾಲು ಬೇಕು, ಹಸು ಸಗಣಿ–ಗಂಜಲಗಳನ್ನು ವಿಸರ್ಜಿಸಬಾರದು! ಎಂಬಂತಹ ವಾದ! ಇಂತಹವರಿಗಾಗಿ ಎಲೆ ಉದುರದ ಮರದ ತಳಿ ಸಿಕ್ಕೀತೇ ಅಂತ ಹುಡುಕುತ್ತಿದ್ದೇನೆ! ಪ್ಲಾಸ್ಟಿಕ್ ಮರ ಆದೀತೇನೋ?) ಜೊತೆಗೆ ಹಕ್ಕಿಪಕ್ಷಿಗಳೆಲ್ಲಾ ಮರದ ಮೇಲೆ ಕುಳಿತು ಸಂಜೆಯಾಯಿತೆಂದರೆ ಗಲಾಟೆ ಶುರುಮಾಡುತ್ತವೆ. ಹಾಗಾಗಿ ಮನೆಯ

ಮುಂದಿರುವ ಈ ಮರವನ್ನು ಕಡಿಯಲೇಬೇಕು.

ರಸ್ತೆಯ ಅಗಲೀಕರಣ ಅಥವಾ ಇನ್ನಾವುದೇ ವಿಧದ ಅಭಿವೃದ್ಧಿ ಕಾಮಗಾರಿ ಘೋಷಣೆಯಾಯಿತೆಂದರೆ ಆಯಾ ಜಾಗಗಳಲ್ಲಿರುವ ಪಾಪದ ಮರಗಳು ''ನಮ್ಮ ಮಾರಣಹೋಮ ಇನ್ನು ಫಿಕ್ಸ್'' ಅಂತ ನಡುಗಿಹೋಗುತ್ತವೆ!

ಇಲ್ಲೊಂದು ವಿಲಕ್ಷಣ ವಿಚಾರವನ್ನು ಹೇಳಲೇಬೇಕು. ಮೈಸೂರಿನಲ್ಲೊಬ್ಬ ಪುಣ್ಯಾತ್ಮ ತನ್ನ ಮನೆಯ ಮುಂದಿರುವ ಮರದ ನೆರಳಿನಲ್ಲಿ ಜನರು ವಾಹನಗಳನ್ನು ತಂದು ನಿಲ್ಲಿಸುತ್ತಾರೆಂಬ ಕಾರಣಕ್ಕೆ ಆ ಮರಕ್ಕೆ ಮೋಕ್ಷ ಕಾಣಿಸುವ ಬುದ್ಧಿವಂತಿಕೆಯನ್ನು ಪ್ರದರ್ಶಿಸಿದರು!

-ಹೀಗೆ ಮರಗಳ ಮಾರಣಹೋಮ ಮಾಡುವ ಜನ ಒಂದು ವಿಚಾರವನ್ನು ತಿಳಿದಿರಬೇಕು. ಮರಗಳಿಲ್ಲದಿದ್ದರೆ ಮನುಷ್ಯ ಬದುಕಲಾರ. ಆದರೆ ಮನುಷ್ಯ ಜಾತಿಯೇ ಇಲ್ಲದಿದ್ದರೆ ಮರಗಿಡಗಳು ಸಂತೋಷದಿಂದ, ನೆಮ್ಮದಿಯಿಂದ ಬದುಕುತ್ತವೆ.

ಮನುಷ್ಯ ಪ್ರಕೃತಿಯಲ್ಲಿ ಹಸ್ತಕ್ಷೇಪ ಮಾಡಿದರೆ ಅನಾಹುತ ಕಟ್ಟಿಟ್ಟ ಬುತ್ತಿ. ಮಲೆನಾಡಿನ ಗುಡ್ಡಬೆಟ್ಟಗಳು ಕುಸಿಯಲು ಅಲ್ಲಿರುವ ಮರಗಳನ್ನು ಜನ ಎಗ್ಗಿಲ್ಲದೆ ಇಲ್ಲವಾಗಿಸಿದುದೇ ಕಾರಣವೆಂಬುದನ್ನು ನೀವು ನಂಬಲೇಬೇಕು. ನಿಮ್ಮ ಮನೆಯ ತಾರಸಿಯು ಕುಸಿದು ಕೆಳಕ್ಕೆ ಬೀಳದಂತೆ ಹಿಡಿದಿಟ್ಟಿರುವುದು ಯಾವುದೇ ಗೊತ್ತೇ? ತಾರಸಿಯೊಳಗೆ ಹುದುಗಿರುವ ಕಬ್ಬಿಣದ ಸರಳುಗಳ ಜಾಲ. ಹಾಗೆಯೇ, ಭೂ ಸವಕಳಿಯನ್ನು, ಭೂ ಕುಸಿತವನ್ನು ಮರಗಿಡಗಳ ಬೇರುಗಳ ಜಾಲವು ತಡೆಯುತ್ತವೆ. ಕೊಡಗಿನಲ್ಲಿ ಎಲ್ಲೆಲ್ಲಿ ಮರಗಳನ್ನು ತೆರವುಗೊಳಿಸಲಾಗಿದೆಯೋ ಅಲ್ಲೆಲ್ಲಾ ಭೂಕುಸಿತವಾಗಿರುವುದು ಕಾಕತಾಳೀಯವೇನಲ್ಲ.

ಇಂದಿನ ದೆಹಲಿಯ ಕತೆಯನ್ನು ನೋಡಿ. ಅಲ್ಲಿಯ ವಾತಾವರಣ ಎಷ್ಟು ಹದಗೆಟ್ಟು ಹೋಗಿದೆ ಎಂದರೆ, ಆಪ್ತ ಗೆಳೆಯನೇ ನಿಮ್ಮೆದುರು ಬಂದರೂ ನೀವಾತನನ್ನು ಗುರುತಿಸಲಾರಿರಿ. ಹೆಚ್ಚೇಕೆ, ಆತನೂ ನಿಮ್ಮನ್ನು ಗುರುತಿಸಲಾರ! ಏಕೆ? ನೀವಿಬ್ಬರೂ ಉಗ್ರಗಾಮಿಗಳಂತೆ ಮುಖಕ್ಕೆ ಮಾಸ್ಕ್ ಧರಿಸಿ ಕೊಂಡಿರುತ್ತೀರಿ! ಮುಖಕ್ಕೆ ಮಾಸ್ಕ್ ಹಾಕಿಕೊಂಡಾಗ ಯಾರ ಗುರುತು ಯಾರಿಗೂ ಸಿಗಲಾರದು. ಹಾಗಂತ ನೀವು ಮಾಸ್ಕನ್ನು ಮುಖದಿಂದ ತೆಗೆದಿರೋ, ಆ ಕೆಟ್ಟ ಗಾಳಿಯನ್ನು ಉಸಿರಾಡಿ ನೀವು ಎಷ್ಟು ಸಮಯದ ವರೆಗೆ ಸ್ವರ್ಗಸ್ಥರೋ ನರಕಸ್ಥರೋ ಆಗದೆ ಬದುಕಿರುತ್ತೀರೆಂಬುದು ಆ ಆಂಡವನೇ ಬಲ್ಲ!

ಇದೇನೂ ದೇವರು ಕೊಟ್ಟ ಶಿಕ್ಷೆಯಲ್ಲ. ಮನುಷ್ಯ ತನಗೆ ತಾನೇ ವಿಧಿಸಿಕೊಂಡ ಶಿಕ್ಷೆ. ಸ್ವಯಂಕೃತಾಪರಾಧ! ಒಂದುಕಡೆ ಪಂಜಾಬ್- ಹರಿಯಾಣಗಳ ರೈತರು ಜಮೀನಿನಲ್ಲಿ ಉತ್ಪಾದನೆಯಾಗುವ ತ್ಯಾಜ್ಯಕ್ಕೆ ಬೆಂಕಿಯಿಟ್ಟು ದೆಹಲಿಯ ಪರಿಸರ ನಾಶಕ್ಕೆ ಕಾರಣವಾದರೆ, ಇನ್ನೊಂದೆಡೆ ಸಿಕ್ಕಾಪಟ್ಟೆ ವಾಹನ ದಟ್ಟಣೆಯಿಂದ ಹೊರಬರುವ ಪೆಟ್ರೋಲ್ - ಡೀಸೆಲ್ ಹೊಗೆ ಇಷ್ಟು ಸಾಲದೆಂಬಂತೆ ದೀಪಾವಳಿಯ ಸಂದರ್ಭದಲ್ಲಿ ಜನರು ಮೋಜಿಗಾಗಿ ಹೊಡೆಯುವ ಪಟಾಕಿಗಳ ಹೊಗೆ ಬೇರೆ. (ಇದು ಶಾಸ್ತ್ರವೂ ಅಲ್ಲ ಸಂಪ್ರದಾಯವೂ ಅಲ್ಲ)

ಅರಣ್ಯ ನಾಶಕ್ಕೆ ತಂಬಾಕು ಬೆಳೆಯೂ ದೊಡ್ಡ ಕೊಡುಗೆ ನೀಡಿದೆ. ತಂಬಾಕಿನ

ಸಂಸ್ಕರಣೆಗಾಗಿ ಅಪಾರ ಪ್ರಮಾಣದ ಅರಣ್ಯ ನಾಶವಾಗುತ್ತದೆ. ಜನರು ಧೂಮಪಾನ ಮಾಡಿ ಹೊರಬಿಡುವ ಎಂಜಲು ಹೊಗೆಯ ಸೇವನೆಯಿಂದ ಧೂಮಪಾನಿಯಲ್ಲದವನೂ ತೊಂದರೆಗೆ ಒಳಗಾಗಬೇಕಾಗುತ್ತದೆ!

ಕಾರ್ಖಾನೆಗಳು ಹೊರಸೂಸುವ ಹೊಗೆ, ಅವುಗಳು ಉತ್ಪಾದಿಸುವ ತ್ಯಾಜ್ಯ - ನೆಲ ಜಲಗಳನ್ನು ಹಾಳುಗೆಡಹುತ್ತವೆ. ಇಷ್ಟಾಗಿಯೂ ನಾವಿನ್ನೂ ಬದುಕಿ ಉಳಿದಿರುವುದು ಒಂದು ಪವಾಡವೇ ಸರಿ!

ಈ ಪರಿಸರ ನಾಶದಿಂದ ಯಾರಿಗೂ ಲಾಭವಿಲ್ಲ ಅಂತ ತಿಳಿಯಬಾರದು. ಇಂತಹ ಪರಿಸ್ಥಿತಿಯಲ್ಲಿ ನಾನಾ ರೀತಿಯ ಕಾಯಿಲೆಗಳು ಹುಟ್ಟಿಕೊಂಡು ವೈದ್ಯಕೀಯ ಕ್ಷೇತ್ರವು ಹುಲುಸಾಗಿ ಬೆಳವಣಿಗೆ ಕಾಣಲು ಸಹಕಾರಿಯಾಗಿವೆ! ಹೊಸ ಹೊಸ ನರ್ಸಿಂಗ್ ಹೋಂಗಳು, ಔಷಧಿ ಅಂಗಡಿಗಳು ತಲೆಯೆತ್ತಿ ಒಳ್ಳೆಯ ವಹಿವಾಟು ನಡೆಸುತ್ತಿವೆ! ಒಂದಷ್ಟು ಉದ್ಯೋಗಗಳು ಸೃಷ್ಟಿಯಾಗಿವೆ. ಮನೆಗೆ ಬೆಂಕಿ ಬಿದ್ದಾಗ ಆ ಬೆಂಕಿಯಲ್ಲಿ ಬೀಡಿ ಹೊತ್ತಿಸಿಕೊಳ್ಳುವ ಲಾಭದಂತೆ ಇದು!

ಶುದ್ಧ ಪರಿಸರದ ಅಂಗವಾಗಿ ಭೂಮಿಯ ಮೇಲೆ ಇರಲೇ ಬೇಕಾದ ಮರಗಳ ವಿಚಾರದಲ್ಲಿ ನಮ್ಮ ಪೂರ್ವಜರ ಕಾಳಜಿ ಸ್ಮರಣೀಯ:

**ಸದಾ ಸತೀರ್ಥೀ ಭವತಿ। ಸದಾ ದಾನಂ ಪ್ರಯಚ್ಛತಿ। ಸದಾ ಯಜ್ಞಂ ಸ ಜಯತೇ ಯಃ ರೋ ಪಯತಿ ಪಾದಪಂ।**

ಇದರ ಅರ್ಥ: ಒಂದೇ ಒಂದು ಮರವನ್ನು ನೆಟ್ಟು ಬೆಳೆಸಿದರೆ ಅದು ಸದಾ ಗಂಗಾದಿ ತೀರ್ಥ ಸ್ನಾನ ಮಾಡಿದ, ಸದಾ ದಾನವನ್ನು ನೀಡಿದ, ಸದಾ ಯಜ್ಞವನ್ನು ಮಾಡಿದಷ್ಟು ಪುಣ್ಯದಾಯಕ.

**ಅಶ್ವತ್ಥಮೇಕಂ, ಪಿರುಮಂದಮೇಕಂ। ನ್ಯಗ್ರೋಧಮೇಕಂ। ದಶ ಚಿಂಚಣೀಕಂ। ಕಪಿತ್ಥ ಬಿಲ್ವಾಮಲಕೀ ತ್ರಯಂಚ। ಪಂಚಾಮರೋತಿಪಿ ನರಕಂ ನ ಪಶ್ಯೋತ್॥**

ಈ ಶ್ಲೋಕದ ಅರ್ಥ: ಒಂದು ಅಶ್ವತ್ಥದ ಮರ. ಒಂದು ಬೇವಿನದು, ಒಂದು ಆಲದ ಮರ, ಹತ್ತು ಹುಣಿಸೆಯವು, ಮೂರು ಮೂರರಂತೆ ಬೇಲ, ಬಿಲ್ವ, ನೆಲ್ಲಿಯ ಮರಗಳು, ಮಾವಿನದು ಐದು ಹೀಗೆ ಮರಗಳನ್ನು ನೆಟ್ಟವನಿಗೆ ನರಕದ ದರ್ಶನವಾಗುವುದಿಲ್ಲ.

ಹಾಗಾದರೆ, ಮರಗಳನ್ನು ನಾಶಪಡಿಸುವ, ಅವುಗಳಿಗೆ ತೊಂದರೆ ಕೊಡುವ ಜನರಿಗೆ ಎಂತಹ (ದುರ್) ಗತಿಯು ಪ್ರಾಪ್ತವಾಗಬಹುದೆಂಬುದನ್ನು ಊಹಿಸಿಕೊಳ್ಳಿ.


ಪರಿಸರ ನಾಶಕ್ಕೆ ಕಾರಣರಾಗುವವರ ಧೋರಣೆ ತತ್‌ಕ್ಷಣದ ಲಾಭ ಮಾತ್ರ. ಈಗ ನಮಗೆ ಅನುಕೂಲವಾದರೆ ಸಾಕು. ಮುಂದಿನ ಪೀಳಿಗೆಯವರಿಗೆ ಏನಾದರೆ ನಮಗೇನು? ನಾವೇನು ನೋಡುತ್ತೇವೆಯೇ? ನಾವಾಗ ಇರುತ್ತೇವೆಯೇ? –ಇಂತಹ ದರಿದ್ರ ಮನಸ್ಥಿತಿ ಅವರದು!


ನಾವು ಸತ್ತರೆ ಪುನಃ ಇಲ್ಲೇ ಹುಟ್ಟಿಬರುತ್ತೇವೆಂಬ ನಂಬಿಕೆ ಇಂಥವರಿಗಿದ್ದರೆ ಅವರು ಪರಿಸರ ನಾಶದ ಕಾರ್ಯದಲ್ಲಿ ಕೈ ಜೋಡಿಸಲಾರರು. ವಾಸಯೋಗ್ಯವಲ್ಲದಷ್ಟು

ಪರಿಸರವನ್ನು ಕುಲ ಗೆಡಿಸಿ ಸತ್ತರೆ ಪುನಃ ಇದೇ ಕಲುಷಿತ ಪರಿಸರದಲ್ಲಿ ನಾವೇ ಹುಟ್ಟಿಬರಬೇಕಾಗುತ್ತದಲ್ಲ ಎಂಬ ಭಯ ಆಗ ವ್ಯಕ್ತಿಗಳಿಗೆ ಇರುತ್ತದೆ (ಅಂದುಕೊಂಡಿದ್ದೇನೆ). ನಾವೇ ಉರಿಸಿದ ಬೆಂಕಿಯಲ್ಲಿ ನಾವೇ ಬಿದ್ದು ಬೂದಿಯಾಗಬೇಕಾಗುತ್ತದೆ. ಆದ್ದರಿಂದ ಎಚ್ಚರ! ಎಚ್ಚರ!!

ಮನುಷ್ಯನ ಹೊರತು ಇನ್ನಾವ ಜೀವಿಯೂ ಈ ಜಗತ್ತಿನಲ್ಲಿ ಪರಿಸರವನ್ನು ನಾಶ ಮಾಡುವುದು ಕಂಡುಬರುವುದಿಲ್ಲ. ದೇವರು ಅಂತೊಬ್ಬನಿರುವುದು ಸತ್ಯವಾದರೆ, ಅವನೇ ಮನುಷ್ಯನನ್ನು ಸೃಷ್ಟಿ ಮಾಡಿದ್ದು ಹೌದಾದರೆ, ಮನುಷ್ಯನನ್ನು ಸೃಷ್ಟಿಸಿದ ತಪ್ಪಿಗಾಗಿ ಖಂಡಿತ ಅವನು ಪಶ್ಚಾತ್ತಾಪ ಪಡದಿದ್ದರೆ ಕೇಳಿ!

■






ವಿದ್ಯುಚ್ಛಕ್ತಿಯ ಮಿತ ಬಳಕೆಯ ಬಗ್ಗೆ ಈಗ ಒಂದು ಉಪನ್ಯಾಸ

# ಏರುತ್ತಿರುವ ತಾಪಮಾನ–ಅರಳುತ್ತಿರುವ ಕಳಕಳಿ

**● ಬೇಲೂರು ರಾಮಮೂರ್ತಿ**

ಜಾಗತಿಕ ತಾಪಮಾನದ ಬಗೆಗೆ ಸಮಾಜದ ಕಣ್ಣು ತೆರೆಸುವಂಥ ಕೆಲಸ ಮಾಡಿರುವುದು ಸ್ವೀಡಿಷ್ ದೇಶದ ಗ್ರೇಟಾ ಥನ್‌ಬರ್ಗ್ ಎನ್ನುವ ಹುಡುಗಿ. ಇವಳು ಜನಿಸಿದ್ದು 2003ರ ಜನವರಿ 3. ಅವಳ ಹದಿನೈದನೆಯ ವಯಸ್ಸಿನಲ್ಲಿ ಸ್ವೀಡಿಷ್ ಪಾರ್ಲಿಮೆಂಟ್ ಭವನದ ಮುಂದೆ ಜಾಗತಿಕ ತಾಪಮಾನವನ್ನೆದುರಿಸಲು ದೇಶದ ಗಮನ ಸೆಳೆಯುವಂಥ ಕೆಲಸ ಪ್ರಾರಂಭಿಸಿದಳು. ತಾಪಮಾನಕ್ಕಾಗಿ ಶಾಲಾ ಮುಷ್ಕರ ಎನ್ನುವ ಫಲಕ ಹಿಡಿದು ಕೂತ ಥನ್‌ಬರ್ಗ್‌ಳಿಗೆ ತಕ್ಷಣವೇ ಪ್ರೋತ್ಸಾಹ ದೊರೆಯಿತು. ಕೆಲವೇ ದಿನಗಳಲ್ಲಿ ಎಲ್ಲ ವಿದ್ಯಾರ್ಥಿಗಳು ಅವರವರ ಪರಿಸರದಲ್ಲಿ ಜಾಗತಿಕ ತಾಪಮಾನ ಜಾಗೃತಿ ಅಭಿಯಾನ ಹಮ್ಮಿಕೊಂಡರು. ನಂತರ ಎಲ್ಲಾ ಮಕ್ಕಳೂ ತಾಪಮಾನ ಮುಷ್ಕರ ಎನ್ನುವ ಅಭಿಯಾನವನ್ನು ಭವಿಷ್ಯಕ್ಕಾಗಿ ಶುಕ್ರವಾರ ಎನ್ನುವ ಹೆಸರಿನೊಂದಿಗೆ ಪ್ರಾರಂಭಿಸಿದರು. ಇದರ ಪರಿಣಾಮ ಥನ್‌ಬಗ್ 2018 ರಲ್ಲಿ ವಿಶ್ವಸಂಸ್ಥೆ ಆಯೋಜಿಸಿದ್ದ ವಾತಾವರಣ ಬದಲಾವಣಾ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಲು ಅವಕಾಶ ಸಿಕ್ಕಿತು. ಇದು ಎಲ್ಲಾ ವಿದ್ಯಾರ್ಥಿಗಳನ್ನು ಆಕರ್ಷಿಸಿ ಪ್ರತಿ ವಾರ ಒಂದಲ್ಲ ಒಂದು ಕಡೆ ಇಂಥಾ ಸಮ್ಮೇಳನಗಳು ನಡೆಯಲಾರಂಭಿಸಿ ಪ್ರತಿಯೊಬ್ಬರೂ ಜಾಗತಿಕ ತಾಪಮಾನದ ಕುರಿತು ಆಲೋಚಿಸಲಾರಂಭಿಸಿದರು

ಜನವರಿ 3, 2003 ರಂದು ಒಪೇರ ಗಾಯಕಿ ಮಲೇನ ಎಮ್ಮಾನ್ ಮತ್ತು ನಟ ಸ್ವಂತೆ ಥನ್‌ಬರ್ಗ್ ಇವರ ಮಗಳಾಗಿ ಜನಿಸಿದ ಥನ್‌ಬರ್ಗ್ ತಾತ ಕೂಡಾ ನಟ ಮತ್ತು ನಿರ್ದೇಶಕ ಒಲೋಫ್ ಥನ್‌ಬರ್ಗ್. ಅವಳಿಗೆ ಜಾಗತಿಕ ತಾಪಮಾನದ ಬಗೆಗೆ ಕಳಕಳಿಯಿಂದ ಜನಮೆಚ್ಚಿನ ಹುಡುಗಿಯಾದಳು. ನಮ್ಮ ಎಲ್ಲಾ ಸಾಮಾಜಿಕ ಕೆಲಸಗಳೂ ನಮ್ಮ ಮನೆಯಿಂದಲೇ ಪ್ರಾರಂಭವಾಗಬೇಕು ಎನ್ನುವಂತೆ ಥನ್‌ಬರ್ಗ್ ತನ್ನ ತಂದೆ ತಾಯಿಗಳಿಗೆ ನಾವು ನಮ್ಮ ಜೀವನ ಕ್ರಮವನ್ನು ಬದಲಾಯಿಸಿಕೊಳ್ಳಬೇಕು. ಅದಕ್ಕಾಗಿ ನಾವು ಮೊದಲು ವಿಮಾನದಲ್ಲಿ ಪಯಣಿಸುವುದನ್ನೂ ಮಾಂಸಾಹಾರ ಸೇವನೆಯನ್ನೂ ನಿಲ್ಲಿಸೋಣ ಎಂದು ಒತ್ತಾಯ ಮಾಡಿದಳು. ಇದರಿಂದಾಗಿ ಅವಳ ತಾಯಿ ಅನೇಕ ದೇಶಗಳಿಗೆ ಪ್ರತಿವಾರ ವಿಮಾನದಲ್ಲಿ ಪಯಣಿಸಿ ಕಾರ್ಯಕ್ರಮ ಕೊಡುವುದನ್ನೇ ನಿಲ್ಲಿಸಬೇಕಾಯಿತು. ಅವಳ ತಂದೆಯೂ ಅಷ್ಟೆ ಇರುವ ಕಡೆಗಳಲ್ಲೇ ಅವಕಾಶವನ್ನು ಉಪಯೋಗಿಸಿಕೊಂಡು ಮಗಳ ಅಭಿಯಾನಕ್ಕೆ ನೆರವಾದರು.

ಥನ್‌ಬರ್ಗ್ 2019ರ ಮೇ ತಿಂಗಳಿನ ಟೈಂ ಪತ್ರಿಕೆ ಮುಖಪುಟದಲ್ಲಿ ರಾರಾಜಿಸಿದಳು. ಪತ್ರಿಕೆಯು ಅವಳನ್ನು ಮುಂದಿನ ಜನಾಂಗದ ನಾಯಕಿ ಎಂದು ಪ್ರತಿಬಿಂಬಿಸಿತು. ಸೆಪ್ಟೆಂಬರ್ 2019ರಲ್ಲಿ ಅವಳು ವಿಶ್ವಸಂಸ್ಥೆ ತಾಪಮಾನ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದಳು. ಎಲ್ಲರೂ ಇಷ್ಟು ಚಿಕ್ಕ ವಯಸ್ಸಿಗೆ ಅವಳಿಗೆ ಇರುವ ತಾಪಮಾನ ಜಾಗೃತಿ ಬಗೆಗೆ ಪ್ರಶಂಸೆ ಮಾಡಿದರು.

ಅವಳು ತನ್ನ 8 ನೇ ವಯಸ್ಸಿನಲ್ಲೇ ಜಾಗತಿಕ ತಾಪಮಾನದ ಬಗೆಗೆ ಕೇಳಿದ್ದಳು. ಆದರೆ ಅದೇನು ಎಂದು ಆಗ ಅವಳಿಗರಿವಾಗಿರಲಿಲ್ಲ. ಕೆಲವೇ ವರ್ಷಗಳಲ್ಲಿ ಅವಳು ಯಾವುದೋ ಮನೋರೋಗಕ್ಕೆ ತುತ್ತಾದವಳಂತೆ ಸೋಮಾರಿಯಾಗಿ, ಯಾರೊಂದಿಗೂ ಮಾತಾಡದೇ, ಮತ್ತು ಹೊಟ್ಟೆಗೆ ಏನೂ ತಿನ್ನದೇ ಇರುವಂಥ ಸ್ಥಿತಿ ತಲುಪಿದಳು. ಅವಳ ಈ ಸ್ಥಿತಿಯನ್ನು ಆಸ್ಪರ್‌ಜರ್ ಸಿಂಡ್ರೋಮ್, ಒಬೇಸೀವ್ ಕಂಪಲ್ಸೀವ್

ಡಿಸಾರ್ಡರ್ ಎಂದು ಗುರುತಿಸಿದರು. ಅಂದರೆ ಅವಳು ಯಾವಾಗ ಬೇಕೋ ಆವಾಗ ಮಾತ್ರ ಮತ್ತು ಅವಳಿಗೆ ಇಷ್ಟವಾದಂಥ ವಿಷಯಗಳತ್ತ ಮಾತ್ರ ಮಾತಾಡುವಂಥ ಸ್ಥಿತಿ ಉಳ್ಳವಳಾದಳು. ಇದನ್ನು ಅವಳು ಒಂದು ಕಾಹಿಲೆ ಎಂದು ಗುರುತಿಸಲೇ ಇಲ್ಲ. ನನಗೆ ಬೇಕಾದಾಗ ಮಾತಾಡುವುದು ಎಂದರೆ ಜಾಗತಿಕ ತಾಪಮಾನದ ಬಗೆಗೆ ಮಾತಾಡುವುದು ಎಂದು ಅದರ ಬಗೆಗೇ ಹೆಚ್ಚಿನ ಆಸಕ್ತಿ ವಹಿಸಿದಳು.

ಮೇ 201ರಲ್ಲಿ ಥನ್‌ಬರ್ಗ್ ಸ್ವೀಡಿಷ್ ಪತ್ರಿಕೆಯೊಂದು ಜಾಗತಿಕ ತಾಪಮಾನದ ಬಗೆಗೆ ನಡೆಸಿದ ಪ್ರಬಂಧ ಸ್ವರ್ಧೆಯಲ್ಲಿ ಬಹುಮಾನ ಗಳಿಸಿದಳು. ಅವಳು ಬರೆದ ಪ್ರಬಂಧದಲ್ಲಿ " ನಾನು ಕ್ಷೇಮವಾಗಿರಲು ಬಯಸುತ್ತೇನೆ, ಆದರೆ ಇಡೀ ಪ್ರಪಂಚದ ಮನುಕುಲಕ್ಕೇ ಅತ್ಯಂತ ಮಾರಿಯಾಗಿ ಪರಿಣಮಿಸುತ್ತಿರುವ ತಾಪಮಾನ ಏರಿಕೆಯಂಥ ಬಹು ದೊಡ್ಡ ಸಮಸ್ಯೆಯನ್ನು ಎದುರಿಸುತ್ತಿರುವಾಗ ನಾನೊಬ್ಬಳು ಕ್ಷೇಮವಾಗಿರುವುದು ಹೇಗೆ ಎಂದು ಪ್ರಾರಂಭವಾದ ಪ್ರಬಂಧದಲ್ಲಿ ಅವಳು ನಿರಂತರ ತಾಪಮಾನ ಏರಿಕೆ ಮನುಕುಲಕ್ಕೆ ಹೇಗೆ ಮಾರಕವಾಗುತ್ತದೆ ಮತ್ತು ಅದಕ್ಕಾಗಿ ಪ್ರತಿಯೊಬ್ಬರೂ ಮಾಡಬೇಕಾದ ಕರ್ತವ್ಯಗಳೇನು ಎನ್ನುವುದನ್ನು ಕುರಿತು ಬರೆದಿದ್ದಳು. ಈ ಬಹುಮಾನಿತ ಪ್ರಬಂಧ ಪ್ರಕಟವಾದ ಮೇಲೆ ಜಾಗತಿಕ ತಾಪಮಾನದ ಬಗೆಗೆ ಆಸಕ್ತಿ ತಳೆದಿರುವ ಸಂಸ್ಥೆಯೊಂದು ಅವಳನ್ನು ಸಂಪರ್ಕಿಸಿತು. ಅವಳು ಈ ಸಂಸ್ಥೆಯ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದಳು. ಆ ಸಂಸ್ಥೆ ಜಾಗತಿಕ ತಾಪಮಾನ ಬದಲಾವಣೆ ಬಗೆಗೆ ನಾಗರೀಕರಿಗೆ ಎಚ್ಚರಿಕೆ ನೀಡುವಂತಹ ಕಾರ್ಯಕ್ರಮ ಶಾಲಾ ಮಟ್ಟದಿಂದಲೇ ಪ್ರಾರಂಭವಾಗಬೇಕು ಮತ್ತು ಶಾಲಾ ಮಕ್ಕಳು ಮುಷ್ಕರ ಮಾಡಬೇಕು ಎಂದು ಸಲಹೆ ನೀಡಿದರು. ಇದರ ಅನುಸಾರ ಥನ್‌ಬರ್ಗ್ ಕೊಟ್ಟ ಮುಷ್ಕರದ ಕರೆಗೆ ಯಾವುದೇ ಪ್ರತಿಕ್ರಿಯೆ ದೊರೆಯಲಿಲ್ಲವಾದ ಕಾರಣ, ತಾನೇ ಏಕಾಂಗಿಯಾಗಿ ಹೋರಾಟ ಮಾಡಲು ನಿರ್ಧರಿಸಿದಳು.

ಆಗಸ್ಟ್ 2018ರಲ್ಲಿ ಥನ್‌ಬರ್ಗ್ ತನ್ನ 9ನೇ ಗ್ರೇಡ್ ಶಾಲೆಯಲ್ಲಿದ್ದಾಗ ನಾನು ಇನ್ನು ಮುಂದೆ ಅಂದರೆ 2018ರ ಸ್ವೀಡಿಷ್ ಚುನಾವಣೆ ನಡೆಯುವವರೆಗೆ ಶಾಲೆಗೆ ಹೋಗುವುದಿಲ್ಲ ಎಂದು ನಿರ್ಧರಿಸಿದಳು. ಶಾಲಾ ಸಮಯದಲ್ಲಿ ಅವಳು ಸ್ವೀಡನ್ ಪಾರ್ಲಿಮೆಂಟ್ ಕಟ್ಟಡದ ಮುಂದೆ ವಾತವರಣಕ್ಕಾಗಿ ಶಾಲಾ ಮುಷ್ಕರ ಎನ್ನುವ ಫಲಕ ಹಿಡಿದು ಸುಮಾರು ಮೂರು ವಾರಗಳ ಕಾಲ ಕೂತು ಎಲ್ಲರ ಗಮನ ಸೆಳೆದಳು. ಜಾಗತಿಕ ತಾಪಮಾನ ಕುರಿತು ಕಾಳಜಿ ಇರುವ ಅನೇಕ ಫೋಟೋಗಳನ್ನು ಸಾಮಾಜಿಕ ಜಾಲತಾಣದಲ್ಲಿ ಪ್ರಚಾರ ಮಾಡಿದಳು. ಇವುಗಳಿಗೆ ತುಂಬಾ ಒಳ್ಳೆಯ ಪ್ರತಿಕ್ರಿಯೆ ಬಂತು. ಸುಮಾರು 88 ಸಾವಿರ ಜನರು ವಿಶ್ವಾದ್ಯಂತ ಪ್ರಶಂಸೆ ವ್ಯಕ್ತಪಡಿಸಿದರು.

ಜಾಗತಿಕ ತಾಪಮಾನದ ಅಭಿಯಾನ ವಿಶ್ವದ ಗಮನವನ್ನೂ ಸೆಳೆಯಬೇಕೆಂದು ಥನ್‌ಬರ್ಗ್ ಅಮೆರಿಕಾ ಇಂಗ್ಲೆಂಡ್, ನ್ಯೂಜಿಲೆಂಡ್ ಮುಂತಾದ ದೇಶಗಳ ಹತ್ತಾರು ನಗರಗಳಲ್ಲಿ ಏರುತ್ತಿರುವ ತಾಪಮಾನದ ಬಗೆಗೆ ಜನರಲ್ಲಿ ಒಂದು ಸಂವೇದನೆ ಮೂಡಿಸಿ ತನ್ನ ಕಳಕಳಿಯನ್ನು ಅಲ್ಲಿಯ ಜನರಿಗೆ ಅರ್ಥವಾಗುವಂತೆ ವಿವರಿಸುತ್ತಾ ಹೋದಳು. ಅಷ್ಟೊತ್ತಿಗಾಗಲೇ ವಿಶ್ವಾದ್ಯಂತ ಗುರುತಿಸಿಕೊಂಡಿದ್ದ ಥನ್‌ಬರ್ಗ್ 2019ರಲ್ಲಿ ವಿಶ್ವಸಂಸ್ಥೆ ಮಕ್ಕಳ ನಿಧಿ ಆಯೋಜಿಸಿದ್ದ ಪತ್ರಿಕಾ ಗೋಷ್ಠಿಗೆ ಬಂದಳು. ಥನ್‌ಬರ್ಗ್ ಅರ್ಜಂಟೈನ, ಬ್ರೆಝಿಲ್, ಫ್ರಾನ್ಸ್, ಜರ್ಮನಿ ಮತ್ತು ಟರ್ಕಿ ದೇಶಗಳಿಂದ ಬಂದಿದ್ದ ಇನ್ನಿತರ 15 ಮಕ್ಕಳ ಜೊತೆ ಒಂದಾದಳು. ಈ ಎಲ್ಲಾ ಮಕ್ಕಳೂ ಸೇರಿ ಎಲ್ಲಾ

ದೇಶಗಳೂ ತಾಪಮಾನ ಏರುವಿಕೆಯನ್ನು ತಡೆಯುವ ಪ್ರಕ್ರಿಯೆಯನ್ನು ನಿರಂತರವಾಗಿ ನಡೆಸುತ್ತಿರಬೇಕು ಎನ್ನುವ ಒತ್ತಾಯ ತಂದರು.

ಸೆಪ್ಟೆಂಬರ್ 2019ರಲ್ಲಿ ಸುಮಾರು 224 ಸಂಘ ಸಂಸ್ಥೆಗಳು ತಮ್ಮ ಸಂಸ್ಥೆಯ ಮುಖಾಂತರ ತಾವುಗಳು ಥನ್‌ಬರ್ಗ್ ಆರಂಭಿಸಿರುವ ಈ ಜಾಗತಿಕ ತಾಪಮಾನ ನಿಯಂತ್ರಣ ಅಭಿಯಾನಕ್ಕೆ ಬೆಂಬಲ ಸೂಚಿಸಿದರು. ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಕೂಡಾ ಮಕ್ಕಳ ಈ ಕಾರ್ಯಕ್ಕೆ ಶ್ಲಾಘನೆ ಸಲ್ಲಿಸಿದರು. ಅವರು ನಮ್ಮ ಪರಂಪರೆಯು ಜಾಗತಿಕ ತಾಪಮಾನ ನಿಯಂತ್ರಣಕ್ಕೆ ಸರಿಯಾದ ಕ್ರಮ ತೆಗೆದುಕೊಂಡಿರಲಿಲ್ಲ. ಆದರೆ ಇದೀಗ ಚಿಕ್ಕ ವಯಸ್ಸಿನ ಥನ್‌ಬರ್ಗ್ ತನ್ನ ವಿದ್ಯಾರ್ಥಿ ಸಮೂಹದೊಂದಿಗೆ ನಮ್ಮ ಪರಂಪರೆಯ ಜನರ ಕಣ್ಣು ತೆರೆಸುವ ಕೆಲಸ ಪ್ರಾರಂಭಿಸಿರುವುದು ಶ್ಲಾಘನೀಯ ಎಂದರು.

ಅದೇ ವರ್ಷ ಮಕ್ಕಳ ಪುಸ್ತಕಗಳ ಪ್ರಕಟಣೆಯೂ ಹೆಚ್ಚಾಗಿ ಅದರಲ್ಲಿ ತಾಪಮಾನ ಏರುವಿಕೆ ನಿಯಂತ್ರಣದ ಬಗೆಗೆ ಹೆಚ್ಚು ಹೆಚ್ಚು ಲೇಖನಗಳನ್ನು ಬರೆಸಿ ಪ್ರಕಟಿಸಲಾಯಿತು. ಇಂತಹ ಪುಸ್ತಕಗಳ ಮಾರಾಟ ಬಹಳ ಬಿರುಸಾಗಿ ನಡೆಯಿತು. ಇದನ್ನು ಪುಸ್ತಕಗಳ ಪ್ರಕಾಶಕರು ಗ್ರೇಟಾ ಎಫೆಕ್ಟ್ ಎಂದು ಕರೆದರು.

ಬ್ರಿಟಿಷ್ ಕಾರ್ಯದರ್ಶಿ ಉಪಸ್ಥಿತರಿದ್ದ ಸಮ್ಮೇಳನದಲ್ಲಿ ಥನ್‌ಬರ್ಗ್ ಮಾತಾಡಿದ ನಂತರ ಅವರು ಮಾತನಾಡಿ ನಾನು ಈ ಹುಡುಗಿಯ ಮಾತುಗಳನ್ನು ಕೇಳಿದ ಮೇಲೆ ನನಗೆ ಇವಳ ಬಗೆಗೆ ಹೆಮ್ಮೆ ಎನಿಸುವುದರ ಜೊತೆಗೆ ನಮ್ಮ ಬಗೆಗೆ, ನಮ್ಮ ಪರಂಪರೆಯ ಜನಾಂಗದ ಬಗೆಗೆ ಒಂದು ರೀತಿಯ ಬೇಸರ ಮೂಡಿದೆ. ನಾನು ಈ ಹುಡುಗಿಯ ತಂದೆಯ ವಯಸ್ಸಿನವನು. ವಾತಾವರಣ ನಿಯಂತ್ರಣದ ಬಗೆಗೆ ನಾವು ಯಾವುದೇ ಕ್ರಮ ಕೈಗೊಳ್ಳಲಿಲ್ಲ ಎನ್ನುವುದು ನಿಜ. ನಮ್ಮ ಸರ್ಕಾರ ಈ ಬಗೆಗೆ ಕೂಡಲೇ ಕ್ರಮ ಕೈಗೊಳ್ಳಲಿದೆ ಎಂದರು. ಬ್ರಿಟಿಷ್ ಸರ್ಕಾರದಲ್ಲಿ ಕಾರ್ಮಿಕ ಮಂತ್ರಿಯಾಗಿದ್ದ ಎಡ್ ಮಿಲಿಬಾಂಡ್ 2008ರಲ್ಲಿ ಇಂಗ್ಲೆಂಡಿನಲ್ಲಿ ವಾತಾವರಣ ಬದಲಾವಣೆ ಕಾಯಿದೆಯನ್ನು ಜಾರಿಗೆ ತಂದಿದ್ದರು. ಅವರು ಮಾತನಾಡುತ್ತಾ ನೀನು ನಮ್ಮನ್ನು ಬಡಿದೆಬ್ಬಿಸಿದ್ದೀಯ. ಜಾಗತಿಕ ತಾಪಮಾನ ನಿಯಂತ್ರಣದ ಬಗೆಗೆ ಯಾವೆಲ್ಲಾ ವಿದ್ಯಾರ್ಥಿಗಳು ಪಾಲ್ಗೊಂಡಿದ್ದಾರೋ ಅವರೆಲ್ಲ ನಮ್ಮ ಸಮಾಜ ಇರುವಂಥ ಸ್ಥಿತಿಯನ್ನು ನಮಗೆ ಕೈಗನ್ನಡಿ ಮುಖಾಂತರ ತೋರಿಸಿದ್ದಾರೆ. ನಮಗೆಲ್ಲ ಬಹುಮುಖ್ಯ ಪಾಠವನ್ನು ಕಲಿಸಿದ್ದೀರ ಎಂದರು.

ಗ್ರೇಟಾ ಥನ್‌ಬರ್ಗ್ ಅವಳ ಈ ಅಭಿಯನಕ್ಕೆ ವಿಶ್ವಾದ್ಯಂತ ಪ್ರಶಂಸೆ ಬರುವುದರ ಜೊತೆಗೆ ಅನೇಕ ಪ್ರಶಸ್ತಿಗಳೂ, ಬಹುಮಾನಗಳೂ ಅವಳಿಗೆ ಬಂದವು. ಎಲ್ಲ ದೇಶಗಳೂ, ನಾಗರೀಕರೂ, ಅಧಿಕಾರಿಗಳೂ, ರಾಜಕಾರಣಿಗಳೂ ಇಂಥಾ ಚಿಕ್ಕ ಹುಡುಗಿಗೆ ಇದ್ದಂಥ ಕಾಳಜಿ ನಮ್ಮಲ್ಲಿ ಇರಲಿಲ್ಲವಲ್ಲ ಎನ್ನುವ ಕೊರಗಿನೊಂದಿಗೆ ಥನ್‌ಬರ್ಗ್ ಅವಳ ಎಲ್ಲ ಕೆಲಸಗಳಿಗೂ ಪ್ರೋತ್ಸಾಹ ಕೊಟ್ಟರು. ಇದು ದೇಶವಿದೇಶಗಳಲ್ಲಿ ಹೆಚ್ಚು ಹೆಚ್ಚು ಪ್ರಚಾರವಾಯಿತು. ಗ್ರೇಟಾ ಥನ್‌ಬರ್ಗ್ ಈಗಲೂ ತನ್ನ ಪ್ರತಿಯೊಂದು ಕ್ಷಣವೂ ವಿಶ್ವಾದ್ಯಂತ ತಾಪಮಾನ ನಿಯಂತ್ರಣದ ಬಗೆಗೆ ಜಾಗೃತಿ ಮೂಡಿಸುವ ಕೆಲಸವನ್ನು ನಿರಂತರವಾಗಿ ಮಾಡುತ್ತಿದ್ದಾಳೆ. ಜಾಗತಿಕ ತಾಪಮಾನ ನಿಯಂತ್ರಣದ ವಿಷಯ ಬಂದಾಗ ಗ್ರೇಟಾ ಥನ್‌ಬರ್ಗ್ ಒಂದು ಮಾದರಿಯಾಗಿ ನಿಲ್ಲುತ್ತಾಳೆ.

■

# ಪರಿಸರ ರಕ್ಷಣೆಗೆ ನಿಂತ ಅಜ್ಜಿ

● ಇ.ಆರ್. ರಾಮಚಂದ್ರನ್

ಬೆಳಗ್ಗೆ ಎದ್ದು ಹಲ್ಲು ಉಜ್ಜುವುದಕ್ಕೆ ಯಥಾಪ್ರಕಾರ ನಿದ್ದೆಕಣ್ಣಲ್ಲೇ ಬ್ರಶ್ ಮತ್ತು ಪೇಸ್ಟು ಹುಡುಕುತ್ತಾ ಹೋಗಿ ಅಲ್ಲಿ ನೋಡಿದರೆ ಬೇವಿನ ಕಡ್ಡಿ, ಜೊತೆಗೆ ನಂಜನಗೂಡಿನ ಬಿ.ವಿ. ಪಂಡಿತರ ಹಲ್ಲುಪುಡಿ ಕಣ್ಣಿಗೆ ಬಿತ್ತು! ಇದೇನು ನಾನು ನಿದ್ದೇಲಿ ಕನಸು ಕಾಣ್ತಾ ಇಲ್ಲೀ ತನಕ ನಡಕೊಂಡು ಬಂದುಬಿಟ್ನಾ ಅಂತ ಹೆದರಿ ಕಣ್ಣು ಉಜ್ಜಿಕೊಂಡಾಗ ಅಲ್ಲೇ ಇದ್ದ ಅಜ್ಜಿ, 'ಕನಸು ಅಂದ್ಕೊಂಡ್ಯಾ! ಇದನ್ನು ಉಜ್ಜಿಕೊಂಡೇ ನನ್ನ ಹಲ್ಲು ಇನ್ನೂ ಗಟ್ಟಿಯಾಗಿದೆ. ನಿಮ್ಮಜ್ಜನೂ ಕೊನೆಯ ತನಕವೂ ಪುಳ್ಳಂಗಾಯಿ ಕಚ್ಚಿ ತಿನ್ನೋವ್ರು. ನೀನಾದ್ರೆ ಪ್ರತಿ ವಾರಾನೂ 'ಡೆಂಟಿಸ್ಟು, ಟೂತ್ ಕೆನಾಲ್ ಅಂತ ಹೋಗ್ತಿರ್ತೀಯಾ.... ನಿನ್ನ ಬ್ರಶ್ಶು, ಪೇಸ್ಟು ಎಸೆದುಬಿಟ್ಟೆ'.

'ಅಜ್ಜೀ... ಅದು ರೂಟ್ ಕೆನಾಲ್.. ಟೂತ್ ಕೆನಾಲ್ ಅಲ್ಲಾ..'.

'ಏನೋ ಸುಡುಗಾಡು..' ಅಂದ್ರು.

ಮೂವತ್ತು ವರ್ಷ ಆದ್ಮೇಲೆ ಬಿ.ವಿ. ಪಂಡಿತರು ಮನೆಗೆ ಬಂದಿದ್ದು ಸಂತೋಷಾನೂ ಆಯ್ತು. ಅಜ್ಜಿ ಆ ಪೊಟ್ಟಣದ ಮೂಲೆಯ ತುದಿಯಲ್ಲಿ ಹರಿದಿದ್ದರು. ಸಿಹಿಯಾಗಿದ್ದ ಪುಡಿ ಕೈಗೆ ಹಾಕಿಕೊಂಡು ತೋರು ಬೆರಳಿನಿಂದ ಉಜ್ಜಲು ಶುರು ಮಾಡಿದೆ.

ಇವತ್ತು ಇನ್ನೇನು ಗ್ರಹಚಾರ ಕಾದಿದೆಯೋ! ಹಲ್ಲು ಪುಡಿಯಿಂದ ಉಜ್ಜಿ ಮಗ್ಗಿನಲ್ಲಿ ಬಾಯಿ ಮುಕ್ಕಳಿಸೋಣಾಂತ ಕೈ ಹಾಕಿದರೆ, ಅದರ ಹಿಡಿ ಸಿಗ್ತಿಲ್ಲ. ಕೈಗೆ ಲಕ್ವ ಏನಾದರೂ ಹೊಡೀತಾ ಅಂತ ಕೈ ಮುಟ್ಟಿ ನೋಡಿಕೊಂಡೆ. ಕೈಕೆಳಗಡೆ ತಂಬಿಗೆ ಕಾಣಿಸ್ತು. ಪ್ಲಾಸ್ಟಿಕ್ ಮಗ್ಗಿಗೂ ಅಜ್ಜಿ ಶವ ಸಂಸ್ಕಾರ ಮಾಡಿದ್ದರು!

ತಿಂಡಿಗೆ ತೊಳೆದಿದ್ದ ಬಾಳೆ ಎಲೆ ಮತ್ತು ಸ್ಟೀಲ್ ಟಂಬ್ಲರ್, ಪಾತ್ರೆ ಉಜ್ಜುವುದಕ್ಕೆ ಹುಣಿಸೇ ಹಣ್ಣು ತೆಂಗಿನಕಾಯಿ ಜೊಂಗು, ಸ್ನಾನಕ್ಕೆ ಶ್ಯಾಂಪು ಬದಲು ತೆಂಗಿನಕಾಯಿ ಚಿಪ್ಪಿನಲ್ಲಿ ಸೀಗೆಪುಡಿ, ಸೋಪಿನ ಬದಲು ಮೈದಾ, ಅರಿಶಿನ ಮಿಶ್ರಿತ ಪುಡಿ. ಯಾವುದೋ ಕಾಲದ ನೆನಪು...

ಹಾಲಿನಲ್ಲಿ ಜಮಖಾನೆ ಹಾಕಿ ಗೋಡೆಗೆ ದಿಂಬಿನಲ್ಲಿ ಒರಗಿ ಕೂರುವುದಕ್ಕೆ ವ್ಯವಸ್ಥೆ. ಪ್ಲಾಸ್ಟಿಕ್ ಹುಡುಕಿದರೂ ಮನೇಲಿ ಕಾಣಿಸಲ್ಲ. ಮನೆಯ ತೋರಣಕ್ಕೆ ಪ್ಲಾಸ್ಟಿಕ್ ಒಳಗೆ ಹೋಗಿ ಮಾವಿನ ಎಲೆತರಿಸಿ ಅದನ್ನು ಪೋಣಿಸಿ ತೋರಣ ಕಟ್ಟಿದ್ದರು. ದೇವರ ಕೋಣೆಯಲ್ಲಿ ಪ್ಲಾಸ್ಟಿಕ್ ರಂಗೋಲಿ ತೆಗೆದು ನಿಜವಾದ ಅಕ್ಕಿ ಹಿಟ್ಟಿನ ರಂಗೋಲಿ. ಪ್ಲಾಸ್ಟಿಕ್ ಹೂಗಳು, ಹೂದಾನಿ ಕುಡಿಕೆ ಎಲ್ಲಾ ಎಸೆದು ಮನೆಯಲ್ಲೇ ಬೆಳೆದ ಸೂರ್ಯಕಾಂತಿಯ ಹೂ, ಗಾಜಿನ ಹೂದಾನಿಯಲ್ಲಿ.

ನೋಡಿ ದಂಗಾದೆ. ಆಲ್ಜೈಮರ್ ಬಂದು ಅಜ್ಜಿ ಮತ್ತೆ ಬಾಲ್ಯಾವಸ್ಥೆಗೆ ಬಂದಿರಬಹುದೇ?

'ಅಜ್ಜಿ! ರಾತ್ರೋರಾತ್ರಿ ಮನೇನಾ ತಳಕ ಪಳಕ ಮಾಡಿದೀಯ? ನಾನು ಒಂದು ದಿನ ಊರಿಗೆ ಹೋಗಿ ಬರುವಷ್ಟರದಲ್ಲಿ ಮನೇನ ಗುರ್ತು ಸಿಗದೇ ಇರೋಹಾಗೆ

ಮಾಡಿಟ್ಟಿದೀಯ? ನಾಲ್ವಡಿ ಕೃಷ್ಣರಾಜರ 1890ರ ಇಸವಿಗೆ ಹೋಗಿರೋಹಾಗಿದೆ ನನಗೆ. ನೀನು ಆ ಕಾಲದವಳೇ ಅಲ್ವ?'

'ನನ್ನ ವಯಸ್ಸಿನ ಮೇಲೆ ಹಾಸ್ಯ ಸಾಕೋ! ನಮ್ಮ ಸುತ್ತಮುತ್ತಲಲ್ಲಿ ನಮ್ಮ ಕೈಲಿ ಎಷ್ಟಾಗುತ್ತೋ ನಾವು ಮಾಡ್ಬೇಕು. ಒಂದೊಂದು ಸಲ ನಾನು ಆ ಕಾಲದಲ್ಲೇ ಇದ್ದಿದ್ರೆ ಚೆನ್ನಾಗಿರ್‍ತಿತ್ತು ಅಂತ ಅನ್ಸುತ್ತೆ. ದೇವಸ್ಥಾನಕ್ಕೆಲ್ಲಾ ಆರಾಮವಾಗಿ ಹೋಗ್ಬರ್‍ತಿದ್ವಿ. ಮೊನ್ನೆ ಶಿವರಾತ್ರಿಗೆ ಹೋದಾಗ ದೇವಸ್ಥಾನವೇ ಕಾಣಿಸ್ಲಿಲ್ಲ. ಸುತ್ತಲೂ ಫ್ಲೆಕ್ಸಿ ಬೋರ್ಡ್ ಹಾಕಿದ್ರಲ್ಲೋ!'

''ಆಜ್ಜಿ ಊರಲ್ಲಿರೋ ಕಾರ್ಪೊರೇಟರ್‌ಗಳು 15' 20' ಫ್ಲೆಕ್ಸಿಬೋರ್ಡ ಒಳಗೆ ಕೂತು ನಿನಗೆ 'ಶಿವರಾತ್ರಿ ಶುಭಾಶಯ' ಹೇಳೋದಕ್ಕೆ ಬಂದಿದಾರೇಂತ ನೀನು ತಿಳ್ಕೋಬೇಕು!'

'ಆ ಬೋರ್ಡ್‌ಗಳಿಂದ ಎಷ್ಟು ಬಿಸಿಯಾಗುತ್ತೇಂದ್ರೆ 'ಶಿವ ಶಿವ' ಅಂತ ಛಳಿ ಹೋಗೋದಿರ್‍ಲಿ, ಆ ಬಿಸೀಗೆ 'ಅಯ್ಯೋ ಶಿವನೆ' ಅಂತ ಶಿವ ಹೆದರಿ ಹಿಮಾಲಯಕ್ಕೇ ಓಡಿಹೋಗ್ತಾನೇ ನೋಡ್ಕೊ ಒಂದು ದಿವಸ!'

'ಇದೊಂದೇ ಅಲ್ಲ. ಪ್ರತಿ ಹಬ್ಬಕ್ಕೂ – ಗಣೇಶ ಚತುರ್ಥಿ, ಸರಸ್ವತಿ ಪೂಜೆ, ದಸರಾ, ಯುಗಾದಿ – ಎಲ್ಲಾದಕ್ಕೂ ಆ ಕಟ್‌–ಔಟ್ ನಿಂದ ನಿನಗೆ ಕೈಬೀಸಿ ಶುಭಾಶಯ ಹೇಳಕ್ಕೆ ಬರ್‍ತಾರೆ ಕಾರ್ಪೊರೇಟರ್‌ಗಳು.'

'ಅದೊಂದು ಕೇಡು....ಇದೆಲ್ಲಾ ನಡೀತಿರೋದು ಸರಿಯಿಲ್ಲ.'

'ಯಾವ್ದು ಅಂತೀಯ'?

'ಒಂದು ಕಾಲದಲ್ಲಿ ತಿಮ್ಮಕ್ಕ ಸಸಿಗಳನ್ನು ನೆಟ್ಟು ಅವಕ್ಕೆ ನೀರು ಹಾಕಿ ಸಾಲಾಗಿ ಬೆಳಸಿ, ದೇಶದಲ್ಲೆಲ್ಲಾ ಪ್ರಸಿದ್ಧಿಯಾಗಿ 'ಸಾಲುಮರದ ತಿಮ್ಮಕ್ಕ' ಎನಿಸಿಕೊಂಡಳು.. ಪುಣ್ಯಾತ್ಗಿತ್ತಿ.. ಆವಳು ಅದೆಲ್ಲಾ ಮಾಡಿದಾಗ 'ಪರಿಸರ' ಅನ್ನೊ ಪದ ಯಾರ ಬಾಯಿಂದಲೂ ಬಂದಿದ್ದು ನಾನು ಕೇಳಿಲ್ಲ. ಈಗ ನೋಡಿದ್ರೆ ದಿನ ಬೆಳಗಾದ್ರೆ ಪರಿಸರ ಪರಿಸರ ಅಂತ ಕೂಗೋವ್ರೆ!'

'ಹೌದಜ್ಜಿ ಅದು ಈಗ ಫ್ಯಾಷನ್ ಆಗ್ಬಿಟ್ಟಿದೆ'.

'ಇವತ್ತು ವನ ಮಹೋತ್ಸವ ಮಾಡ್ತಿವಿ, ನಾಳೆಯಿಂದ ಮುಂದಿನ ವರ್ಷದವರೆಗೆ ಒಣಮಹೋತ್ಸವ!'

'ಚೆನ್ನಾಗಿ ಹೇಳ್ದೆ ಅಜ್ಜಿ!'

'ನಮ್ಮ ಕಬ್ಬನ್ ಪಾರ್ಕನಲ್ಲಿರೋ ಮರಗಳನ್ನು ಒಡೆದು ಏಳು ಅಂತಸ್ತಿನ ಕಟ್ಟಡ ಕೋರ್ಟು, ಕಛೇರಿ ಕಟ್ಟಕ್ಕೆ ಹೊರಟೀದಾರೆ... ಹೋದ ವರ್ಷ ಸ್ಟೀಲ್ ಬ್ರಿಡ್ಜ್ ಹಾಕ್ತೀವೀಂತ ಅವ್ರು ಕುಣಿದ್ರು..'

'ಅಜ್ಜಿ. 'ನಾವಿರೋದೇ ಹೀಗೆ' ಅಂತ ಸಿನಿಮಾನೇ ಮಾಡಿದ್ರಲ್ಲಾ, ಮತ್ತೆ ಇನ್ನೇನು?'

'ಅಲ್ರೋ! ಸೀತಮ್ಮ ಹೇಳ್ತಾ ಇದ್ರು ಮಾನಸ ಗಂಗೋತ್ರಿಲಿ ಮರಗಳನ್ನೆಲ್ಲಾ ಕಡಿದು 'ಎಕ್ಸ್ಪರಿಮೆಂಟಲ್ ಡಿಪಾರ್ಟಮೆಂಟು' ಕಟ್ಟಿದ್ರಂತಲ್ಲೋ..

'ಎಕ್ಸ್ಪರಿಮೆಂಟಲ್ ಅಲ್ಲಾ ಅಜ್ಜಿ.. ಅದು 'ಎನ್ವೈರ್ಮೆಂಟಲ್ ಡಿಪಾರ್ಟಮೆಂಟ್'!'

'ಏನೋ ಸುಡುಗಾಡು. ಮರಗಳನ್ನ ಕಡಿದು ಅವುಗಳು ಹಾಳಾಗದ ಹೇಗೆ ನೋಡ್ಕೊಳಕ್ಕೆ ಒಂದು ಡಿಪಾರ್ಟಮೆಂಟು ಬೇಕಾ'?

'ಕರೆಕ್ಟ್ ಅಜ್ಜಿ! ಡೆಲ್ಲೀಲಿ ಉಸಿರಾಡಕ್ಕೂ ಅಗ್ದೆ ಜನಗಳು ಒದ್ದಾಡ್ತಿದಾರೆ..ಒಂದು ಕಡೆ ಪೆಟ್ರೋಲು ಡೀಸೆಲ್ ಗಾಡಿಗಳಿಂದ ಹವಾಮಾನ ವಿಷಪೂರಿತವಾದರೆ, ಇನ್ನೊಂದು ಕಡೆ ಪಂಜಾಬ್ ಮತ್ತು ಹರಿಯಾಣದಲ್ಲಿನ ರೈತರು ಹೊಲದಲ್ಲಿ ಜೊಳ್ಳು ಸುಡುವುದರಿಂದ ಅದರ ಹೊಗೆ ಡೆಲ್ಲಿಯ ಕಡೆಗೆ ಹೋಗಿ ಅಲ್ಲಿನ ಹವಾ ಮತ್ತೆಷ್ಟು ಹದಗೆಟ್ಟಿದೆ'.

'ನೋಡಿದೆ ಕಣೋ ಟಿವಿಲಿ. ಎತ್ತಿಗೆ ಜ್ವರಬಂತೂಂತ ಎಮ್ಮೆಗೆ ಬರೆಯೆಳೆದ್ರು ಅನ್ನೋಹಾಗೆ, ಮಕ್ಕಳು ಮರಿಗಳು ದೇಶದಲ್ಲೆಲ್ಲಾ ಪಟಾಕಿ ಹೊಡೆಯಬಾರದೂಂತ ಉಚ್ಚ ನ್ಯಾಯಾಲಯ ಕಾಯಿದೆ ಹೊರಡಿಸಿದೆ. ಅದು ತಪ್ಪು'.


'ಹೇಗೆ ಅಜ್ಜಿ.'

'ಅಲ್ರೋ ದೀಪಾವಳಿ ವರ್ಷಕ್ಕೆ ಒಮ್ಮೆ ದೇಶಾದ್ಯಂತ ಬರುವ ಹಬ್ಬ. ಜೊಳ್ಳನ್ನು ಈಗಲೇ ಸುಡಬೇಡಿ. ಎರಡು ದಿವಸ ಪಟಾಕಿ ಹೊಡೆದು ಎಲ್ಲಾರೂ ಮನೆಯಲ್ಲಿ ದೀಪಾವಳಿಯನ್ನು ಆಚರಿಸೋಣ. ಯಾವಾಗ ವಾತಾವರಣದಲ್ಲಿ ಸುಧಾರಣೆ ಬರುವುದೋ ಆಗ ಜೊಳ್ಳನ್ನು ಕ್ರಮೇಣ ಸುಡಿ ಎಂದು ಮಾಡಬಹುದಾಗಿತ್ತು'.

'ಆದರೂ ಹವಾ ಕೆಡುತ್ತಲ್ಲಾ ಅಜ್ಜಿ,'

'ನಮಗೆ ಒಂದು ವರ್ಷ ಸಿಗುತ್ತಲ್ರೋ! ನಮ್ಮಲ್ಲಿ ಎಷ್ಟು ಲ್ಯಾಬುಗಳಿಲ್ಲ? ಕೃಷಿಗೇ ಹತ್ತೋ ಇಪ್ಪತ್ತಿದೆ. ಅವರುಗಳಿಗೆ ಬರುವ ವರ್ಷದಲ್ಲಿ ಇದಕ್ಕೆ ವಿಜ್ಞಾನ ಮತ್ತು ತಾಂತ್ರಿಕ ಪರಿಹಾರ ಸಿಗಬೇಕು, ಎಷ್ಟು ಖರ್ಚಾದರೂ ಪರವಾಗಿಲ್ಲ ಅಂತ ಪ್ರಧಾನಿ ತಾಕೀತು ಮಾಡಿದರೆ ಖಂಡಿತ ಪರಿಹಾರ ಸಿಕ್ಕೇ ಸಿಗುತ್ತೆ. ಚಂದ್ರಯಾನಕ್ಕೆ ತಯಾರಾಗಿರೋವ್ರು ಮಂಗಳಕ್ಕೆ ಉಪಗ್ರಹ ಕಳಿಸ್ದವ್ರಿಗೆ ನಮ್ಮ ಹೊಲದಿಂದ ಜೊಳ್ಳನ್ನು ಸರಿಯಾಗಿ ತೆಗೆಯೋದಕ್ಕೆ ಆಗ್ಲಿಲ್ಲಾಂದ್ರೆ ನಗಪಾಟ್ಲಲ್ವೇನೋ..ಹಾಗೂ ನಾಚಿಗ್ಗೇಡಲ್ವಾ!'

'ಸರಿಯಾಗಿ ಹೇಳ್ದೆ ಅಜ್ಜಿ.' ■



# ಮೆಂಟಲ್ ಪಲ್ಯೂಷನ್

● ಎನ್. ರಾಮನಾಥ್

'ಪರಿಸರ ಮಾಲಿನ್ಯ ತಗ್ಗಿಸಬೇಕು' ಎಂದ ಗುಂಡ.

'ನಿನ್ನ ಸಂಪ್ರದಾಯವಿರೋಧಿ ಮಾತನ್ನು ಖಂಡಿಸುತ್ತೇನೆ' ಎಂದ ಸೀನ.

'ನಿನ್ನ ನಿಲುವನ್ನು ಸಮರ್ಥಿಸಿಕೊಳ್ಳದಿದ್ದರೆ ಐನೂರು ಗೋಳು ಸೀರಿಯಲ್‌ಗಳನ್ನು ಒಟ್ಟಿಗೇ ನೋಡುವಂತಹ ಶಿಕ್ಷೆ ವಿಧಿಸುತ್ತೇನೆ' ಹರಿಹಾಯ್ದ ಗುಂಡ.

'ಚಾಲೆಂಜ್ ಅಕ್ಸೆಪ್ಟೆಡ್. ಲೆಟ್ ಅಸ್ ಬಿಗಿನ್ ಎಟ್ ದ ಬಿಗಿನಿಂಗ್...'

'ಆಹಾ! ಹಳೆಯ ಕಾಲದ ದೂರದರ್ಶನ ಚಾನಲ್‌ನಂತೆ ಮಾತನಾಡಿದೆ. 'ಬೆಳಗ್ಗೆ ಆರಕ್ಕೆ ಬೆಳಗಿನ ಕಾರ್ಯಕ್ರಮ'; 'ಮಧ್ಯಾಹ್ನ ಮೂರಕ್ಕೆ ಮಧ್ಯಾಹ್ನದ ಕಾರ್ಯಕ್ರಮ' ಅಂತ ಅನೌನ್ಸ್ ಮಾಡ್ತಿದ್ದ ಹಾಗಿದೆ ನಿನ್ನ ಮಾತು. ಬಿಗಿನ್ ಮಾಡೋದು ಬಿಗಿನಿಂಗಲ್ಲೇ... ಮುಂದುವರಿಸು' ರಿಪೋರ್ಟರ್ ರೇಗಣ್ಣನ ರೀತಿಯಲ್ಲಿ ಸಿಡುಕಿದ ಗುಂಡ.

'ಬಿಗಿನಿಂಗು ಅಂದರೆ ಸಮುದ್ರಮಥನದ ಕಾಲ ಕಣಯ್ಯ. ಪ್ರಪಂಚ ಅಲ್ಲಿಯವರೆಗೆ ಚೆನ್ನಾಗಿತ್ತು. ಅವರ ಪಾಡಿಗೆ ಅವರಿರೋದು ಬಿಟ್ಟು ಸಮುದ್ರಾನ ಯಾಕೆ ಕಡೀಬೇಕಾಗಿತ್ತು? ಕಡಿದರು, ಹಾಲಾಹಲ ಬಂತು...'

'ಆಮೇಲೆ ಅಮೃತಾನೂ ಬಂತಲ್ಲ...'

'ಇರಬಹುದು. ಆದರೆ ಮೊದಲು ಬಂದದ್ದು ರೋಗ, ಆಮೇಲೆ ಬಂದದ್ದು ಔಷಧಿ ಅಂತ ಆಯ್ತೋ ಇಲ್ವೋ... ಅದನ್ನೇ ನಾವೂ ಕಂಟಿನ್ಯೂ ಮಾಡಿ ಮೊದಲು ಹೆಂಡ ಕುಡಿಯೋದ ಕಲಿಸ್ತೀವಿ, ಸಿಗರೇಟ್ ಸೇದೋದು ಕಲಿಸ್ತೀವಿ, ಆ ಸೀನ್‌ಗಳು ಬಂದಾಗ ಅವುಗಳು 'ಹಾನಿಕರ' ಅಂತ ಬೋರ್ಡ್ ಹಾಕಿ ನಮ್ಮ ಜವಾಬ್ದಾರಿಯಿಂದ ನುಣುಚ್ಕೊಳ್ತೀವಿ. ಸಂಪ್ರದಾಯ ಮೈ ಬಾಯ್... ಕಂಟಿನ್ಯುಯೇಷನ್ ಆಫ್ ಕಲ್ಚರ‍್ರು ಈಸ್ ಇಂಪಾರ್ಟೆಂಟು' ಬೀಗಿದ ಸೀನ.

'ಹೆಂಡ ಅತ್ಲಾಗ್ ಬಿಡು. ಇರೋ ಬರೋ ಮರ ಎಲ್ಲಾ ಕಡಿದು ಲೇಔಟ್ ಮಾಡಿ ಪರಿಸರ ಹಾಳು ಮಾಡೋದಂತೂ ನಮ್ಮ ಸಂಸ್ಕೃತಿ ಅಲ್ಲ ಅಲ್ವಾ...?'

'ಮರ ಕಡಿಯೋದು ಅಂತ ನಿರ್ದಿಷ್ಟವಾಗಿ ಇಲ್ಲವಾದರೂ, ಮರವನ್ನ ಸೀಳಿದ್ದರಲ್ಲಿ ರಾಮನ ಹೆಸರು ಟಾಪ್ ಟೆನ್‌ನಲ್ಲಿ ಬರತ್ತೆ. 'ಇವನು ಹೇಗೋ ಏನೋ..' ಅಂತ ಸುಗ್ರೀವ ಅನುಮಾನಿಸಿದಾಗ ರಾಮ ಒಂದೇ ಬಾಣದಿಂದ ಹದಿನಾಲ್ಕು ಮರಗಳನ್ನ ಸೀಳಿದ ಅಂತ ವಾಲ್ಮೀಕೀನೇ ಬರ್ದಿದಾರೆ. ಸೀಳಿಂಗ್ ಎ ಮರ ವಾಸ್ ಎ ಮೆಷರ್ ಆಫ್ ಬಿಲ್ವಿದ್ಯೆ ಅಂತಂತೂ ಎಸ್ಟಾಬ್ಲಿಷ್ ಆಯ್ತು. ಲೇಔಟ್ ವಿಷಯಕ್ಕೆ ರೆಫರ್ ಟು ಖಾಂಡವವನ ದಹನ ಆಫ್ ಮಹಾಭಾರತ. ಚೆನ್ನಾಗಿದ್ದ ಕಾಡನ್ನ ಕಡಿದೇ ಇಂದ್ರಪ್ರಸ್ಥ ಮಾಡಿದ್ದನ್ನ ಮರೆತೆಯೇನು?.

ಅರ್ಜುನನೇ ತನ್ನ ಬಾಣಗಳಿಂದ ರೋಡು, ಸೈಟುಗಳನ್ನ ಮಾರ್ಕ್ ಮಾಡಿಕೊಟ್ಟ ಅಂತ ಯಾರೋ ಬುದ್ಧಿಜೀವಿ ಬರೆದಿರೋ ಮಹಾಭಾರತದಲ್ಲಿ ಬರೆದಿದೆಯಂತೆ. ಹೈ ರೈಸ್ ಬಿಲ್ಡಿಂಗುಗಳ ನಿರ್ಮಾಣ ಶುರುವಾಗಿದ್ದೂ ದ್ವಾಪರದಲ್ಲೇ'

'ಯಾವಾಗ?'

'ಎಲ್ಲಿದ್ದರೂ ಕಚ್ಚೇ ಕಚ್ತೇನಿ ಅಂತ ತಕ್ಷಕ ಹೊರಟಾಗ ಪರೀಕ್ಷಿತನನ್ನ ಹೇಗಾದರೂ ಕಾಪಾಡಬೇಕೂಂತ ಟವರ್ ತರಹದ ಕಟ್ಟಡ ಕಟ್ಟಿದ್ದ ದಾಖಲೆ ಇದೆ. ಮರ ಕಡಿಯೋದು, ಗಗನಚುಂಬಿ ಕಟ್ಟೋದು ಈಗಿನ ದುಷ್ಟತನ ಅಲ್ಲ, ಆಗಿನ ಪರಂಪರೆ'

'ಏರ್ ಪಲ್ಯೂಷನ್ನು?'

'ಲಂಕಾದಹನ ಬೈ ಹನುಮಂತ... ನಾನು ಆಂಜನೇಯನ ಅಪ್ಪಟ ಭಕ್ತ. ಅವನ ಹಾಗೆ ಬಾಲಕ್ಕೆ ಬೆಂಕಿ ಹೊತ್ತಿಸಿಕೊಂಡು ಶತ್ರುರಾಷ್ಟ್ರವನ್ನ ಸುಡೋ ತಾಕತ್ತಿಲ್ಲದಿದ್ದರೂ, ಜಗತ್ತಿನ ಜನಸಂಖ್ಯೆ ಕಡಿಮೆ ಮಾಡಬೇಕು ಅನ್ನೋ ಸದಿಚ್ಛೆಯಿಂದ, ನನಗೆ ತೋಚಿದ ಆಲ್ಟರ್ನೇಟಿವ್ ಕ್ರಮ ಅನುಸರಿಸಲು ತೀರ್ಮಾನಿಸಿ, ಸಿಗರೇಟ್ ಸೇದ್ಕೊಂಡು ನಾನೂ, ನನ್ನ ಸುತ್ತಮುತ್ತಲಿನ ಪ್ಯಾಸಿವ್ ಸ್ಮೋಕರ್ರೂ, ಹೊಗೆ ಹಾಕ್ಕೊಳ್ಳೋದಕ್ಕೆ ಬೇಕಾದ ಪರಿಶ್ರಮವನ್ನ ಕೈಗೊಂಡಿದ್ದೀನಿ'

'ವಾಟರ್ ಪಲ್ಯೂಷನ್ನಾದರೂ ತಗ್ಗಿಸಬೇಕು, ಅದಕ್ಕೆ ಯಾವುದೂ ಪುರಾಣದ ಬೇಸ್ ಇಲ್ಲ ಅಂತ ಒಪ್ತೀಯಾ?'

'ಕ್ಷಮಿಸು ಮೈ ಬಾಯ್. ಧರ್ಮರಾಯ ವರ್ಸಸ್ ಯಕ್ಷ ಎಪಿಸೋಡ್ ಜ್ಞಾಪಿಸಿಕೋ. ಪಾಂಡವಾಸ್ ಮೈನಸ್ ಧರ್ಮರಾಯ ಸತ್ಬಿದ್ದಿದ್ದದ್ದು ಕೆರೆಯ ನೀರನ್ನು ಕುಡಿದೇ ಅಲ್ವಾ... ವಾಟರ್ರು ವಾಸ್ ಪಾಯ್ಸನಸ್ಸು ಈವನ್ ಇನ್ ದೋಸ್ ಡೇಸು. ಯಕ್ಷನ ಹತ್ತಿರ ಅದಕ್ಕೊಂದು ಆಂಟಿಡೋಟ್ ಇತ್ತು, ಸತ್ತವರು ಬದುಕಿಕೊಂಡರು. ನೀರನ್ನ ವಿಷ ಮಾಡೋದು ನಮ್ಮ ಆ ಜನ್ಮ ಸಿದ್ಧ ಹಕ್ಕು, ಆದನ್ನ ಕುಡಿದವರನ್ನ ಬದುಕಿಸೋದು ಹೇಗೇಂತ ಯೋಚನೆ ಮಾಡೋದು ಈ ಜನ್ಮ ಸಿದ್ಧ ಹಕ್ಕು. ನಮ್ಮ ದೇಶದಲ್ಲಿ ಪಲ್ಯೂಷನ್ನು ರೆವಲ್ಯೂಷನ್ನೂ ಅಲ್ಲ, ರಿವಿಲೇಷನ್ನೂ ಅಲ್ಲ, ಅದೊಂದು ವಿಧವಾದ ಎವಲ್ಯೂಷನ್ನು'


'ಸೀನ, ಭೂಮಿಯ ಮಾಲಿನ್ಯಗಳನ್ನು ಹೇಗಾದರೂ ನಿಯಂತ್ರಿಸಬಹುದು. ನನಗೆ ಚಿಂತೆಯಾಗಿರೋದು ಬೇರೆಯದೇ'


'ಯಾವುದು?'


'ನಿನ್ನಂತಹ ಜನರ ಮೆಂಟಲ್ ಪಲ್ಯೂಷನ್ ನಿಯಂತ್ರಣ'

ಸೀನ ಅಸೆಂಬ್ಲಿ, ಪಾರ್ಲಿಮೆಂಟು, ಪೊಲೀಸ್ ಸ್ಟೇಷನ್‌ಗಳಲ್ಲಿ ಆಡುವಂತಹ ಮಾತುಗಳನ್ನಾಡಲಾರಂಭಿಸಿದ. 'ಲ್ಯಾಂಗ್ವೇಜ್ ಪಲ್ಯೂಷನ್' ತಡೆಯಲಾರದೆ ಗುಂಡ ಜಾಗ ಖಾಲಿ ಮಾಡಿದ.

■


‘‘ಸೆಕೆ ತಡೆಯೋಕೆ ಆಗಲ್ಲ ಸಾರ್... ಅದಕ್ಕೆ...’’


WATER
‘‘ಹಾಳಾದ್ದು **pollution** ನೋಡಿ, ನಂಬರ್ ಪ್ಲೇಟ್ ನೋಡಲು ನೀರು ಹಾಕಬೇಕಾಗಿದೆ...!’’


ಗ್ರೀನ್ ಹೌಸ್
ಅನಿಲಗಳ
ನಿಯಂತ್ರಣ
G-8 ರಾಷ್ಟ್ರಗಳು
2050 ರೊಳಗೆ 50%
MATSON

# ಭೂಮಿ ಬೆಚ್ಚಗಾದಾಗ

● ಜಿ.ವಿ. ನಿರ್ಮಲ

'ಅಮ್ಮಾವ್ರೇ..., ಅಮ್ಮಾವ್ರೇ...'

ಇದು ಮನೆಗೆಲಸದ ಕಮ್ಲಿಯ ಧ್ವನಿ. ಬೆಳಬೆಳಗ್ಗೆ ಈ ಎಮರ್ಜನ್ಸಿ ಕೂಗಿನ ಕಾರಣ ನೀರಜನಿಗೆ ತಿಳಿಯಲಿಲ್ಲ.

'ಕಮ್ಲೀ ಏನಾಯ್ತೇ? ಯಾಕೆ ಅಷ್ಟು ಗಾಬ್ರೀ? ಮನೇಲಿ ಎಲ್ರೂ ಹುಷಾರಾಗಿದ್ದಾರೆ ತಾನೆ? ನಿಧಾನವಾಗಿ ಬಾ.'

'ಅಮ್ಮಾವ್ರೇ, ಎಲ್ರೂ ಉಷಾರಾಗವ್ರೆ. ಏನೂ ಗಾಬ್ರಿ ಮಾಡ್ಕೋ ಬೇಡಿ. ನಂಗೊಂದು ಇಚಾರ ಗೊತ್ತಾಗ್ತಾ ಇಲ್ಲ. ಅದ್ಕೆ ನಿಮ್ನ ಕೇಳೋಣ ಅಂತ ಓಡ್ಕೋತಾ ಬಂದೆ.'

'ಅಬ್ಬಾ, ನೀನು ಕೂಗಿದ್ದು ಕೇಳಿ, ಯಾರಿಗೇನಾಯ್ತೋ ಅಂತ ನಿಜ್ವಾಗ್ಲೂ ಗಾಬ್ರಿ ಆಯ್ತು. ಅದೇನು ಕೇಳ್ಬೇಕೋ ಕೇಳು. ನಂಗೆ ಗೊತ್ತಿದ್ರೆ ಹೇಳ್ತೀನಿ.'

'ಅಮ್ಮಾವ್ರೇ ಅದೇನೋ ಪ್ರಪಂಚವೆಲ್ಲಾ ಬೆಚ್ಚಗಾಗ್ತಾ ಇದ್ಯಂತೆ. ಹೌದಾ? ಹಾಗಾದ್ರೆ ಇನ್ಮೇಲೆ ಚಳಿಗಾಲ ಇರೋದೇ ಇಲ್ವಾ? ಚಳಿಗಾಲ್ದಲ್ಲೂ ನಮ್ಮ ಹಟ್ಟೀಲಿ ಬೆಚ್ಚಗೆ ಮಲಗಬಹುದು ಅಲ್ವಾ?'

'ಓ, ಅದಾ? ನಿನ್ನ ವರ್ಗೂ ತಲುಪ್ತಾ ಆ ವಿಚಾರ?'

'ಏನಮ್ಮಾವ್ರೇ? ನಾನು ಓದಿಲ್ಲ. ಆದ್ರೂ ಟಿವಿನಲ್ಲಿ ಹೇಳೋದು ತಿಳಿಯಕ್ಕಿಲ್ವಾ? ಓದ್ಸಿದ್ರೆ ನಾನೂ ಓದ್ತಿದ್ದೆ. ನಾನೇನ್ಮಾಡ್ಲಿ? ನಮ್ಮಪ್ಪ ಓದಿಸಲಿಲ್ಲ. ಬಡವ.'

'ಸರಿ ಬಿಡು ಕಮ್ಲಿ. ನೀ ಓದ್ಲಿಲ್ಲ ಅಂತ ಕಣ್ಣೀರು ಹಾಕೋದು ಈಗ ಬೇಡ. ಈಗ ವಿಷ್ಯಕ್ಕೆ ಬಾ.'

'ಹುಂ, ಅದೇ ಅಮ್ಮಾವ್ರೇ, ಪ್ರಪಂಚವೆಲ್ಲಾ ಬಿಸಿ ಆಗ್ತಾ, ಆಗ್ತಾ, ಕಡೆಗೆ ಎಲ್ಲಾ ಕಡೆ ಬಿಸಿ ಆಗತ್ತಂತೆ. ಅಂದ ಮೇಲೆ ಚಳಿಗಾಲ ಇರಕ್ಕಾಗತ್ತಾ? ಭೂಮಿ ಆರಾಮವಾಗಿ ಬೆಚ್ಚಗಿರತ್ತೆ ಅಲ್ವಾ? ಅದೂ ಅಲ್ದೆ ಅದೇನೋ ಅಸಿರು ಮನೆ, ಅಸಿರು ಮನೆ ಅಂತ ಯೋಳ್ತಾ ಇದ್ರು. ಭೂಮಿ ಎಲ್ಲಾ ಅಸಿರಾದ್ರೆ ಎಷ್ಟು ಚೆಂದಾಕಿರತ್ತೆ ಅಲ್ವಾ?'

'ಅಯ್ಯೋ ಮಾರಾಯ್ತಿ, ಅದು ಹಾಗಲ್ಲ. ಹಸಿರು ಮನೆ ಆಗೋದು ಕೆಟ್ಟ ಗಾಳಿಗಳು ಆಕಾಶಕ್ಕಿಂತ ಎತ್ತರಕ್ಕೆ ಏರಿ, ಭೂಮಿಗೆ ಮುಸುಕಿಕೊಂಡಾಗ. ಅದು ಹಸಿರಾಗಿರೋದೂ ಇಲ್ಲ; ಕಾಣೋದೂ ಇಲ್ಲ. ಆದ್ರೆ ಇದ್ರಿಂದ ಭೂಮಿಯ ಶಾಖ ಹೆಚ್ಚತ್ತೆ. ಭೂಮಿ ಬಿಸಿ ಆದ್ರೆ ಭೂಮಿಯ ಅಂಚಿನಲ್ಲಿರೋ ಹಿಮ ಕರಗಿ ಸಮುದ್ರಗಳ ನೀರು ಉಕ್ಕಿ ಹರಿಯತ್ತೆ. ಭೂಮಿ ಮೇಲೆ ಸಮುದ್ರದ ನೀರು ನುಗ್ಗಿದ್ರೆ ಏನಾಗತ್ತೆ?'

'ಓ, ಬುಡಿ ಅಷ್ಟೇನಾ? ಎಷ್ಟು ನೀರು ಉಕ್ಕೀತು? ಸ್ವಲ್ಪ ಕಾಲ ಆದ್ಮೇಲೆ ಬಂದ ನೀರು ಅದರ ಪಾಡಿಗೆ ಅದು ಬಂದ್ಹಂಗೆ ವಾಪಾಸ್ ಓಗತ್ತೆ.'

'ಇದೂ ಟಿವೀಲಿ ಹೇಳಿದ್ರಾ? ಅದ್ಸರಿ. ನೀನು ಬೆಚ್ಚಗೆ ಹಟ್ಟೀಲಿ ಮಲಗಿದ್ರೆ, ನೀರು ವಾಪಾಸ್ ಹೋಗೋವಾಗ ನಿನ್ನನ್ನೂ ಹೊತ್ತುಕೊಂಡು ಹೋದ್ರೆ?'

'ಓ ಬುಡಿ ಅಮ್ಮಾವ್ರೆ, ಬೆಳಗಾನ ಎಂಥ ಮಾತೂಂತ ಆಡ್ತೀರಿ? ಎಲ್ಲೋ ಒಂದ್ಹೂರು ಸಮುದ್ರದ ದಡ ಮುಳಗ್ಬಹ್ದು. ನೀವು ಹೇಳೊದು ಕೇಳಿದ್ರೆ ಊರಿಗೆ ಊರೇ ಮುಳುಗ್ಹೋಗತ್ತೆ ಅಂತ ಅನ್ಸತ್ತೆ.'

'ಹಾಗಾದ್ರೂ ಆಶ್ಚರ್ಯ ಇಲ್ಲ ಕಮ್ಲೀ.. ಸಮುದ್ರದ ಪಕ್ಕ ಇರೋ ಮಂಗಳೂರು ಮುಳಗತ್ತೆ ಅಂತ ವಿಜ್ಞಾನಿಗಳು ಹೇಳ್ತಾ ಇರೋದು ಟಿವೀಲಿ ನೋಡ್ಲಿಲ್ವಾ?'

'ಸರಿ ಬುಡಿ, ಆಮೇಲೆ ಮಳೆ ಬರ್ತೀರೋದು, ನೆರೆ ಬರ್ತಾ ಇರೋದು ಎಲ್ಲಕ್ಕೂ ಇದೇ ಕಾರಣ ಅಂತೀರಿ.'

'ನಿಜ, ನಿಜ. ನಾ ಹೇಳ್ದೇ ಇದ್ರೂ ಅದಕ್ಕೂ ಗ್ಲೋಬಲ್ ವಾರ್ಮಿಂಗೇ ಕಾರಣ'

'ಅಯ್ಯೋ, ಹಂಗಂದ್ರೆ ಏನು? ನಂಗೆ ಅರ್ಥ ಆಗ್ನಿಲ್ಲ.'

'ಗ್ಲೋಬಲ್ ವಾರ್ಮಿಂಗ್ ಅಂದ್ರೆ ಭೂಮಿ ಬಿಸಿ ಆಗೋದು ಅಂತ.'

'ಅಲ್ಲಾ ಅಮ್ಮಾವ್ರೇ ಭೂಮಿ ಒಸಿ ಬೆಚ್ಚಗಾದ ಮಾತ್ರಕ್ಕೆ ಅತಿಯಾಗಿ ಮಳೆ ಬರೋದು, ನೆರೆ ಬರೋದು ಅದ್ಹೆಂಗೆ? ಅದೆಲ್ಲ ನಾ ನಂಬಾಕಿಲ್ಲ. ಭೂತಾಯಿ ಮಹತಾಯಿ. ನಮ್ಮನ್ನ ಕಾಪಾಡ್ತಾಳೆ. ಇದೆಲ್ಲಾ ಮನುಷ್ಯರು ಮಾಡ್ತಾ ಇರೋ ಅನ್ಯಾಯದಿಂದ ಅಗತ್ತೆ. ಆಚಾರ, ಇಚಾರ, ಧರ್ಮ, ದೇವ್ರು ಎಲ್ಲಾ ಬುಡ್ತಾ ಇವ್ರಲ್ಲ ಅದ್ಕೆ. ಅಷ್ಟೆ'

'ಹಾಂ ನೀ ಹೇಳ್ತಿರೋದು ನಿಜಾನೇ. ಮನುಷ್ಯರು ಪ್ರಕೃತಿಯನ್ನ ದೇವರ್ಹಂಗೆ ಕಾಣ್ಬೇಕು. ಅದು ಬಿಟ್ಟು ಕಾಡು ಕಡ್ದು, ಕೆರೆ–ಕೊಳಗಳನ್ನ ಬತ್ತಿಸಿ, ಮನೆ ಮೇಲೆ ಮನೆ ಕಟ್ಟಿ ಭೂತಾಯಿಗೆ ಕಷ್ಟ ಕೊಡ್ತಾ ಇದ್ದಾರೆ. ದುರಾಸೆಯಿಂದ ಭೂಮಿ ಅಗೆದು ಚಿನ್ನ, ಬೆಳ್ಳಿ, ಕಬ್ಬಿಣ ಅಂತ ಖನಿಜಗಳು, ಪೆಟ್ರೋಲ್ ಎಲ್ಲಾ ತೆಗೀತಾರೆ. ಅದ್ರಿಂದ್ಲೇ ಹೀಗಾಗ್ತಾ ಇದೆ.'

'ನೀವು ಹೇಳೋದು ದಿಟ ಅಮ್ಮಾವ್ರೆ. ಈಗೀಗ ಪ್ರಾಣಿಗೋಳ್ಗೂ ಕಾಡಲ್ಲಿ ಆಹಾರ ಸಿಗ್ತಾ ಇಲ್ಲ. ಅದ್ಕೆ ಆನೆ, ಚಿರತೆ ಎಲ್ಲಾ ಊರೊಳ್ಗೆ ಬರ್ತಾವೆ. ನಮ್ಮೂರ್ನಾಗೆ ಗಣಿ ಮಾಡಿ ಹೊಲನೆಲ್ಲಾ ಹಾಳು ಮಾಡವ್ರಂತೆ. ಇಂಥಾ ಕೆಲ್ಸಾನೆಲ್ಲಾ ನಿಲ್ಸಿ ಬಿಟ್ರೆ ಆಯ್ತು. ಅಲ್ವಾ ಅಮ್ಮಾವ್ರೆ?"

'ಇವತ್ತು ನಿಲ್ಸಿ ಬಿಟ್ರೆ ನಾಳೆ ಎಲ್ಲಾ ಸರಿ ಹೋಗತ್ತಾ ಕಮ್ಲೀ? ವರ್ಷಾನುಗಟ್ಲೆ ಹಾಳು ಮಾಡಿದೀವಿ. ಮತ್ತೆ ಸರಿ ಮಾಡೋಕ್ಕೆ ವರ್ಷಗಳೇ ಬೇಕಾಗತ್ತೆ. ಅಷ್ಟ್ರೊಳ್ಗೆ ಏನೇನು ಅನಾಹುತ ಆಗತ್ತೋ? ಅಲ್ವಾ?'

'ಹಾಗಾ ಅಮ್ಮಾವ್ರೆ? ಅದೂ ಸರಿ. ನಾವು ಒಬ್ಬಿಬ್ರು ಮಾಡಿದ್ರೆ ಆಯ್ತಾದಾ? ಅದೇ ಈಗ ಪಿಲಾಸ್ಟಿಕ್ ಬಳಸ್ಬೇಡಿ ಅಂತ ಅತ್ತು ವರ್ಷದಿಂದ ಹೇಳ್ತಿದ್ರು. ಆದ್ರೂ ಜನ ಕೇಳಿಸಕೊಂಡ್ರಾ? ಉಹುಂ. ಈಗ ದಂಡ ಹಾಕ್ತೀವಿ ಅಂದ್ಮೇಲೆ ಸ್ವಲ್ಪ ತಗ್ಗಿದ್ದಾರೆ ಅಲ್ವಾ?'

'ಹೌದು. ಪ್ರಪಂಚದಲ್ಲಿರೋ ಎಲ್ಲಾರ ತಲೇನೂ ಬಿಸಿ ಆದ್ರೆ ಮಾತ್ರ ಸ್ವಲ್ಪ ಸುಧಾರಿಸಬಹುದ್ದು. ಅಷ್ಟೇ ಅಲ್ಲ ಅನಾವಶ್ಯಕವಾಗಿ ವಾಹನಗಳನ್ನ ಬಳ್ಸೋದು, ಕಾರ್ಖಾನೆಗಳಿಂದ ಹೊಗೆ ಉಗುಳೋದು, ಅತಿಯಾಗಿ ವಿದ್ಯುಚ್ಛಕ್ತಿ ಬಳ್ಸೋದು ಎಲ್ಲಾ ಸೇರಿದ್ರೆ ಭೂಮಿ ಮತ್ತಷ್ಟು ಬಿಸಿ ಆಗತ್ತೆ. ಇದೆಲ್ಲಾ ಕಡಿಮೆ ಮಾಡ್ಬೇಕು.'

'ಅಯ್ಯೋ ಈಗಿನ ಮಕ್ಳು ಐದು ರೂಪಾಯಿ ಮೆಣಸಿನಕಾಯಿ ತರೋಕು ಗಾಡಿ ಹತ್ತಿ, 'ಬುರ್....' ಅಂತ ಪಕ್ಕದ ಅಂಗ್ಡೀಗೆ ಹೋಗ್ತಾವೆ. ರಜಾ ದಿನ ಕೆಲ್ಸ ಇದ್ರೂ, ಇಲ್ಲದಿದ್ರೂ ಕಾರು ಹತ್ತಿ ತಿರುಗಾಡ್ತಾನೇ ಇರ್ತಾವೆ. ದುಡ್ಡು ಜಾಸ್ತಿ ಇದ್ರೆ ಇವೆಲ್ಲಾ ಆಗೋದೆ. ನಮ್ಮನೇಲಿ ಇರೋದು ಒಂದೇ ದೀಪ. ಎಲ್ಲಿ ಹೋದ್ರೂ ನಡಕ್ಕೊಂಡೇ ಹೋಗೋದು. ಎಚ್ಗೆ ಇದ್ರೆ ಇಂಥ ಕಷ್ಟ. ಅಲ್ವಾ ಅಮ್ಮೋರೆ?'

'ಅಬ್ಬಾ ಒಳ್ಳೆ ವೇದಾಂತ ಹೇಳ್ಬಿಟ್ಟೆ ಕಮ್ಲೀ. ಈಗಾಗ್ಲೇ ಮನುಷ್ಯರು ಭೂಮೀನ ಸಾಕಷ್ಟು ಹಾಳು ಮಾಡಿದ್ದಾರೆ. ಕಂಡ, ಕಂಡ ಕಡೆ ದೀಪಗ್ಳು, ಮನೆಗ್ಳು, ಕಾರ್ಖಾನೆಗ್ಳು. ಈಗ ಹುಟ್ಟೋ ಮಕ್ಳು ಕೈಯ್ಯಲ್ಲಿ ಮೊಬೈಲು, ಕಂಪ್ಯೂಟರ್ರು ಇಟ್ಕೊಂಡೇ ಹುಟ್ತಾರೆ. ಇದನ್ನೆಲ್ಲಾ ಕಡಿಮೆ ಮಾಡೋದ್ಹೇಗೆ ಅಂತ ತಲೆ ಮೇಲೆ ಕೈ ಇಟ್ಕೊಂಡಿದ್ದಾರೆ ತಿಳಿದವ್ರು. ಎಲ್ಲಾ ದೇಶದವ್ರು, ಸರ್ಕಾರಗಳು ಈಗ ಎಚ್ಚೆತ್ಕೊಂಡು ಇದರ ಬಗ್ಗೇನೇ ಯೋಚ್ನೆ ಮಾಡ್ತಾ ಇವೆ.'

'ಅಮೆರಿಕಾ, ಅಮೆರಿಕಾ ಅಂತ ಏಟೊಂದು ಜನ ಹೋಗವ್ರಲ್ಲ. ಅಲ್ಲೂ ಭೂಮಿ ಬಿಸಿ ಆಗತ್ತಾ ಅಮ್ಮಾವ್ರೇ?'

'ಹೌದು. ಅಲ್ಲೂ ಅಗತ್ತೆ. ಚೈನಾದಲ್ಲೂ ಆಗತ್ತೆ. ಜಪಾನ್‌ನಲ್ಲೂ ಆಗತ್ತೆ. ಆಫ್ರಿಕಾದಲ್ಲೂ ಆಗತ್ತೆ. ಪ್ರಪಂಚ ಅಂದ್ರೆ ಬರೀ ನಮ್ಮ ಭಾರತಾನಾ?'

'ಅಂಗಾ? ಅವೆಲ್ಲಾ ನಂಗ ತಿಳ್ಯಾಕಿಲ್ಲ. ಸರಿ ಬುಡಿ ಮತ್ತೆ'.

'ಆ..? ಏನು ಹಂಗಂತಿ? ಎಲ್ರೂ ಒಟ್ಟಿಗೆ ಮುಳುಗಲಿ ಅಂತಾನಾ?'

'ಹಾಗಲ್ಲ ಅಮ್ಮಾವ್ರೇ. ಅದು ದೊಡ್ಡ ದೇಶ ಅಂತ ನೀವೇ ಏಳ್ತಾ ಇರ್ತೀರಾ. ಅದ್ಕೇ ಆ ಪಾಡು ಆದ್ಮೇಲೆ ನಮ್ದೇನು? ಈಗ ನೋಡಿ ನಿಮ್ಮನೆ ದೊಡ್ಡದು. ನಿಮ್ಮ ಮನೇನೇ ಇಲ್ಲ ಅಂದ್ಮೇಲೆ ನಮ್ಮ ಹಟ್ಟಿ ಇರ್ತದಾ?'

'ಅಬ್ಬಾ ಕಮ್ಲಿ. ನೀನು ಚೆನ್ನಾಗಿ ಮಾತಾಡ್ತೀ ಕಣೆ. ಎಂಥಾ ಕಷ್ಟ ಬಂದ್ರೂ ಸಮಾಧಾನವಾಗಿರ್ತಿ'.

'ಅಮ್ಮಾವ್ರೇ, ಸ್ವಾಮೋರು ಕೂಗ್ತಾ ಅವ್ರೆ.'

'ಬಂದೆ.... ಬಂದೆ. ಏನು?'

'ಏನು ಬೆಳಗ್ಗೆ ಬೆಳಗ್ಗೆ ಬಿಸಿ, ಬಿಸಿ ಸಂಭಾಷಣೆ? ಬಿಸಿ, ಬಿಸಿ ಕಾಫಿ ಕುಡಿಯೋಣ್ವಾ, ಬೇಡ್ವಾ?'

'ಬಂದೇ. ಇಲ್ಲಿ ಕಮ್ಲಿ ಪ್ರಪಂಚ ಬಿಸಿಯಾಗ್ತಿರೋ ವಿಷ್ಯ ಕೇಳ್ತಾ ಇದ್ಳು. ಏನಾದ್ರೆ ಏನು. ನಮಗಂತೂ ಬೆಳಗ್ಗೆ ಬಿಸಿ ಬಿಸಿ ಕಾಫಿ ಬೇಕೇ ಬೇಕು. ಕಮ್ಲೀ ಬಾಗ್ಲಿಗೆ ನೀರು ಹಾಕಿ ಬಾ. ನಿಂಗೂ ಕಾಫಿ ಕೊಡ್ತೀನಿ.'

■

# ಹೆಂಗಿದ್ದೋನು ಹೆಂಗಾದ........

● ಎಚ್. ಗೋಪಾಲಕೃಷ್ಣ

ನಮ್ಮ ವಿಜೀ, ಅಮೆರಿಕಕ್ಕೆ ಓದೋಕ್ಕೆ ಅಂತ ಹೋಗಿ ಅಲ್ಲೇ ಕೆಲಸ ಹುಡುಕ್ಕೊಂಡು ಮದುವೆ ಗಿದುವೆ ಆಗಿ ಅಲ್ಲೇ ನೆಲೆಸಿರೋ ಅಸಂಖ್ಯಾತ ನಮ್ಮೂರಿನವರ ಪೈಕಿ ಇವನೂ ಒಬ್ಬ.ಆದರೆ ಇವನಿಗೆ ಇನ್ನೂ ಮದುವೆ ಇಲ್ಲ ಅಷ್ಟೇ. ಅವನಿಗೆ ಹುಡುಗಿ ತಲಾಷ್ ಮಾಡ್ತಾ ಇದೀವಿ. ವರ್ಷಕ್ಕೆ ಮಿನಿಮಮ್ ಎರಡು ಸಲ ಊರಿಗೆ ಬರ್ತಾನೆ. ಏರ್‌ಪೋರ್ಟ್‌ಗೆ ನಮ್ಮನೆ ಹತ್ತಿರದಲ್ಲಿದೆ ಅಂತ ಲಗೇಜು ಹೊತ್ತು ಮೊದಲು ನಮ್ಮನೇಗೆ ಬಂದು ಅಲ್ಲಿಂದ ಬೇರೆ ಬಂಧುಗಳ ಮನೇಗೆ ಹೋಗೋದು ಇವನ ರೂಢಿ. ಅಪ್ಪ ಅಮ್ಮ ಇಬ್ಬರೂ ಇಲ್ಲದೇ ಇರೋದರಿಂದ ಅವನ ಬಂಧುಗಳೇ ಅವನಿಗೆ ಕೇರ್ ಟೇಕರುಗಳು.

ಮೊದಲು ನಮ್ಮ ಮನೆಗೇ ಬರೋದರಿಂದ ಅವನ ಅಸಂಖ್ಯಾತ ಬಟ್ಟೆಗಳು ಅದೂ ಈಚಿನ ಫ್ಯಾಷನ್‌ನವು ನನಗೆ ಹಸ್ತಾಂತರ ಆಗುತ್ತವೆ. ಅಮೇರಿಕಾದ ಫ್ಯಾಶನ್ ಅನ್ನು ಮೊಟ್ಟಮೊದಲ ಬಾರಿಗೆ ಈ ವಿದ್ಯಾರಣ್ಯಪುರದಲ್ಲಿ ಜಾರಿ ಮಾಡ್ತಿರೋನು ನಾನೇ! ಬೆನ್ನೇ ಇಲ್ಲದೇ ಇರೋ ಟೀ ಶರ್ಟು, ಮೊಣಕಾಲು ಮೇಲಿನ ಭಾಗವೇ ಇಲ್ಲದ ಪ್ಯಾಂಟು, ಬರೀ ತೋಳು ಇರುವ ಬನೀನು.... ಮುಂತಾದ ವೇಷದಲ್ಲಿ ನೀವು ನನ್ನನ್ನು ನೋಡೇ ಇರ್ತೀರಿ. ಇದರ ಮೂಲ ಬೆಲೆಬಾಳುವ ವಿಜಿ ತೊಟ್ಟು ಬಿಟ್ಟ ಲೇಟೆಸ್ಟ್ ಫ್ಯಾಶನ್ ಬಟ್ಟೆಗಳು. ಬಟ್ಟೆ ಜೊತೆಗೆ ಟಿಷ್ ಟಿಷ್ ಅಂತ ಸ್ಪ್ರೇ ಮಾಡಿಕೊಳ್ಳುವ ಸೆಂಟು ಎಳೆದು ಊದಿದರೆ ದಂಡಿಯಾಗಿ ಹೊಗೆ ಬಿಡುವ ನಿಕೋಟೀನು ಬತ್ತಿ ಇವೆಲ್ಲವೂ ನನಗೆ ಟ್ರಾನ್ಸ್ಫರ್ ಆಗುವ ವಸ್ತುಗಳಲ್ಲಿ ಸೇರಿವೆ. ಅವನು ಊರಲ್ಲಿ ಇರೋ ಅಷ್ಟು ದಿವಸ ಡೀಸೆಲ್ ಕಾರ್ ಉಪಯೋಗಿಸ್ತಾನೆ ಅದಿಲ್ಲ ಅಂದರೆ ಪೆಟ್ರೋಲಿಂದು. ಅಂದರೆ ಇಲ್ಲಿಗೆ ಬಂದಾಗಲೆಲ್ಲ ದಿಲ್‌ದಾರ್ ಆಗಿ ಡಾಲರು ಕನ್ವರ್ಟೆಡ್ ಟು ರುಪಾಯ್ ಸಕತ್ತಾಗಿ ಖರ್ಚು ಮಾಡ್ತಾನೆ ಮತ್ತು ಇನ್ ಡೈರೆಕ್ಟಾಗಿ ನಮ್ಮಗಳ ಮನೇಲಿ ಕಿಚ್ಚು ಹತ್ತಿಸಿ ಬಿಟ್ಟಿರ್ತಾನೆ.

ಇದಿಷ್ಟು ನಿಮ್ಮ ನೆನಪಿನಲ್ಲಿರಲಿ.....

ಮೊನ್ನೆ ಬೆಳಿಗ್ಗೆ ಬೆಳಿಗ್ಗೆ ಫೋನು ರಿಂಗಿಸಿದಾಗ ಎತ್ತಿ ಕೊಂಡರೆ ವಿಜಿ ದನಿ. ಚಿಕಪ್ಪಾ ನಿಮ್ಮ ಏರಿಯಾಗೆ ಯಾವ ನಂಬರಿನ ಬಸ್ಸು ಏರ್ ಪೋರ್ಟಿನಿಂದ....?

ಯಾಕಪ್ಪಾ ಯಾರು ಬರ್ತಿದಾರೆ?.... ಅಂತ ಕೇಳಿದೆ, ಬಸ್ ನಂಬರ್ ಹೇಳಿದ ನಂತರ. ಯಾರೋ ಏನು? ನಾನೇ ಬಂದಿದೀನಿ. ಬಸ್ಸಲ್ಲಿ ಬರೋಣ ಅಂತ... ಅಂದ.

ನನಗೆ ಜಗತ್ತು ಹತ್ತು ಸುತ್ತು ಗಿರ್ ಗಿಲಕೆ ಹೊಡೆದ ಹಾಗೆ ಆಯಿತು. ಪ್ರತಿ ಸಲ ಅವನು ಬಂದಾಗ ಒಂದು ಡೀಸೆಲ್ ಗಾಡಿ ನಾನೇ ಗೊತ್ತು ಮಾಡುತ್ತಿದ್ದೆ. ಊರಲ್ಲಿರೋ ಅಷ್ಟು ದಿವಸ ಅವನೇ ಗಾಡಿ ಓಡಿಸಿ ಇಡೀ ಊರಿಗೆ ಕರಿಹೊಗೆ ತುಂಬಿಸಿ ಹೋಗುತ್ತಿದ್ದ. ಈ ಸಲ ಬಸ್ಸಿನಲ್ಲಿ ಮನೇಗೆ ಏರ್‌ಪೋರ್ಟಿನಿಂದ ಬರ್ತಿದಾನೆ ಅಂದರೆ ಟ್ರಂಪು ಇವನನ್ನು ಓಡಿಸಿಬಿಟ್ನಾ? ಪಾಪ ಲಗ್ಗೇಜು ಹೇಗೆ ಹೊತ್ತು ಬರ್ತಾನೋ ಅನಿಸಿತು.

ಒಂದು ಗಂಟೆ ಅಷ್ಟರಲ್ಲಿ ಮನೇಗೆ ಬಂದ. ಕೈಯಲ್ಲಿ ಒಂದು ಪುಟ್ಟ ಸೂಟ್ ಕೇಸು, ಅದರಲ್ಲಿ ಅವನ ಬಟ್ಟೆ ನಾಲ್ಕು ದಿನಕ್ಕೆ ಆಗೋ ಅಷ್ಟು ಅಷ್ಟೇ !

ಲಗೇಜ್ ಜತೇಲಿ ತರದೇ ನಂತರ ಬರೋಕ್ಕೆ ಅದೇನೋ ವ್ಯವಸ್ಥೆ ಮಾಡ್ತಾರಲ್ಲ ಹಾಗೇನಾದರೂ ಮಾಡಿದಾನಾ?

ಮಿಕ್ಕ ಲಗ್ಗೇಜು.... ಅಂದೆ.

ಇಲ್ಲ ಚಿಕ್ಕಪ್ಪಾ ಇಷ್ಟೇ.... ಅಂದ !

ಯಾಕೆ ಪ್ರತಿಸಲ ಬಂದಾಗಲೂ ಒಂದು ಟ್ರಕ್ ಲೋಡ್ ತರ್ತಾ ಇದ್ದೆ........ ಅಂದೆ. ನನಗೆ ಅಂತ ತರುತ್ತಿದ್ದ ಲೇಟೆಸ್ಟ್ ಫ್ಯಾಷನ್ನಿನ ಬಟ್ಟೆಗಳು ತಪ್ಪಿದವಾ ಅಂತ ಸಂಕಟ ಶುರು ಆಗಿತ್ತು.

ಅದೆಲ್ಲಾ ಇಲ್ಲ ಅದೇ ದೊಡ್ಡ ಕಥೆ ನಿಧಾನಕ್ಕೆ ಹೇಳ್ತೀನಿ ಬಿಡು...... ಅಂದ.

ರೋಫಾಗಿ ಕೂತು ದೊಡ್ಡ ಧನಿಯಲ್ಲಿ ಕಿರುಚಿತಾ ಮಾತಾಡ್ತಾ ಇದ್ದೋನು ತುಂಬಾ ಸಣ್ಣ ದನಿನಲ್ಲಿ ಸೌಮ್ಯವಾಗಿ ಮಾತಾಡೋದು ಕೇಳಿ ಟ್ರಂಪು ಸರಿಯಾಗೇ ಕೊಟ್ಟಿದಾನೆ ಅನಿಸ್ತು. ಉಂಡಾದ ಮೇಲೆ ನಿಕೋಟಿನ್ ಬತ್ತಿ ಎಳೀತಾ ಆಕಾಶಕ್ಕೆ ಹೊಗೆ ತುಂಬುತ್ತಾ ಇದ್ದೋನು ಅದಿಲ್ಲದೇ ಒಂದು ಲೋಟ ನೀರು ಕುಡಿದು ಹಾಸಿಗೆ ಮೇಲೆ ಮೈ ಬಿಸಾಕಿದ ನೋಡಿ, ಟ್ರಂಪು ಅಂದರೆ ನಮ್ಮ ಹುಡುಗರು ಯಾಕೆ ಬೆವರುತಾರೆ ಅಂತ ಗೊತ್ತಾಯ್ತು.

ಬೆಳಿಗ್ಗೆ ಐದಕ್ಕೇ ಎದ್ದು ಪಕ್ಕದ ಪಾರ್ಕಿನಲ್ಲಿ ಎರಡು ಗಂಟೆ ಜಾಗಿಂಗ್ ಮಾಡಿ ಶರಟು ಒದ್ದೆ ಮಾಡ್ಕೊಂಡು ಬಂದ. ಸ್ನಾನ ಮುಗಿಸಿದನಾ?

ಅವನಿಗೇ ಅಂತಲೇ ಬ್ರೆಡ್ಡು ಬೆಣ್ಣೆ ಚೀಸು ಇವೆಲ್ಲಾ ತಂದು ರಾತ್ರಿನೇ ಫ್ರಿಜ್‌ನಲ್ಲಿ ಇರಿಸಿದ್ದಳು ನನ್ನಾಕೆ. ವಿಜಿ ಇಲ್ಲಿಗೆ ಬಂದಾಗಲೆಲ್ಲ ಇದೇ ಅವನ ಬ್ರೇಕ್ ಫಾಸ್ಟು. ಸ್ನಾನ ಮುಗಿಸಿ ಆಚೆ ಬಂದನಾ

ಚಿಕ್ಕೀ ಏನು ತಿಂಡೀ..... ಅಂದ.

ಬ್ರೆಡ್ಡು ಬಟರು ಫ್ರಿಜ್ ನಲ್ಲಿದೆ ಇರು ಕೊಡ್ತೀನಿ.... ಅಂದಳು ಚಿಕ್ಕಿ..

ಅದು ಬೇಡ ಚಿಕ್ಕಿ, ನೀವೇನು ಮಾಡಿಕೊಂಡಿದಿರೋ ಅದೇ ಕೊಡಿ.... ಅಂತ ಒಂದು ಕೇಜಿ ಉಪ್ಪಿಟ್ಟು ತಿಂದ !

ಚಿಕ್ಕಿ ಕಣ್ಣು ಬಾಯಿ ಬಿಟ್ಕೊಂಡು ನಿಂತಿದ್ಲು.

ಚಿಕ್ಕಪ್ಪಾ ಚೈತ್ರನ ಸೈಕಲ್ಲು ತಗೊಂಡು ಹೋಗ್ತೀನಿ.. ಅಂತ ಗ್ಯಾರೆಜಿಂದ ಸೈಕಲ್ ಆಚೆ ತೆಗೆದ. ಊರಿಗೆ ಬಂದರೆ ಸಾಕು ಕಾರು ತಗೊಂಡು ದಿವಸಕ್ಕೆ ನೂರು ಲೀಟರು ಪೆಟ್ರೋಲು ಹಾಕಿಸಿ ಸುತ್ತುತ್ತಾ ಇದ್ದೋನು ಸೈಕಲ್ಲೇರಿ ಹೋದ ಅಂದರೆ ಯಾರಿಗೆ ತಾನೇ ಸಂಕಟ ಆಗೋಲ್ಲ ಇವರೇ?

ನನ್ನಾಕೆ ಕಣ್ಣು ಒರೆಸ್ಕೊತಾ ಅವನು ಬಂದಮೇಲೆ ಸಮಾಧಾನ ಮಾಡ್ರಿ ಪಾಪ, ಇರೋ ದುಡ್ಡೆಲ್ಲಾ ಬೋಳಿಸಿ ಕಳಿಸಿಬಿಟ್ಟಿದ್ದಾನೆ ಅಂತ ಕಾಣುತ್ತೆ ಟ್ರಂಪು..... ಅಂದಳು.

ಒಂಬತ್ತರ ಸುಮಾರಿಗೆ ಮನೇಗೆ ಬಂದ.

ಹಿಂದೆಲ್ಲಾ ರಾತ್ರಿ ಸುಮಾರು ಹೊತ್ತಿನವರೆಗೆ ತಾರಸಿಲಿ ಕೂತು ಎದುರಿಗೆ ಚಿಪ್ಸು, ಕೋಡ್ಬಳೆ, ಚಕ್ಲಿ, ಚೌಚೌ ಇಟ್ಕೊಂಡು ಬಾಟಲಿ ಮೇಲೆ ಬಾಟಲಿ ಖಾಲಿ ಮಾಡ್ತಿದ್ದ.

ಏನಪ್ಪಾ ವಿಜಿ ಮಾಡಿ ಮೇಲೆ ಹೋಗ್ತಿಯಾ? ಬಾಟಲು ತೆಗೀಲಾ ಆಚೆ?..... ಅಂದೆ.

ಚಿಕಪ್ಪಾ ಮಾಡಿಗೆ ಹೋಗೋಣಾ ಬೇಕಾದರೆ. ಬಾಟಲು ಗೀಟಲು ಬೇಡ...... ಅಂದ.

ಹೆಂಡತಿ, ಅದೇ ಚಿಕ್ಕಿ, ಒಳಗೆ ಬಾ ಅಂತ ಸಂಜ್ಞೆ ಮಾಡಿದಳು. ಒಳಗೆ ಹೋದೆ, ಅವಳ ಹಿಂದೇನೆ.

ಅದೇನು ತಾಪತ್ರಯ ಅಂತ ವಿಚಾರಿಸಿಕೊಳ್ಳಿ. ಪಾಪ ಅಪ್ಪ ಅಮ್ಮ ಇಲ್ಲದೇ ಇರೋ ಮಗು. ದುಡ್ಡು ಗಿಡ್ಡು ಬೇಕಾ ಕೇಳಿ. ತರಲೆ ತಾಪತ್ರಯಕ್ಕೆ ಸೂಯಿಸೈಡ್ ಮಾಡಿಕೊಂಡು ಬಿಟ್ಟೀತು..... ಅಂದಳು.

ನನಗೂ ಒಂದು ಕ್ಷಣ ವಿಜೂ ಅಯ್ಯೋ ಪಾಪ ಅನಿಸಿಬಿಡ್ತು ಇವರೇ.

ಇವತ್ತು ಬಾಟಲು ಗಿಟಲು ಇಲ್ಲದೇ ಸುಮ್ನೆ ಕೂತರೆ ಅವನ ಹೊಟ್ಟೆಲಿರೋ ಮಾತು ಎಂದಿನ ಹಾಗೆ ಆಚೆ ಬರುತ್ಯೆ ಅನ್ನಿಸ್ತು.

ಹಾಲು ಕಾಯಿಸಿ ಅದಕ್ಕೆರಡು ಚಮಚ ಬಾದಾಮಿ ಪುಡಿ ಸೇರಿಸಿ ಎರಡು ಲೋಟ ಹಿಡಕೊಂಡು ವಿಜೂ ಬಾ ಮಾಡಿ ಮೇಲೆ ಹೋಗೋಣಾ, ಹಾಗೇ ಅಲ್ಲಿ ಕಾಂಗ್ರೆಸ್ ಇದೆ ಅದನ್ನೂ ತಗೋ... ಅಂದೆ.

ಕೂತ ಪಟ್ಟಿಗೆ ಬೇಕಾದ್ರೆ ಹತ್ತು ಕೇಜಿ ಕಾಂಗ್ರೆಸ್ ಖಾಲಿ ಮಾಡಿಬಿಡ್ತೀನಿ ನಾನೊಬ್ಬನೇ, ನನ್ನಾಕೆ ಅಡ್ಡ ಬಂದು ತಡಿದೇ ಇದ್ಬಿಟ್ರೆ.....

ತಾರಸಿಲಿ ಕಡಪ ಕಲ್ಲಿನ ಬೆಂಚಿನ ಮೇಲೆ ಅವನು ಕೂತನಾ, ಅವನೆದುರು ನಾ ಕೂತೆನಾ? ನಮ್ಮಿಬ್ಬರ ಮಧ್ಯ ಒಂದು ಸ್ಟೂಲು ಇಟ್ಕೊಂಡೇವಾ. ಅದರ ಮೇಲೆ ಬಾದಾಮಿಹಾಲಿನ ಲೋಟ ಒಂದು ಕಡೆ ಅವನಿಗೆ, ಇನ್ನೊಂದು ಈ ಕಡೆ ನನಗೆ, ಮಧ್ಯ ಕಾಂಗ್ರೆಸ್ಸು ಪೇಪರಿನ ಮೇಲೆ .....

ಇಬ್ಬರೂ ಎದುರುಬದುರು ಕೂತೋ.

ನಾನೇ ಮೊದಲು ಮಾತು ಶುರು ಹಚ್ಚಿದೆ..

ಯಾಕೋ ಬಾಟಲು ಬೇಡ ಅಂದೆ? ಹೆಲ್ತ್ ಪ್ರಾಬ್ಲಮ್ಮಾ....?

ಅಯ್ಯೋ ಹೆಲ್ತ್ ಅಲ್ಲ ಚಿಕಪ್ಪಾ. ಒಂದು ಲೀಟರು ಡ್ರಿಂಕ್ಸು ತಯಾರಿಸೋಕ್ಕೆ ಅದೆಷ್ಟೋ ನೀರು ಕರ್ಚಾಗುತ್ತೆ ಅಂತ ಓದಿದೆ. ಹೀಗೇ ನೀರು ಕರ್ಚಾಗುತ್ತಾ ಹೋದರೆ ಭೂಮಿ ಗತಿಯೇನು ಅನ್ನಿಸ್ತು. ಬಾಟಲು ನಿಲ್ಸಿದೆ...... ಅಂದ !

ಬೇಡ ಅಂದಕೂಡಲೇ ನಿಲ್ಸೋದು ಅಂದರೇ ಸಾಮಾನ್ಯವಾ.....

ಹೇಗಿದೇಪ್ಪಾ, ಅಮೇರಿಕಾದಲ್ಲಿ ಕೆಲಸ...? ಟ್ರಂಪು ನಮ್ಮೋರ್ನೆಲ್ಲಾ ದೇಶ ಬಿಟ್ಟು ಓಡಿಸ್ತಾನೆ ಅಂತ ಇಲ್ಲಿ ಲಿಬರಲ್ಸು ಹೇಳ್ತಾ ಇದಾರಂತೆ... ಅಂದೆ.

ಲಿಬರಲ್ಸು ಅಂದರೆ ಏನೂ ಅಂತಲೇ ನನಗೆ ತಿಳೀದು. ಅಮ್ರಿಕಾದವರ ಹತ್ರ ಮಾತಾಡ್ಬೇಕಾದ್ರೆ ಲಿಬರಲ್ಲೂ ಡೆಮೋಕ್ರಟು ಅನ್ನೋ ಪದಗಳನ್ನು ಧಾರಾಳವಾಗಿ ಸೇರ್ಸು ಅಂತ ನನ್ ಗೆಳೆಯ ಅವಾಗವಾಗ ಹೇಳುತ್ತಾ ಇರ್ತಾನೆ. ಅದು ಈಗ ನೆನಪಿಗೆ ಬಂತು.

ಛೇ ಛೇ ಇಲ್ಲಾ ಚಿಕಪ್ಪಾ. ಕೆಲಸ ಮಾಡೋರಿಗೆ ಚೆನ್ನಾಗೇ ಇದೆ. ನನಗೇ ನೋಡು ಹೋದ ಸಲ ಬಂದಾಗ ಬರ್ತಿತ್ತಲ್ಲಾ ಪಗಾರ ಅದರ ಮೂರರಷ್ಟು ಈಗ....... ಅಂದ.

ಮನಸು ತುಂಬಾ ನಿರಾಳ ಆಗಿಬಿಡ್ತು. ಮುಂಡೇದು ಕೆಲಸ ಕಳಕೊಂಡು ಬಂದಿಲ್ಲ ಅಂತ. ಆತಂಕ ದೂರಾದರೆ ಖುಷಿ ಹೆಚ್ಚು ತಾನೇ.....

ಆದರೂ ಯಾಕೆ ಹೀಗೆ ಕಂಜೂಸ್ ತರಹ ಜಿಪುಣನ ಹಾಗೆ ಆಡ್ತಿದಾನೆ?

ಚಿಕ್ಕಪ್ಪ ಆದೋನು ಇದನ್ನ ಕೇಳಲೇ ಬೇಕು ತಾನೇ?

ಹೇಳು ಹೊಸದು ಏನೇನು ಮಾಡ್ತಿದೀ ಅಮ್ರಿಕಾದಲ್ಲಿ...... ಅಂದೆ.

ಚಿಕಪ್ಪಾ, ಪೂರ್ತಿ ವೆಗಿ ಆಗ್ಬಿಟ್ಟೆ...... ಅಂದ !

ಶಾಕ್ ಹೊಡೆದ ಹಾಗೆ ಆಯಿತು. ನಮ್ಮೂರಿಗೆ ಬಂದಾಗಲೆಲ್ಲ ವೆಜ್ ಅಲ್ಲದೇ ಇರೋ ಹೋಟ್ಲು ಹುಡುಕ್ಕೊಂಡು ಸಂದಿಗೊಂದಿ ಸುತ್ತೋನು! ಸಂದಿಗೊಂದಿಗಳನ್ನು ನಮ್ಮ ಮಕ್ಕಳಿಗೆ ತೋರಿಸಿಕೊಟ್ಟು ಹಾಳು ಮಾಡ್ತಾಯಿದಾನೆ ಅನ್ನೋ ಆರೋಪ ಅವನ ಮೇಲೆ ಲೇಡಿ ರಿಲೇಷನ್ಸು ಮಾಡೋರು.

ಯಾಕೆ?..... ಅಂದೆ.

ಪಾಪ ಪ್ರಾಣಿಗಳು ಅಲ್ವಾ..?

ಅವು ಆವಾಗ್ಲಿಂದಲೂ ಪ್ರಾಣಿಗಳೇ ತಾನೇ? ಇದೇನು ಈಗ ಏಕ್ದಂ ಅದರ ಮೇಲೆ ಪ್ರೀತಿ..?

ಪ್ರಾಣಿಗಳನ್ನು ಸಾಯಿಸ್ತಾ ಹೋದರೆ ಎಕೋ ಇಂಬ್ಯಾಲೆನ್ಸ್ ಆಗುತ್ತೆ ಚಿಕಪ್ಪಾ. ಪ್ರಾಣಿಗಳ ಸಂಖ್ಯೆ ಕಡಿಮೆ ಆಗ್ತಾ ಪರಿಸರ ಅಸಮತೋಲನ ಆಗಿ ಅದರಿಂದ ಭೂಮಿ ತಾಪ ಹೆಚ್ಚುತ್ತೆ...

ಹೋ ಹೌದಾ ಇದೇನೋ ಹೊಸಾ ಸಂಗತಿ ನನಗೆ..... ಅಂದೆ.

ಆಮೇಲೆ..? ಅಂದೆ

ಈಗ ಅಲ್ಲಿ ಕಾರ್ ಪೂಲ್ ಮಾಡ್ತೀವಿ, ಇಲ್ಲ ಅಂದರೆ ಕಮ್ಯುನಿಟಿ ಬಸ್ಸಲ್ಲಿ ಓಡಾಡ್ತೀನಿ ಅಂದ.

ಅದೇನು ಕಮ್ಯುನಿಟಿ ಬಸ್ಸು?

ಅದೇ ಚಿಕಪ್ಪಾ ಇಲ್ಲಿ ಬಿ ಎಂ ಟಿ ಸಿ ಇಲ್ಲವಾ ಹಾಗೆ....

ಅದೇಕೆ ಅಷ್ಟೊಂದು ದುಡೀತೀರಾ, ಅಲ್ಯಾಕೋ ಬಿ ಎಂ ಟೀ ಸೀ.... ಅಂತ ಕೆದಕಿದೆ.

ಒಬ್ಬೊಬ್ಬರೇ ಒಂದೊಂದು ಕಾರು ಓಡಿಸಿದರೆ ಹೆಚ್ಚು ಪೆಟ್ರೋಲು ಡೀಸೆಲ್ಲು ಖರ್ಚು ಅಲ್ವಾ? ಅದಕ್ಕಿಂತ ಹೆಚ್ಚಾಗಿ ಕಾರ್ಬನ್ ಡೈಯಾಕ್ಸಿಡು ಹೆಚ್ಚು ಉಗುಳುತ್ತೆ ಅಲ್ವಾ?

ಅದು ಉಗುಳಿದರೆ ನಿಮಗೇನೋ. ಇಷ್ಟು ದಿವಸ ಅದೇನು ಅಮೃತನೋ ಅಥವಾ ಬೇರೆ ಏನೋ ಉಗುಳ್ತಿತ್ತ....

ಅಂಯ್ಯೋ ಚಿಕಪ್ಪಾ ವಾತಾವರಣದ ತಾಪಮಾನ ಹೆಚ್ ಬಿಡುತ್ತೆ ಅದರಿಂದ.....ಮುಂದುವರೆಸಿದ.

ಇನ್ನೊಂದು ಗೊತ್ತಾ, ಚಿಕಪ್ಪಾ, ಈಗ ನಾನು ಸುಮಾರು ಸೈಕಲ್ಲೇ ಉಪಯೋಗಿಸೋದು ಅಲ್ಲಿ...

ಇದ್ಯಾಕೆ? ಅಂದೆ.

ಸೈಕಲ್ಲು ಓಡಿಸಿದರೆ ಪೆಟ್ರೋಲಿನ ಬಳಕೆ ಇಲ್ಲಾ ನೋಡು, ಅದರಿಂದ ಕಾರ್ಬನ್ ಎಮಿಷನ್ ಇರೋಲ್ಲ. ಅಷ್ಟರ ಮಟ್ಟಿಗೆ ಆಕಾಶಕ್ಕೆ ಕಾರ್ಬನ್ ಸೇರೋಲ್ಲ.... ಪರವಾಗಿಲ್ಲವೋ ಮುಂಡೆದೇ ಅದೆಷ್ಟು ಜ್ಞಾನ ಸಂಪಾದಿಸಿದಿಯೋ..... ಅಂತ ಇನ್ನೂ ಪಂಪು ಹೊಡೆದೆ.

ಚಿಕಪ್ಪಾ ಇನ್ನೊಂದು ಗೊತ್ತಾ? ನಿಕೋಟಿನ್ ಬತ್ತಿಯಿಂದ ಹೊಗೆ ಬಿಡ್ತೀವಲ್ಲ ಅದೂ ವಾತಾವರಣ ಕ್ಕೆ ಒಳ್ಳೇದಲ್ಲ......

ಹೋ ಹಾಗಾ.....? ಅಂತ ಆಶ್ಚರ್ಯ ತೋರಿದೆ.

ಇನ್ನೂ ತಮಾಷೆ ಗೊತ್ತಾ? ವಾರವಾರ ಅಷ್ಟೊಂದು ರಾಶಿ ಬಟ್ಟೆ ತಗೋತ್ತಿದ್ದೆನಲ್ಲಾ ಅದು ಸ್ಟಾಪ್ ಮಾಡಿಬಿಟ್ಟೆ.. ಅಂದ.

ಈ ಸಲ ಯಾಕೆ ಅವನ ಲೇಟೆಸ್ಟ್ ಫ್ಯಾಶನ್ ಬಟ್ಟೆ ಬಂದಿಲ್ಲ ಅಂತ ಗೊತ್ತಾಯ್ತು.

ಅದು ಯಾಕಪ್ಪಾ ವಿಜೂ...... ಅಂದೆ.

ದನಿಲಿ ಹತ್ತು ಸೇರು ಹಾಲು ಸೇರಿಸಿದ್ದೆ.

ಹೆಚ್ಚೆಚ್ಚು ಬಟ್ಟೆ ತಯಾರು ಮಾಡಿದಷ್ಟೂ ಅಷ್ಟರ ಮಟ್ಟಿಗೆ ಕಾಡು ನಾಶ ಚಿಕಪ್ಪಾ. ಕಾಡು ನಾಶ ಆಗ್ತಾ ಆಗ್ತಾ ಏನಾಗುತ್ತೆ ಹೇಳು...... ಅಂದ.

ಅವನ ಮುಂದಿನ ಮಾತಿಗೆ ಕಾದೆ.

ವಾತಾವರಣದ ತಾಪ ಹೆಚ್ಚುತ್ತೆ, ಅದರಿಂದ ವಿಶ್ವ ವಿನಾಶದ ಅಂಚಿಗೆ.....

ಗೊತ್ತಾಯ್ತು ಬಿಡು...... ಅಂದೆ.

ಅದು ಸರಿ ವಿಜೀ.. ಚಿಕ್ಕಿ ನೀನು ಯಾಕೋ ಈ ಸಲ ಆ ತುಷ್ ತುಷ್ ಅನ್ನೋ ಸೆಂಟು ತಂದಿಲ್ಲ ಅಂತ ಇದ್ದಳಲ್ಲೋ....

ಹೋ ಅದಾ ಚಿಕಪ್ಪಾ? ಅದರ ಕಥೆ ನಿನಗೆ ಗೊತ್ತಿಲ್ಲ. ಸೀ ಎಫ್ ಸೀ ಅಂತ ಒಂದು ಕೆಮಿಕಲ್ಲು. ಅದನ್ನ ನಾವು ಘಮಘಮ ಅಂತಿರಲಿ ಅಂತ ಮೈಮೇಲೆ ಸುರ್ಕೋತೀವಿ. ಅದು ಆಕಾಶನ ಕಾಯ್ತಿರೋ ಓಝೋನ್ ಪರದೇನ ಕಿಂಡಿ ಮಾಡಿಬಿಡುತ್ತೆ. ಕಿಂಡಿ ಆದರೆ ಏನಾಗುತ್ತೆ ಗೊತ್ತಾ? ಎಲ್ಲರಿಗೂ ಕ್ಯಾನ್ಸರ್ ಬಂದುಬಿಡುತ್ತೆ..... ಅಂತ ಉದ್ದಕ್ಕೆ ಆ ಸೀಎಫ್ಎಲ್ ಕಥೆ ಹೇಳಿದ.

ಮೂರುಗಂಟೆ ಬಾರಿಸಿದ ಸದ್ದು ಕೇಳಿಸಿತು.

ವಿಜೀ ಅದೆಲ್ಲಾ ಸರೀನೋ. ಮೊನ್ನೆ ಎಲ್ಲೋ ಓದ್ತಾ ಇದ್ದೆ. ಪಾಪುಲೇಷನ್ ಹೆಚ್ಚಾಗೋದೂ ಸಹ ವಾತಾವರಣದ ತಾಪ ಹೆಚ್ಚಾಗಲು ಕಾರಣ ಅಂತ ಅದ್ಯಾರೋ ದೊಡ್ಡ ಲಿಬರಲ್ಲು ಹೇಳಿದ್ದ .....

ಚಿಕಪ್ಪಾ ಅದಕ್ಕೂ ಒಂದು ಐಡಿಯಾ ಮಾಡಿದೀನಿ.... ಅಂದ.

ಯಾವ ಹೊಸಾ ಐಡಿಯಾ.... ಅಂತ ಕೇಳಿದೆ ಈ ಸಲ ಬಾಯಲ್ಲಿ ಬರೇ ಅಕ್ಕರೆ ತುಂಬಿತ್ತು.

ಚಿಕಪ್ಪಾ ಹೀಗೆ ಇದ್ಬಿಡೋಣ ಅಂತ ಇದೀನಿ......ಅಂದ

ಹೀಗೇ ಅಂದರೆ ಏನು....

ಹೀಗೇ ಬ್ಯಾಚೆಲರ್ ಆಗೇ......

ಹಾ ಹಾ ಹಾ ಅಂತ ನಕ್ಕೆ.

ಅಲ್ಲೋ ಮುಂಡೇದೆ, ಅದೆಲ್ಲಾ ನಮ್ಮ ಕೈಲಿದ್ಯೇನೋ? ಬ್ರಹ್ಮ ಅಲ್ಲೇ ಒಂದನ್ನೋ ಅಥವಾ ಹೆಚ್ಚಿನದನ್ನೋ ಗಂಟು ಹಾಕಿ ಕಳಿಸಿರ್ತಾನಂತೆ.... ಅಂತ ಮತ್ತೆ ಹಾಹಾಹಾ ಮಾಡಿದೆ !

ಮುಂಡೇದು ಎಷ್ಟು ದಿವಸ ಇಲ್ಲಿರುತ್ತೋ ಕೇಳಿಕೊಂಡು ಒಂದು ಹಿಡಿಂಬೆನಾ ಗಂಟು ಹಾಕಿ ಕಳಿಸಿಬಿಡಬೇಕು ಅಂತ ಮನಸಿನಲ್ಲೇ ಡಿಸೈಡ್ ಮಾಡಿದೆ.

ಅಮ್ರಿಕಾ ಹೋಗಿದ್ದಕ್ಕೂ ಇದು ಸಖತ್ ಒಳ್ಳೇ ಬುದ್ಧಿ ಕಲಿತು ಪ್ರಪಂಚ ಉಳಿಸೋ ಕೆಲಸ ಮಾಡ್ತಿದೆಯಲ್ಲಾ ಅಂತ ಅವನ ಬಗ್ಗೆ ಹೆಮ್ಮೆ ಅನಿಸಿತು...

■

# ಪರಿಸರ ರಕ್ಷಣೆ ಅಂದ್ರೆ?

**● ಡಾ. ಶ್ಯಾಮಲಾ ರವಿಶಂಕರ್**

ಪರಿಸರಕ್ಕೋಸ್ಕರ ನಾವು ಬದಲಾಗೋಕೆ ಸಾಧ್ಯನಾ, ಇಲ್ಲ, ನಾವಿರೋದೆ ಹೀಗೆ. ಇಂದು ಯಾರೋ ಬಂದು ಏನೇನೋ ಹೇಳ್ತಾರೆ ಅಂತ ಕೇಳೋದ? ನೋ ವೇ! ಒಳ್ಳೊಳ್ಳೆ ವಿಷಯಕ್ಕೆ ಬಂದಾಗ ನಮ್ಮ ಮೆಂಟಾಲಿಟಿ ಹೀಗೇನೆ... ಅದೊಂದು ತರ ರೆಸಿಸ್ಟೆನ್ಸ್ ಟು ಚೇಂಜ್. ಅದೊಂದು ವಿಧವಾದ ಸೋಮಾರಿತನ. ಇನರ್ಷಿಯ. ಉದಾಹರಣೆಗೆ, ಆಟೋ ಚಾರ್ಜು ಜಾಸ್ತಿ ಆಯಿತು ಅಂತ ಇಟ್ಕೊಳ್ಳಿ. ಮೊದ್ಲು ಗೊಣಗಿ, ಆಮೇಲೆ ಆಟೋ ತೊಗೊಳ್ಳೋದೇ ಇಲ್ಲ, ಇನ್ಮೇಲೆ ಅಂದ್ಕೊಂಡು ಮೇಲೂ ಹೇಗೂ ತೊಗೊಂಡೇ ತೆಗೆದುಕೊಳ್ತೀವಿ. ಅತ್ಕೊಳ್ತಾ ದುಡ್ಡು ತೆತ್ತು ಬರ್ತೀವಿ. ನಾಲ್ಕಾರು ದಿನ ಆದ್ಮೇಲೆ ಅದೇ ಅಭ್ಯಾಸ ಆಗತ್ತೆ. ಮುಂದಿನ ಬಾರಿ ಬೆಲೆ ಏರೋವರ್ಗೂ. ಹಾಗೆ ನೋಡಿದ್ರೆ ಹೊಸ ಟ್ರ್ಯಾಫಿಕ್ ರೂಲ್ಸ್‌ಗೆ ಹೊಂದು ಕೊಳ್ಳದೇ ಇದ್ರೆ ಆಗೋ ಪಾಡೆ ಬೇರೆ.

ಈ ತರ ಇರೋವಾಗ ಮೊದಲಿಂದ ಬೇಕಾದ್ದನ್ನೋ ಬೇಡದ್ದನ್ನೋ ಇಷ್ಟಬಂದ ಹಾಗೆ ಎಲ್ಲಂದ್ರೆ ಅಲ್ಲಿ ಬಿಸಾಡೋ ಜನರಿಗೆ ಪರಿಸರ ಸ್ವಚ್ಛವಾಗಿಡಿ ಅಂದ್ರೆ ಅದು ಜಾರಿಗೆ ಬರೋದು ಎಷ್ಟು ಕಷ್ಟ? ಈಗಷ್ಟೇ ದೀಪಾವಳಿ ಕಳೆದಿದೆ, ಪಟಾಕಿ ಹೊಡೆದವರೆಲ್ಲ ಬಹಳ ತಿಳುವಳಿಕೆಯುಳ್ಳವರೇ, ಬಿಸಿನೆಸ್ಸ್‌ವರು. ಮಾಮೂಲು ಹುಲುಮಾನವರು ದುಡ್ಡು ಉಳಿಯತ್ತೆ ಅಂತಲೋ ಪರಿಸರ ಕಾಳಜಿ ಇಂದಲೋ ಪಟಾಕಿ ಸುದ್ದಿಗೆ ಹೋಗಿಲ್ಲ. ಅಂದ್ರೆ ತಿಳಿದವರೇ ಹೀಗೆ ಮಾಡಿದರೆ? ಇವರೆಲ್ಲ ಹೇಳಿದರೆ ಕೇಳುವಂಥವರ? ಏನೇ ಇರಲಿ. ಸ್ವಲ್ಪ ಮಟ್ಟಿಗಾದರೂ ಬದಲಾವಣೆ ಆಯಿತಲ್ಲ!

ಈಗ ಇನ್ನೊಂದು ಉದಾಹರಣೆ: ಒಂದು ಖಾಲಿ ಸೈಟು ಇದೆ ಅಂತ ಇಟ್ಕೊಳ್ಳಿ. ಅದು ಎಲ್ಲರ ಸೊತ್ತಾಗತ್ತೆ. ಹೇಗೆ ಅಂದ್ರೆ, ಅಲ್ಲಿ ಹುಲ್ಲು, ಗಿಡ, ಯಾಕೇ? ಮರಗಳೇ ಬೆಳೆಕೊಳ್ಳತ್ತ್ವೆ. ಅದನ್ನ ಮೇಯೋಕೆ ಹಸು, ಎಮ್ಮೆ, ಆಗಾಗ ಮೇಕೆ ಎಲ್ಲ ಬರತ್ತ್ವೆ ಅವು ಹಾಗೆ ಹೀಗೆ ಅಡ್ಡಾಡಿ ಮಕ್ಕಳಿಗೆ, ಮುದುಕರಿಗೆ ಹಾಗೂ ದ್ವಿಚಕ್ರ ವಾಹನಗಳಿಗೆ ಅಪಾಯ ತರುತ್ತವೆ. ಮತ್ತೊಂದು ವಿಷಯ, ಅದೊಂದು ಫ್ರೀ ಫಾರ್ ಆಲ್ ಡಂಪ್ ಯಾರ್ಡ್ ಆಗಿ ನಾಳೆ ವೃದ್ಧಿ ಹೊಂದಿ ಮಂಡೂರನ್ನೂ ಮೀರಿಸುವ ಶಕ್ತಿ ಹೊಂದುತ್ತದೆ. ನಮ್ಮ ಮನೆಯ ಪಕ್ಕದಲ್ಲಿ ಮೂರು ಖಾಲಿ ಸೈಟುಗಳು ಇರೋದ್ರಿಂದ ನನಗೆ ಇದನ್ನ ಕೂಲಂಕುಷವಾಗಿ ನಿಗಾ ಇಡುವ ಅವಕಾಶ ಇದೆ. ಇಲ್ಲಿ ಕಸ ಹಾಕುವವರು ಎರಡು ಬಗೆ. ಒಂದು, ಹಳೇ ಗುಡಿಸಲ ಹೊಸ ನಿವಾಸಿಗಳು. ಇವರು ಆ ಕಸಾನ ಸುಟ್ಟು ಭೂಮಿ ಹಾಗೂ ಹವಾ ಮಾಲಿನ್ಯ ಎರಡನ್ನೂ ಒಮ್ಮೆಗೇ ಸಾಧಿಸುವವರು. ಇನ್ನೊಂದು ಬಗೆಯವರು, ದೊಡ್ಡ ದೊಡ್ಡ ಸ್ವಾಂಕೀ ಕಾರುಗಳಲ್ಲಿ ನಸುಕಿನಲ್ಲಿ ಬಂದಿಳಿದು ಸದ್ದಿಲ್ಲದೆ ಗೋಣಿ ಚೀಲಗಳನ್ನ ಡಿಕ್ಕಿಯಿಂದ ಹೊರತೆಗೆದು ಬಿಸುಟು ಬಂದ ದಾರಿಗೆ ಸುಂಕವಿಲ್ಲ ಎಂದು ನಿಶ್ಶಬ್ದವಾಗಿ ತೆರಳುವವರು. ನಾನು ನಮ್ಮ ಅಸೊಸಿಯೆಶನ್ನ್‌ಗೆ ಹೇಳಿದಾಗ ಆ ಕಾರಿನ ಫೋಟೋ ಹಿಡಿಯಲು ಹೇಳಿದರು. ಈ ಅವಕಾಶಕ್ಕಾಗಿ ಕಾದಿದ್ದ ನಾನು ಮುಂದೊಂದು ದಿನ ಆ ಪಯತ್ನಕ್ಕೆ ತೊಡಗಿದೆ. ನಾನು ಕಾರಿನ ಮುಂದೆ ನಿಲ್ಲುತ್ತಿದ್ದ ಹಾಗೆ ಆ ಡ್ರೈವರ್ ಮಹಾಶಯ ಹೆಡ್ ಲೈಟ್ಸ್ ಆಫ್ ಮಾಡಿ ಗಾಡಿನ ರಿವರ್ಸ್ ಮಾಡಿ, ನನ್ನ ಮುಖಕ್ಕೆ ಮಣ್ಣಲ್ಲ, ಧೂಳೆರಚಿ ಮಾಯವಾದರು! ಹೀಗೆ ವೃದ್ಧಿಯಾಗುತ್ತಿರುವ ಮಾಲಿನ್ಯಕ್ಕೆ ಕೊನೆ ಇದೆಯೇ? ಈ ಬದಲಾವಣೆ ಸಾಧ್ಯವೇ ಎನ್ನುವ ಪ್ರಶ್ನೆ ಬಂದಾಗ, ಬದಲಾಗುವುದೇ ಸಮಾಜದ ಲಕ್ಷಣವಾದ್ದರಿಂದ. ಒಂದಲ್ಲ ಒಂದು ದಿನ ಬದಲಾಗೇ ಆಗುತ್ತದೆ ಎನ್ನುವ ಆಶಾ ಭಾವ ನನ್ನಲ್ಲಿ ಇದೆ. ಅದಕ್ಕಾಗಿ ಕಾಯೋಣ. ■

TEMPLE OF KNOWLEDGE

# BEECHI VIDYA KENDRA

Email: admin@beechi.in
Web: www.beechi.in
Mob: 9740968677, 9035302302, 9035007003

PLACEMENT SERVICES FOR:

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

**Civil Contractors for Complete Construction Activities**

Mob: 9740968677

Published on 3rd of every month
Mailed on 5th of every month
Mailed at: Bangalore P.S.O. 560026

Registered - KA / BGW - 544 / 2018 - 2020
**RNI - KAR-KAN / 2005 / 15457**

Printed by: V.R. NATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55 Editor : M. SHIVAKUMAR
No. of Pages: **52+4** APARANJI KANNADA MONTHLY.